ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2074
ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)
ಉತ್ತರಿಸುವವರು : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.
ಉತ್ತರಿಸಬೇಕಾದ ದಿನಾಂಕ : 24-03-2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2020-21ನೇ ಸಾಲಿನ ಆಯವ್ಯಯದಲ್ಲಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಜ್ಯದಲ್ಲಿ ಹೊಸದಾಗಿ ಏಳು ಬಾಲಮಂದಿರಗಳನ್ನು ಸ್ಥಾಪನೆ ಮಾಡುವ ಸಲುವಾಗಿ ಪ್ರಸ್ತುತ ಸಾಲಿನಲ್ಲಿ ರೂ.5.67 ಕೋಟಿ ಅನುದಾನ ಒದಗಿಸಿದ್ದು, ಇದು ಕಾರ್ಯಗತವಾಗಿದೆಯೇ; (ಮಾಹಿತಿ ನೀಡುವುದು)	ಸರ್ಕಾರಿ ಆದೇಶ ಸಂಖ್ಯೆ:ಮಮಇ 152 ಮಭಾಬ ದಿನಾಂಕ:21-10-2020ರಲ್ಲಿ ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ರಾಜ್ಯದಲ್ಲಿ ಹೊಸದಾಗಿ ಏಳು ಬಾಲಮಂದಿರಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಅನುದಾನವನ್ನು ಸಹ ಬಿಡುಗಡೆ ಮಾಡಲಾಗಿರುತ್ತದೆ. ಬಾಲಮಂದಿರಗಳ ಪ್ರಾರಂಭಕ್ಕೆ ಅವಶ್ಯವಿರುವ ಹುದ್ದೆಗಳ ಸೃಜನೆಯು ಆಗಬೇಕಾಗಿರುತ್ತದೆ. ಹುದ್ದೆಗಳ ಸೃಜನೆಯ ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದು ಹುದ್ದೆಗಳ ಸೃಜನೆಯ ನಂತರ ಬಾಲಮಂದಿರಗಳ ಸ್ಥಾಪನೆಗೆ ಚಾಲನೆ ನೀಡಲಾಗುವುದು.
ಆ)	ಕಾರ್ಯಗತವಾದಲ್ಲಿ ಇದುವರೆಗೆ ಎಷ್ಟು ಬಾಲಮಂದಿರಗಳನ್ನು ಸ್ಥಾಪನೆ ಮಾಡಲಾಗಿದೆ; ಇಲ್ಲವಾದಲ್ಲಿ, ಯಾವ ಕಾಲಮಿತಿಯಲ್ಲಿ ಬಾಲಮಂದಿರಗಳನ್ನು ಪ್ರಾರಂಭಿಸಲಾಗುವುದು; ವಿಳಂಬಕ್ಕೆ ಕಾರಣವೇನು? (ಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ: ಮಮಇ 40 ಮಭಾಬ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2076

ಸದಸ್ಯರ ಹೆಸರು : ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಖಾನಾಪೂರ ವಿಧಾನಸಭಾ ಕ್ಷೇತ್ರದ ಲೋಂಡಾ ಮತ್ತು ಹಲಶಿ ಬಸ್ ನಿಲ್ದಾಣಗಳಿಗೆ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕಾದ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ, ಸದರಿ ಬಸ್ ನಿಲ್ದಾಣಗಳ ಅಭಿವೃದ್ಧಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಹಂಚಿಕೆ ಮಾಡಲಾದ ಅನುದಾನವೆಷ್ಟು?	ಹಲಶಿ ಮತ್ತು ಲೋಂಡಾ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ವಾ.ಕ.ರ.ಸಾ.ಸಂಸ್ಥೆಯ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಮುಂದಿನ ಆರ್ಥಿಕ ವರ್ಷದ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗುವುದು.

ಸಂಖ್ಯೆ: ಟಿಡಿ 141 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2078

ಸದಸ್ಯರ ಹೆಸರು : ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಖಾನಾಪೂರ ಪಟ್ಟಣದ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸಿ, ಅಗತ್ಯ ಮೂಲ ಸೌಕರ್ಯಗಳನ್ನೊದಗಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಬೆಳಗಾವಿ ಜಿಲ್ಲೆ ಖಾನಾಪೂರ ಪಟ್ಟಣದ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸಿ, ಅಗತ್ಯ ಮೂಲ ಸೌಕರ್ಯಗಳನ್ನೊದಗಿಸುವ ಪ್ರಸ್ತಾವನೆಯು ವಾ.ಕ.ರ.ಸಾ.ಸಂಸ್ಥೆಯ ಮುಂದಿದೆ.
ಆ)	ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ;	ಖಾನಾಪೂರದಲ್ಲಿ ಬಸ್ ನಿಲ್ದಾಣ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ನಗರ ಭೂಸಾರಿಗೆ ನಿರ್ದೇಶನಾಲಯದ ಶೇಕಡ 50ರಷ್ಟು ಹಣಕಾಸಿನ ಸಹಯೋಗದೊಂದಿಗೆ ಕೈಗೊಳ್ಳಲು ಉದ್ದೇಶಿಸಲಾಗಿದೆ. ಪ್ರಸ್ತುತ ಸಂಸ್ಥೆಯ ತೀವ್ರ ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿರುವುದರಿಂದ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸಂಸ್ಥೆಯಿಂದ ಭರಿಸಬೇಕಾದ ಇನ್ನುಳಿದ ಶೇಕಡ 50ರಷ್ಟು ಮೊತ್ತಕ್ಕಾಗಿ ಆರ್ಥಿಕ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಪ್ರಯತ್ನಿಸಲಾಗುತ್ತಿದೆ.
ಇ)	ಸದರಿ ಬಸ್ ನಿಲ್ದಾಣವನ್ನು ಶೀಘ್ರವಾಗಿ ಅಭಿವೃದ್ಧಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?	

ಸಂಖ್ಯೆ: ಟಿಡಿ 142 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2079
ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)
ಉತ್ತರಿಸಬೇಕಾದ ದಿನಾಂಕ	:	24.03.2021
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಒಂದು ಕಾಲು ಅಥವಾ ಒಂದು ಕೈಯನ್ನು ಕಳೆದುಕೊಂಡಿರುವವರಿಗೆ ಶೇ.75 ಅಂಗವಿಕಲ ಪ್ರಮಾಣ ಪತ್ರ ನೀಡುವ ಬಗ್ಗೆ ಸರ್ಕಾರದ ನಿಲುವೇನು?	ಅಂಗವಿಕಲರಿಗೆ ಅಂಗವಿಕಲತೆಯ ಪ್ರಮಾಣವನ್ನು ನಿಗದಿ ಪಡಿಸಲು ಕೇಂದ್ರ ಸರ್ಕಾರದ ಅಧಿಸೂಚನೆ ದಿನಾಂಕ:4.01.2018ರಲ್ಲಿ ಹೊರಡಿಸಿರುವ ಮಾರ್ಗಸೂಚಿಯನ್ವಯ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ವೈದ್ಯಕೀಯ ಪ್ರಾಧಿಕಾರದಡಿ ಅಂಗವಿಕಲತೆಯ ಪ್ರಮಾಣವನ್ನು ಆಧರಿಸಿ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ.
ಆ)	ಸರ್ಕಾರದ ಕೆಲವು ಯೋಜನೆಗಳಡಿ ಸವಲತ್ತು ಪಡೆಯಲು ಶೇ.75 ಅಂಗವಿಕಲತೆ ಇರಬೇಕಾಗಿರುವುದರಿಂದ ಅವರು ಕೆಲಸ ಮಾಡಲು ಸಂಪೂರ್ಣ ಅಶಕ್ತರಾಗಿದ್ದರೂ ಸರ್ಕಾರದ ಸವಲತ್ತು ಪಡೆಯಲು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ತೀವ್ರತರನಾದ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಮತ್ತು ಪ್ರಸ್ತುತ ನೀಡುತ್ತಿರುವ ರೂ.1400/-ಗಳ ಮಾಸಿಕ ಪೋಷಣಾ ಭತ್ಯೆ ಪಡೆಯಲು ಮಾತ್ರ ಶೇ.75 ರಷ್ಟು ಅಂಗವಿಕಲತೆಯ ಪ್ರಮಾಣ ಪತ್ರವನ್ನು ನಿಗದಿಪಡಿಸಲಾಗಿರುತ್ತದೆ. ಉಳಿದಂತೆ ವೈದ್ಯಕೀಯ ಪ್ರಾಧಿಕಾರದ ಮೂಲಕ ನೀಡಲಾಗುವ ಅಂಗವಿಕಲತೆಯ ಪ್ರಮಾಣ ಪತ್ರವನ್ನು ಆಧರಿಸಿ ಆಯಾ ಯೋಜನೆಗಳ ಮಾರ್ಗಸೂಚಿಯನುಸಾರ ಸವಲತ್ತುಗಳನ್ನು ನೀಡಲಾಗುತ್ತಿದೆ. ಅವರು ಕೆಲಸ ಮಾಡಲು ಸಂಪೂರ್ಣ ಅಶಕ್ತರಾದರೂ ಸರ್ಕಾರದ ಸವಲತ್ತು ಪಡೆಯಲು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಇ)	ಹಾಗಾದಲ್ಲಿ, ಈ ಬಗ್ಗೆ ಸರ್ಕಾರ ಸೂಕ್ತ ಕ್ರಮವಹಿಸುವುದೇ?	ಅನ್ವಯಿಸುವುದಿಲ್ಲ.

ಸಂಖ್ಯೆ: ಮಮಇ 93 ಪಿಹೆಚ್‌ಪಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಲಿಂಗೇಶ, ಕೆ.ಎಸ್. (ಬೇಲೂರು)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	:	2911
ಉತ್ತರ ದಿನಾಂಕ	:	24.03.2021

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಯಗಚಿ ಹಾಗೂ ವಾಟೆಹೊಳೆ ಜಲಾಶಯ ಯೋಜನೆಯಿಂದ ಬೇಲೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 476 ಗ್ರಾಮಗಳಿಗೆ ಜಲಧಾರೆ/ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಪೈಪ್‌ಲೈನ್ ಮೂಲಕ ನೀರು ಸರಬರಾಜು ಮಾಡುವ ಕಾಮಗಾರಿಗೆ ಅಂದಾಜು ಪಟ್ಟಿ ತಯಾರಿಸಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಯಗಚಿ ಹಾಗೂ ವಾಟೆಹೊಳೆ ಜಲಾಶಯ ಯೋಜನೆಯಿಂದ ಬೇಲೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 476 ಗ್ರಾಮಗಳಿಗೆ ಜಲಧಾರೆ/ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಪ್ರಾಥಮಿಕ ಯೋಜನಾ ವರದಿಯು ಜಲ ಜೀವನ್ ಮಿಷನ್ ಮಾರ್ಗಸೂಚಿಯನ್ವಯ ಪರಿಷ್ಕರಿಸಬೇಕಾಗಿರುತ್ತದೆ. ಜಲ ಜೀವನ್ ಮಿಷನ್ ಯೋಜನೆಯಡಿ ಹೊಸ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಿಂದ 55LPCDಯಂತೆ ಕಾರ್ಯಾತ್ಮಕ ನಳ ನೀರು ಸಂಪರ್ಕ ನೀಡಲು 2021-22 ಮತ್ತು 2022-23ನೇ ಸಾಲಿನ ಕ್ರಿಯಾಯೋಜನೆಯು ಸರ್ಕಾರದಲ್ಲಿ ಪರಿಶೀಲನೆ ಹಂತದಲ್ಲಿದ್ದು, ಅನುದಾನ ಲಭ್ಯತೆಗನುಗುಣವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮಕೈಗೊಳ್ಳಲಾಗುವುದು.
ಆ)	ಬಂದಿದ್ದಲ್ಲಿ ಯಾವಾಗ ಅಂದಾಜು ಪಟ್ಟಿಯನ್ನು ತಯಾರಿಸಿ ಅನುದಾನ ಬಿಡುಗಡೆ ಮಾಡಿ, ಯಾವ ಕಾಲಮಿತಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು (ಸಂಪೂರ್ಣ ವಿವರ ನೀಡುವುದು)	

ಸಂ:ಗ್ರಾಕುನೀ&ನೈಇ 117 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

1)	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2916
2)	ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
3)	ಉತ್ತರಿಸಬೇಕಾದ ದಿನಾಂಕ	:	24.03.2021
4)	ಉತ್ತರಿಸುವವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕಿತ್ತೂರು ಕೈಗಾರಿಕಾ ಪ್ರದೇಶದ ವ್ಯಾಪ್ತಿಯಲ್ಲಿ "ರೈಲ್ವೆ ಪ್ಯಾಕಿಂಗ್ ಪಾರ್ಕ್" (ಗೂಡ್ಸ್ ಶೆಡ್) ನಿರ್ಮಾಣಕ್ಕೆ ಸ್ಥಳ ಪರಿಶೀಲಿಸಿ, ಈ ಯೋಜನೆ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಈ ಕುರಿತು ಯಾವುದೇ ಪ್ರಸ್ತಾವನೆಯು ರೈಲ್ವೆ ಇಲಾಖೆಯಿಂದ ಸ್ವೀಕೃತವಾಗಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಈ ಯೋಜನೆಯನ್ನು ಕಿತ್ತೂರು ನಾಡಿನಲ್ಲಿ ಪ್ರಾರಂಭಿಸಲು ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯೊಂದಿಗೆ ಚರ್ಚಿಸಿ, ಕೂಡಲೇ ಕೈಗೆತ್ತಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮವೇನು?	ಉದ್ಭವಿಸುವುದಿಲ್ಲ.

ಸಂಖ್ಯೆ: ಮೂಅಇ 70 ರಾರಾಹೆ 2021/ಇ

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ.ಅಜಯ್ ಧರ್ಮಸಿಂಗ್ ಡಾ॥ (ಜೇವರ್ಗಿ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 2933
ಉತ್ತರ ದಿನಾಂಕ : 24.03.2021

<table>
<tr><th>ಕ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ನೆರೆ ರಾಜ್ಯ ತೆಲಂಗಾಣದಲ್ಲಿ ಸರ್ಕಾರಿ ಶಾಲೆಗಳು ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಲು ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿನ ಅನುದಾನ ಬಳಸಿ ನಿರ್ದಿಷ್ಟ ಕಾಲಮಿತಿಯಲ್ಲಿ ಶೇ.100ರಷ್ಟು ಗುರಿ ಸಾಧಿಸಿರುವಂತೆ ರಾಜ್ಯದಲ್ಲೂ ಈ ಯೋಜನೆಯನ್ನು ಅಳವಡಿಸಿಕೊಳ್ಳಲು ಸರ್ಕಾರ ಯೋಚಿಸಿದೆಯೇ;</td><td>ಕೇಂದ್ರ ಸರ್ಕಾರದ ಜೆ.ಜೆ.ಎಂ. ಯೋಜನೆಯಡಿ 100 ದಿನಗಳ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದ್ದು, ಅದರನ್ವಯ ರಾಜ್ಯದ ಗ್ರಾಮೀಣ ಪ್ರದೇಶದ ಎಲ್ಲಾ ಶಾಲೆ ಅಂಗನವಾಡಿ ಮತ್ತು ಆಶ್ರಮ ಶಾಲೆಗಳಿಗೆ ನಳದ ಮೂಲಕ ಕುಡಿಯುವ ನೀರು, ಶೌಚಾಲಯಕ್ಕೆ ನೀರು, ಅಡಿಗೆ ಮನೆಗೆ ನೀರು ಮತ್ತು ಕೈತೊಳೆಯುವ ಸ್ಥಳಗಳಿಗೆ ನೀರು ಒದಗಿಸುವ ಕಾಮಗಾರಿಗಳು ಪ್ರಗತಿಯಲ್ಲಿದ್ದು,. ಪ್ರಗತಿಯ ವಿವರಗಳು ಕೆಳಕಂಡಂತಿವೆ:–
<table>
<tr><th>ವಿವರ</th><th>ಒಟ್ಟು ಸಂಖ್ಯೆ</th><th>ಶೌಚಾಲಯ / ಅಡುಗೆ ಮನೆಗಳಲ್ಲಿ ನಳನೀರು ಸಂಪರ್ಕ ಇಲ್ಲದ ಸಂಖ್ಯೆ</th><th>ಶೌಚಾಲಯ / ಅಡುಗೆ ಮನೆಗಳಲ್ಲಿ ನಳನೀರು ಸಂಪರ್ಕ ಒದಗಿಸಿದ ಸಂಖ್ಯೆ</th></tr>
<tr><td>ಸರ್ಕಾರಿ ಶಾಲೆಗಳು</td><td>42782</td><td>18494</td><td>14072</td></tr>
<tr><td>ಅಂಗನವಾಡಿ</td><td>53901</td><td>33328</td><td>25894</td></tr>
</table>
ಬಾಕಿ ಕಾಮಗಾರಿಗಳನ್ನು 2021 ಮಾರ್ಚ್ ತಿಂಗಳ ಅಂತ್ಯದೊಳಗೆ ಶೇ.100ರಷ್ಟು ಪೂರ್ಣಗೊಳಿಸಿ ಪ್ರಗತಿ ಸಾಧಿಸಲು ಉದ್ದೇಶಿಸಿದೆ.</td></tr>
<tr><td>(ಆ)</td><td>ಹಾಗಿದ್ದಲ್ಲಿ, ಸದರಿ ಯೋಜನೆ ಬಗ್ಗೆ ಸರ್ಕಾರವು ನೆರೆ ರಾಜ್ಯದಿಂದ ಮಾಹಿತಿಯನ್ನು ಸಂಗ್ರಹಿಸಿದೆಯೇ;</td><td>ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆಯ ಮಾರ್ಗಸೂಚಿಯಂತೆ ಕಾಮಗಾರಿಗಳು ಪ್ರಗತಿಯಲ್ಲಿದೆ.</td></tr>
<tr><td>(ಇ)</td><td>ಹಾಗಿದ್ದಲ್ಲಿ, ರಾಜ್ಯದಲ್ಲೂ ಜಲ ಜೀವನ್ ಮಿಷನ್ ಯೋಜನೆಯಡಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಸರ್ಕಾರದ ನಿಲುವೇನು?</td><td>ಜಲ ಜೀವನ್ ಮಿಷನ್ ಯೋಜನೆಯಡಿ ಗ್ರಾಮೀಣ ಭಾಗದ ಪ್ರತಿ ಮನೆಗೆ 55LPCDಯಂತೆ ಕಾರ್ಯಾತ್ಮಕ ನಳ ನೀರು ಸಂಪರ್ಕದ ಮೂಲಕ ಗುಣಮಟ್ಟದ ನೀರನ್ನು ಒದಗಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈಗಾಗಲೇ ಯೋಜನೆಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಲ್ಲಾ ಕಾಮಗಾರಿಗಳನ್ನು ಜಲಮೂಲದ ಸುಸ್ಥಿರತೆ, ತಾಂತ್ರಿಕ ಮತ್ತು ಆರ್ಥಿಕ ಕಾರ್ಯಸ್ಥಿರತೆ ಮತ್ತು ಅನುದಾನದ ಲಭ್ಯತೆಗೆ ಅನುಗುಣವಾಗಿ ಕೈಗೆತ್ತಿಕೊಳ್ಳಲಾಗುವುದು ಹಾಗೂ ಸದರಿ ಯೋಜನೆಯನ್ನು 2023ನೇ ಸಾಲಿನಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.</td></tr>
</table>

ಸಂ:ಗ್ರಾಕುನೀ&ನೈಇ 118 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2939
ಸದಸ್ಯರ ಹೆಸರು	:	ಶ್ರೀ ಯತೀಂದ್ರ ಸಿದ್ದರಾಮಯ್ಯ ಡಾ॥ (ವರುಣ)
ಉತ್ತರಿಸುವ ದಿನಾಂಕ	:	24-03-2021.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಗ್ರಾಮಠಾಣಾ ವ್ಯಾಪ್ತಿಯ ಆಸ್ತಿಗಳಿಗೆ ಇ-ಖಾತಾ ವ್ಯವಸ್ಥೆಯಲ್ಲಿ ದಿನಾಂಕ:14.06.2013 ರವರೆಗೆ ಲಭ್ಯವಿರುವ ದಾಖಲಾತಿಗಳ ಮೇಲೆ ಇ-ಸ್ವತ್ತಿನ ಪಂಚತಂತ್ರದಲ್ಲಿ ಖಾತಾ ಮಾಡಲು ಅವಕಾಶ ಕಲ್ಪಿಸಲಾಗಿದ್ದರೂ ಬಹಳಷ್ಟು ಜನರಿಗೆ ಇದರ ಬಗ್ಗೆ ತಿಳುವಳಿಕೆ ಇಲ್ಲದ ಕಾರಣ ಖಾತೆ ಆಗದಿರುವುದರಿಂದ ಗ್ರಾಮೀಣ ಭಾಗದ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ)	ಬಂದಿದ್ದಲ್ಲಿ, ಗ್ರಾಮ ಪಂಚಾಯಿತಿಯಲ್ಲಿ ಈ ರೀತಿ ಕೈ ಬಿಟ್ಟು ಹೋಗಿರುವ ಆಸ್ತಿಗಳನ್ನು ದಾಖಲಿಸಲು ಮತ್ತೊಮ್ಮೆ ಕಾಲಾವಕಾಶ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ ಕಾಲಾವಕಾಶ ಕಲ್ಪಿಸಲಾಗುವುದು? (ವಿವರ ನೀಡುವುದು)	ಗ್ರಾಮ ಪಂಚಾಯಿತಿಯಲ್ಲಿ ಪಂಚತಂತ್ರ ತಂತ್ರಾಂಶದಲ್ಲಿ ದಾಖಲಿಸದೆ ಕೈ ಬಿಟ್ಟು ಹೋಗಿರುವ ಆಸ್ತಿಗಳನ್ನು ದಾಖಲಿಸಲು ಮತ್ತೊಮ್ಮೆ ಕಾಲಾವಕಾಶ ನೀಡುವ ಉದ್ದೇಶ ಇಲ್ಲ. ಆದಾಗ್ಯೂ ದಿನಾಂಕ:14-06-2013 ರ ಪೂರ್ವದಲ್ಲಿ ಸೃಷ್ಟಿಯಾದ ಗ್ರಾಮ ಪಂಚಾಯತಿ ಡಿ.ಸಿ.ಬಿ. ವಹಿಯಲ್ಲಿ ನಮೂದಾದ ನಿಯಮಾನುಸಾರ ಇರುವ ಆಸ್ತಿಗಳನ್ನು ಪಂಚತಂತ್ರ ತಂತ್ರಾಂಶದಲ್ಲಿ ಇದುವರೆವಿಗೂ ನಮೂದಿಸದೆ ಇದ್ದಲ್ಲಿ ನಿಯಮಾನುಸಾರ ಇರುವ ಆಸ್ತಿಗಳನ್ನು ಇ-ಸ್ವತ್ತು ತಂತ್ರಾಂಶದಲ್ಲಿ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ.

ಸಂ. ಗ್ರಾಅಪ 158 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2943

ಸದಸ್ಯರ ಹೆಸರು : ಡಾ॥ ಯತೀಂದ್ರ ಸಿದ್ದರಾಮಯ್ಯ

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಮೈಸೂರು ಜಿಲ್ಲೆಯಲ್ಲಿ ವರುಣ ವಿಧಾನ ಸಭಾ ಕ್ಷೇತ್ರಕ್ಕೆ ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆ ವಿಭಾಗದಿಂದ ರೈತರುಗಳ, ಕೂಲಿ ಕಾರ್ಮಿಕರ, ವಿದ್ಯಾರ್ಥಿಗಳ ಅನುಕೂಲಕ್ಕೆ ಬಸ್‌ಗಳು ಸರಿಯಾದ ಸಮಯಕ್ಕೆ ಸಂಚರಿಸದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ಯಾವ ಕ್ರಮ ತೆಗೆದುಕೊಳ್ಳಲಾಗಿದೆ;	ಮೈಸೂರು ಜಿಲ್ಲೆಯ ವರುಣ ವಿಧಾನ ಸಭಾ ಕ್ಷೇತ್ರದ ನಗರ ಭಾಗದಲ್ಲಿ 25 ಅನುಸೂಚಿಗಳಿಂದ 483 ಸುತ್ತುವಳಿಗಳನ್ನು ಹಾಗೂ ಗ್ರಾಮಾಂತರ ಭಾಗದಲ್ಲಿ 98 ಅನುಸೂಚಿಗಳಿಂದ 428 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಒದಗಿಸಿರುವ ಸಾರಿಗೆ ಸೌಲಭ್ಯವು ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿರುತ್ತದೆ.
ಆ)	ವರುಣ ವಿಧಾನ ಸಭಾ ಕ್ಷೇತ್ರದ ಗ್ರಾಮೀಣ ಭಾಗಗಳಿಗೆ ಸಂಚರಿಸಲು ಬಸ್‌ಗಳ ಕೊರತೆ ಇದೆಯೇ; ಇದ್ದಲ್ಲಿ, ಕೊರತೆ ನೀಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?	ಪ್ರಸ್ತುತ ಕೋವಿಡ್-19ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ವಿರಳ ಜನಸಂದಣಿ ಇರುವುದರಿಂದ ಹಾಗೂ ಇನ್ನೂ ಹಲವಾರು ಶಾಲೆಗಳು ಪ್ರಾರಂಭವಾಗದಿರುವುದರಿಂದ, ಪ್ರಯಾಣಿಕರ ಲಭ್ಯತೆಗೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳು ಇದರ ಉಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.

ಸಂಖ್ಯೆ: ಟಿಡಿ 148 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 2945

ಉತ್ತರ ದಿನಾಂಕ : 24.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2018-19ನೇ ಸಾಲಿನ ಬಜೆಟ್‌ನಲ್ಲಿ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗುಂಜಳ್ಳಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಘೋಷಣೆಯಾಗಿದ್ದು, ಇಲ್ಲಿಯವರೆಗೆ ಕಾಮಗಾರಿ ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗುಂಜಳ್ಳಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯು 2018-19ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆ ಆಗಿರುವುದಿಲ್ಲ. ಆದಾಗ್ಯೂ ಸದರಿ ಯೋಜನೆಗೆ ದಿನಾಂಕ:15.10.2009ರಂದು ರೂ.583.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ದಿನಾಂಕ:20.01.2011ರಂದು ರೂ.583.00ಲಕ್ಷಗಳಿಗೆ ತಾಂತ್ರಿಕ ಅನುಮೋದನೆ ದೊರೆತಿದ್ದು, ದಿನಾಂಕ:02.03.2012ರಂದು ರೂ.511.19ಲಕ್ಷಗಳಿಗೆ ಟೆಂಡರ್ ಅನುಮೋದಿಸಲಾಗಿದ್ದು, ದಿನಾಂಕ:17.06.2012ರಂದು ಕಾಮಗಾರಿ ಪ್ರಾರಂಭವಾಗಿದ್ದು, ದಿನಾಂಕ:07.08.2015ರಂದು ಪೂರ್ಣಗೊಂಡಿರುತ್ತದೆ. ಸದರಿ ಯೋಜನೆಗೆ ಒಳಪಡುವ ಎಲ್ಲಾ 9 ಗ್ರಾಮಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಹಾಗೂ ಯೋಜನೆಯು ಪ್ರಸ್ತುತ ವಾರ್ಷಿಕ ಕಾರ್ಯಚರಣೆ ಮತ್ತು ನಿರ್ವಹಣೆ (ಓ&ಎಮ್) ಹಂತದಲ್ಲಿರುತ್ತದೆ.
ಆ)	ಬಂದಿದ್ದರೆ, ಕಾಮಗಾರಿ ಪ್ರಾರಂಭಿಸದೇ ಇರುವುದಕ್ಕೆ ಕಾರಣವೇನು; ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು)	
ಇ)	ಗುಂಜಳ್ಳಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಪ್ರಾರಂಭ ಮಾಡುವ ಇಚ್ಛಾಶಕ್ತಿ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು; ಸದರಿ ಯೋಜನೆಯನ್ನು ಯಾವಾಗ ಮುಕ್ತಾಯ ಗೊಳಿಸಲಾಗುವುದು (ಸಂಪೂರ್ಣ ವಿವರವನ್ನು ನೀಡುವುದು)	
ಈ)	2021-22ನೇ ಸಾಲಿನಲ್ಲಿ ಸದರಿ ಯೋಜನೆಗೆ ಎಷ್ಟು ಹಣ ಮೀಸಲಿಡಲಾಗುವುದು? (ವಿವರ ನೀಡುವುದು)	

ಸಂ:ಗ್ರಾಕುನೀ&ನೈಇ 119 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2947

ಸದಸ್ಯರ ಹೆಸರು : ಶ್ರೀ ನಿಂಬಣ್ಣವರ್ ಸಿ. ಎಂ.

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ ಸಂ.	ಪ್ರಶ್ನೆ	ಉತ್ತರ
ಅ	ಕಲಘಟಗಿ ತಾಲ್ಲೂಕಿನಲ್ಲಿ ನೂತನವಾಗಿ ಬಸ್ ಘಟಕ ಪ್ರಾರಂಭಗೊಂಡಿದ್ದರೂ ಸಾರಿಗೆ ವ್ಯವಸ್ಥೆಯಲ್ಲಿ ಸಾರ್ವಜನಿಕರಿಗೆ ಹಾಗೂ ಶಾಲಾ ಮಕ್ಕಳಿಗೆ ಅನಾನುಕೂಲ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ. ಕಲಘಟಗಿ ಘಟಕವು ದಿನಾಂಕ: 23-01-2021ರಿಂದ ಕಾರ್ಯಾರಂಭವಾಗಿದ್ದು, ಪ್ರಸ್ತುತ 40 ಅನುಸೂಚಿಗಳು ಕಾರ್ಯಾಚರಣೆಯಾಗುತ್ತಿದೆ. ಆದರೆ, ಸಾರ್ವಜನಿಕರಿಂದ ಸಾರಿಗೆಗಳನ್ನು ಒದಗಿಸುವ ಕುರಿತು ಬೇಡಿಕೆಗಳು ಹೆಚ್ಚಾಗಿ ಬರುತ್ತಿದ್ದು, ದಟ್ಟಣೆ ಹಾಗೂ ಸಾರಿಗೆ ಅವಶ್ಯಕತೆಗಳಿಗನುಗುಣವಾಗಿ ಹಂತಹಂತವಾಗಿ ಸಾರ್ವಜನಿಕ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಲು ಕ್ರಮ ಜರುಗಿಸಲಾಗುತ್ತಿದೆ.
ಆ	ಸಾರಿಗೆ ವ್ಯವಸ್ಥೆಯಲ್ಲಿ ತೊಂದರೆಯಾಗುತ್ತಿರುವುದಕ್ಕೆ ಕಾರಣವೇನು ಮತ್ತು ಈ ಸಮಸ್ಯೆ ನಿವಾರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;	
ಇ	ಸುಗಮ ಸಾರಿಗೆ ವ್ಯವಸ್ಥೆ ಕಲ್ಪಿಸಲು ಈ ಘಟಕಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಬಸ್ಸುಗಳನ್ನು ಯಾವಾಗ ಪೂರೈಸಲಾಗುವುದು?	ಕೋರೊನಾ ಸಾಂಕ್ರಾಮಿಕ ರೋಗ ಹರಡಿದ ಹಿನ್ನಲೆಯಲ್ಲಿ, 2020-21ನೇ ಸಾಲಿನಲ್ಲಿ ವಾ.ಕ.ರ.ಸಾ.ಸಂಸ್ಥೆಯಲ್ಲಿ ಹೊಸ ವಾಹನಗಳನ್ನು ಖರೀದಿ ಮಾಡದಂತೆ ತೀರ್ಮಾನಿಸಲಾಗಿದ್ದು, 2021-22ನೇ ಸಾಲಿನಲ್ಲಿ ಹೊಸ ಬಸ್ಸುಗಳನ್ನು ಖರೀದಿ ಮಾಡಲು ಯೋಜಿಸಲಾಗಿದೆ. ಹೊಸ ಬಸ್ಸುಗಳನ್ನು ಖರೀದಿಸಿದ ನಂತರ ವಿಭಾಗವಾರು ಬೇಡಿಕೆಯನ್ವಯ ಪೂರೈಸಲಾಗುವುದು.

ಸಂಖ್ಯೆ: ಟಿಡಿ 149 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	– 2950
ಉತ್ತರಿಸಬೇಕಾದ ದಿನಾಂಕ	– 24-03-2021
ಸದಸ್ಯರ ಹೆಸರು	– ಶ್ರೀ ತನ್ವೀರ್ ಸೇಠ್ (ನರಸಿಂಹರಾಜ ಕ್ಷೇತ್ರ)
ಉತ್ತರಿಸುವ ಸಚಿವರು	– ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಆರ್ಥಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಹೆಣ್ಣು ಮಕ್ಕಳ ವಿವಾಹಕ್ಕೆ ನೀಡುತ್ತಿದ್ದ ಆರ್ಥಿಕ ಸಹಾಯ (ಬಿದಾಯಿ ಯೋಜನೆ) ಪುನರ್ ಆರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)	-ಇಲ್ಲ-
ಆ)	2021-22ನೇ ಸಾಲಿನ ಆಯವ್ಯಯದಲ್ಲಿ ಇದಕ್ಕಾಗಿ ನಿಗದಿಪಡಿಸಿರುವ ಅನುದಾನವೆಷ್ಟು? (ವಿವರುಗಳನ್ನು ನೀಡುವುದು)	2021-22ನೇ ಸಾಲಿನ ಆಯವ್ಯಯದಲ್ಲಿ ಬಿದಾಯಿ ಯೋಜನೆಗಾಗಿ ಅನುದಾನವನ್ನು ನಿಗದಿಪಡಿಸಿರುವುದಿಲ್ಲ.

MWD 140 LMQ 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2952

ಸದಸ್ಯರ ಹೆಸರು : ಶ್ರೀ ರಾಮಪ್ಪ ಎಸ್.

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹರಿಹರ ನಗರದಲ್ಲಿರುವ ಬಸ್ ನಿಲ್ದಾಣವನ್ನು ಡಲ್ಟ್ ಸಹಭಾಗಿತ್ವದಲ್ಲಿ ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;	ಹರಿಹರ ನಗರದಲ್ಲಿರುವ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣವನ್ನು ಡಲ್ಟ್ ಯೋಜನೆಯ ಸಹಭಾಗಿತ್ವದಲ್ಲಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ.
ಆ)	ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು;	
ಇ)	ಸದರಿ ಬಸ್ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಪ್ರಗತಿಯ ಕಾರ್ಯವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು? (ವಿವರ ನೀಡುವುದು)	ಪ್ರಸ್ತುತ ಕೋವಿಡ್-19ರ ಸಾಂಕ್ರಾಮಿಕ ರೋಗದಿಂದ ವಿಷಮ ಪರಿಸ್ಥಿತಿಯಿಂದಾಗಿ ಕ.ರಾ.ರ.ಸಾ.ನಿಗಮವು ಆರ್ಥಿಕ ಸಂಕಷ್ಟದಲ್ಲಿದ್ದು, ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿರುವುದಿಲ್ಲ.

ಸಂಖ್ಯೆ: ಟಿಡಿ 150 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3507
ಸದಸ್ಯರ ಹೆಸರು	ಶ್ರೀ ದೊಡ್ಡಗೌಡರ ಮಹಾಂತೇಶ ಬಸವಂತರಾಯ (ಕಿತ್ತೂರು)
ಉತ್ತರಿಸುವ ದಿನಾಂಕ	24.03.2021
ಉತ್ತರಿಸುವ ಸಚಿವರು	ಕೃಷಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಬೆಳಗಾವಿ ಜಿಲ್ಲೆ ವ್ಯಾಪ್ತಿಯಲ್ಲಿ ರೈತರಿಗೆ ಪ್ರಸಕ್ತ ವರ್ಷದ ಮುಂಗಾರು ಬಿತ್ತನೆ ಮಾಡಲು 18 ಕಂಪನಿಗಳು ಸೋಯಾಬಿನ್ ಬೀಜ ಪೂರೈಕೆ ಮಾಡಿರುವುದು ನಿಜವೇ;	ಬೆಳಗಾವಿ ಜಿಲ್ಲೆ ವ್ಯಾಪ್ತಿಯಲ್ಲಿ ಪ್ರಸಕ್ತ ವರ್ಷ 2020-21 ರ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಲು ಒಟ್ಟು 26 ಕಂಪನಿಗಳು ಸೋಯಾಬಿನ್ ಬಿತ್ತನೆ ಬೀಜ ಪೂರೈಕೆ ಮಾಡಿರುತ್ತಾರೆ.
ಆ.	ಹಾಗಿದ್ದಲ್ಲಿ, ಬಿತ್ತನೆ ಮಾಡಿ ಮೊಳಕೆ ಸಮಯದಲ್ಲಿ ಸಮಸ್ಯೆಯಾದ ಕಾರಣ ರೈತರಿಗೆ ಎಷ್ಟು ಕಂಪನಿಗಳು ಪರಿಹಾರ ನೀಡಿವೆ; ಪರಿಹಾರ ನೀಡದ ಕಂಪನಿಗಳು ಯಾವುವು; ಆ ಕಂಪನಿಗಳಿಂದ ರೈತರಿಗೆ ಪರಿಹಾರ ದೊರಕಿಸಿಕೊಡಲು ಸರ್ಕಾರದ ಕ್ರಮಗಳೇನು?	ಸೋಯಅವರೆ ಬೆಳೆಯುವ ಜಿಲ್ಲೆಗಳಲ್ಲಿ ಹಂಗಾಮು ಪೂರ್ವದಲ್ಲಿಯೇ ಭಾರತ ಸರ್ಕಾರದ ಶಿಫಾರಸ್ಸಿನ ಅನ್ವಯ 2020ರ ಮುಂಗಾರು ಹಂಗಾಮಿನಲ್ಲಿ ಸೋಯಾಅವರೆ ಬೆಳೆಯುವ ಪ್ರಮುಖ ರಾಜ್ಯವಾದ ಮಧ್ಯಪ್ರದೇಶ ಹಾಗೂ ಇತರೆ ಜಿಲ್ಲೆಗಳಲ್ಲಿ ಕಳೆದ ವರ್ಷ ಸಂಭವಿಸಿದ ಪ್ರಕೃತಿ ವಿಕೋಪದಿಂದ ಬೀಜೋತ್ಪಾದನೆ ಕೈಗೊಂಡ ಬೀಜಗಳ ಮೊಳಕೆ ಪ್ರಮಾಣವು ಕಡಿಮೆಯಾಗಿದ್ದರಿಂದ ರೈತರು ಪರ್ಯಾಯ ಬೆಳೆ ಬೆಳೆಯಲು ಸೂಚಿಸಲಾಗಿತ್ತು ಹಾಗೂ ಸೋಯಾಅವರೆ ಬೀಜಗಳ ನಿಗದಿತ ಮೊಳಕೆ ಪ್ರಮಾಣವನ್ನು ಮೊದಲು ಶೇ.70 ರಿಂದ 65 ಕ್ಕೆ ಇಳಿಸಲಾಗಿತ್ತು (Letter No 15-11/2014-SD-IV Dt: 19-06-2020). ನಂತರ ಶೇ.65 ರಿಂದ 60ಕ್ಕೆ ಮತ್ತೊಮ್ಮೆ ಇಳಿಸಲಾಗಿತ್ತು. ಈ ಕುರಿತು ಕೂಡಲೆ ಮಾನ್ಯ ಕೃಷಿ ಸಚಿವರು ಪತ್ರಿಕ ಪ್ರಕಟಣೆ ಮೂಲಕ ರೈತರಿಗೆ ಪರ್ಯಾಯ ಬೆಳೆ ಬೆಳೆಯಲು ಸಹ ಸೂಚಿಸಿದ್ದರು. ಆದಾಗ್ಯೂ ರೈತರು ಸ್ವಇಚ್ಛೆಯಿಂದ ವಾಡಿಕೆಯಂತೆ ಸೋಯಾಅವರೆ ಬಿತ್ತನೆ ಮಾಡಿ ನಂತರ ಮೊಳಕೆ ಪ್ರಮಾಣ ಕಡಿಮೆಯಿರುವುದರ ಬಗ್ಗೆ ದೂರು ಸಲ್ಲಿಸಿರುತ್ತಾರೆ. ಬೆಳಗಾವಿ ಜಿಲ್ಲೆಯಲ್ಲಿ 18 ಕಂಪನಿಗಳು ಪೂರೈಕೆ ಮಾಡಿದ ಬಿತ್ತನೆ ಬೀಜದಲ್ಲಿ ಮೊಳಕೆ ಸಮಸ್ಯೆ ಉಂಟಾಗಿದ್ದು, ಈ ಬಗ್ಗೆ ದೂರು ನೀಡಿದ ರೈತರಿಗೆ ಸಂಸ್ಥೆಗಳ ಮುಖಾಂತರ ಬದಲಿ ಬೀಜಗಳನ್ನು ಸಹ ವಿತರಿಸಲಾಗಿರುತ್ತದೆ ಹಾಗೂ ಸದರಿ ಕಂಪನಿಗಳು ಸಂಬಂಧಪಟ್ಟ ರೈತರಿಗೆ ಪರಿಹಾರವನ್ನು ಸಹ ನೀಡಿರುತ್ತಾರೆ. ಯಾವುದೇ ಬಾಕಿ ಇರುವುದಿಲ್ಲ.

ಸಂಖ್ಯೆ: AGRI-ACT/63/ 2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3510
ಸದಸ್ಯರ ಹೆಸರು	:	ಶ್ರೀ ದೊಡ್ಡಗೌಡರ ಮಹಾಂತೇಶ್ ಬಸವಂತರಾಯ (ಕಿತ್ತೂರು)
ಉತ್ತರಿಸುವ ದಿನಾಂಕ	:	24-03-2021.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಗ್ರಾಮೀಣ ಭಾಗಗಳಲ್ಲಿ ಆಶ್ರಯ ಯೋಜನೆಯಡಿ ನಿರ್ಮಾಣವಾದ ಮನೆಗಳಿಗೆ ಇ-ಸ್ವತ್ತು ತಂತ್ರಾಂಶದಲ್ಲಿ ಅಳವಡಿಸಿ ಕಂಪ್ಯೂಟರ್ ಉತಾರ ನೀಡಲು ಇರುವ ಮಾರ್ಗಸೂಚಿಗಳೇನು;	ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 83 ಗ್ರಾಪಂಅ 2013(ಭಾಗ-6), ದಿನಾಂಕ:03-02-2014ರಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ನಮೂನೆ-9 ಮತ್ತು 11ಎ ವಿತರಿಸಲು ಅವಕಾಶ ಕಲ್ಪಿಸಲಾಗಿದೆ.
(ಆ)	ಆಶ್ರಯ ಯೋಜನೆಯಡಿ 8-9 ವರ್ಷಗಳ ಹಿಂದೆ ನಿರ್ಮಿಸಲಾದ ಮನೆಗಳನ್ನು ಇ-ತಂತ್ರಾಂಶದಲ್ಲಿ ಅಳವಡಿಸಿ ಕಂಪ್ಯೂಟರ್ ಉತಾರ ನೀಡಲು ಸರ್ಕಾರದ ಕ್ರಮವೇನು;	ಅದರಲ್ಲಿ ಸರ್ಕಾರದ ಬಸವ/ಗ್ರಾಮೀಣ ಅಂಬೇಡ್ಕರ್/ಇಂದಿರಾ ಆವಾಸ್ /ಪ್ರಧಾನ ಮಂತ್ರಿ ಆವಾಸ್ ವಸತಿ ಯೋಜನೆಯಡಿ ಮನೆಗಳ ನಿರ್ಮಾಣಕ್ಕಾಗಿ ವಸತಿ ಇಲಾಖೆಯು ಹೊರಡಿಸಿರುವ ಆದೇಶ ಸಂಖ್ಯೆ:ಹೆಚ್‌ಡಿ 55 ಹೆಚ್.ಎ.ಎಸ್.2011, ದಿನಾಂಕ:30-01-2012 ರಂತೆ ಸೃಜಿಸುವ ಆಸ್ತಿಗಳು ಒಳಪಡುತ್ತವೆ.
(ಇ)	ಸರ್ಕಾರ ಈ ಕುರಿತು ಸೂಕ್ತ ಆದೇಶ ಹೊರಡಿಸುವುದೇ?	ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು 11ಎ ಯನ್ನು ಪಡೆಯಲು ಆಸ್ತಿಯ ಮಾಲೀಕರು ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಮೂನೆ-9 ಮತ್ತು 11ಎ ವಿತರಿಸುತ್ತಾರೆ.

ಸಂ. ಗ್ರಾಅಪ 160 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 3511

ಉತ್ತರ ದಿನಾಂಕ : 24.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2019-20ನೇ ಸಾಲಿನ ಬಜೆಟ್‌ನಲ್ಲಿ 1000ಕೋಟಿ ರೂಪಾಯಿಗಳನ್ನು ಮೀಸಲಿರಿಸಿ ಘೋಷಿಸಲಾದ ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವ ಜಲಧಾರೆ ಯೋಜನೆಯನ್ನು ಇಲ್ಲಿಯವರೆಗೆ ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಕಾಮಗಾರಿ ಪ್ರಾರಂಭಿಸದೇ ಇರುವುದಕ್ಕೆ ಕಾರಣವೇನು; ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು)	ಸಚಿವ ಸಂಪುಟದ ಟಿಪ್ಪಣಿ ಸಂ:RDP/35/RWS(5)/2018, ದಿನಾಂಕ:25.02.2019ರಲ್ಲಿ ಜಲಧಾರೆ ಯೋಜನೆಯಡಿ ರಾಯಚೂರು ಜಿಲ್ಲೆಯ ರಾಯಚೂರು, ಸಿಂಧನೂರು, ಮಾನ್ವಿ, ದೇವದುರ್ಗ ಹಾಗೂ ಲಿಂಗಸುಗೂರು ತಾಲ್ಲೂಕುಗಳ ಎಲ್ಲಾ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ದೊರೆತಿರುತ್ತದೆ. ಅದರಂತೆ ರೂ.1988.01ಕೋಟಿಗಳಿಗೆ ಯೋಜನೆಯ ಪಿ.ಎಸ್.ಆರ್ ಅನ್ನು ತಯಾರಿಸಿದ್ದು, ಕರಡು ಸಚಿವ ಸಂಪುಟದ ಟಿಪ್ಪಣಿಯನ್ನು ಆರ್ಥಿಕ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆಗಳಿಗೆ ಸಹಮತಿಗಾಗಿ ಕಳುಹಿಸಲಾಗಿರುತ್ತದೆ.
ಇ)	ಈ ಯೋಜನೆಯನ್ನು ಪ್ರಾರಂಭ ಮಾಡುವ ಇಚ್ಛಾಶಕ್ತಿ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ, ಯಾವಾಗ ಕಾಮಗಾರಿಯನ್ನು ಪ್ರಾರಂಭ ಮಾಡಿ ಯಾವಾಗ ಪೂರ್ಣಗೊಳಿಸಲಾಗುವುದು (ಸಂಪೂರ್ಣ ವಿವರವನ್ನು ನೀಡುವುದು)	ಪ್ರಸ್ತುತ ಯೋಜನೆಯ ಪಿ.ಎಸ್.ಆರ್. ಅನ್ನು ತಯಾರಿಸಿದ್ದು, ಕರಡು ಸಚಿವ ಸಂಪುಟದ ಟಿಪ್ಪಣಿಯನ್ನು ಆರ್ಥಿಕ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆಗಳಿಗೆ ಸಹಮತಿಗಾಗಿ ಕಳುಹಿಸಲಾಗಿರುತ್ತದೆ. ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಟೆಂಡರ್ ಕರೆದು, 2021-22ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿ ನಿಗಧಿತ ಅವಧಿಯೊಳಗೆ ಯೋಜನೆಯನ್ನು ಮುಕ್ತಾಯಗೊಳಿಸಲು ಕ್ರಮವಹಿಸಲಾಗುವುದು.
ಈ)	2021-22ನೇ ಸಾಲಿನಲ್ಲಿ ಸದರಿ ಯೋಜನೆಗೆ ಎಷ್ಟು ಹಣ ಮೀಸಲಿಡಲಾಗುವುದು? (ವಿವರವನ್ನು ನೀಡುವುದು)	2021-22ನೇ ಸಾಲಿನಲ್ಲಿ ಜೆ.ಜೆ.ಎಂ ಕ್ರಿಯಾ ಯೋಜನೆಯಲ್ಲಿ ಸದರಿ ಯೋಜನೆಗೆ ರೂ.198.80ಕೋಟಿಗಳ ಅನುದಾನವನ್ನು ಮೀಸಲಿಡಲಾಗುವುದು.

ಸಂ:ಗ್ರಾಕುನೀ&ನೈಇ 120 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3529
ಸದಸ್ಯರ ಹೆಸರು : ಶ್ರೀ ಮಸಾಲ ಜಯರಾಮ್
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 24-03-2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ತುರುವೇಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುರುವೇಕೆರೆ ತಾಲ್ಲೂಕಿನ ಹೋಬಳಿ ಕೇಂದ್ರವಾದ ಮಾಯಸಂದ್ರ ಗ್ರಾಮದಲ್ಲಿ ಸುಸಜ್ಜಿತ ಬಸ್ ನಿಲ್ದಾಣವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಪ್ರಸ್ತುತ ಯಾವ ಹಂತದಲ್ಲಿದೆ ಹಾಗೂ ವಿಳಂಬಕ್ಕೆ ಕಾರಣವೇನು; ಯಾವಾಗ ಪ್ರಾರಂಭಿಸಲಾಗುವುದು?	ಮಾಯಸಂದ್ರ ಗ್ರಾಮದಲ್ಲಿ ಬಸ್ ನಿಲ್ದಾಣಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಪ್ರಸ್ತುತ ನಿವೇಶನವನ್ನು ಹೊಂದಿರುವುದಿಲ್ಲ. ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸೂಕ್ತ ನಿವೇಶನವನ್ನು ಮಂಜೂರು ಮಾಡುವಂತೆ ಜಿಲ್ಲಾಡಳಿತವನ್ನು ಕೋರಲಾಗಿದೆ. ಸೂಕ್ತ ನಿವೇಶನವು ನಿಗಮದ ಸ್ವಾಧೀನಕ್ಕೆ ಬಂದ ನಂತರ ಸಂಸ್ಥೆಯು ಬಸ್ ನಿಲ್ದಾಣ ನಿರ್ಮಾಣ ಮಾಡಲು ಹೊರಡಿಸಿರುವ ಸುತ್ತೋಲೆ ಸಂಖ್ಯೆ: 01/2015-16, ದಿನಾಂಕ: 06.06.2015ರ ಪ್ರಕಾರ ಸಾರಿಗೆ ಅವಶ್ಯಕತೆ ಹಾಗೂ ಆರ್ಥಿಕ ಲಭ್ಯತೆಯನ್ನು ಆಧರಿಸಿ ಈ ಬಗ್ಗೆ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಟಿಡಿ 151 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3534

ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ.

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯಲ್ಲಿ ಬಿ.ಎಂ.ಟಿ.ಸಿ. ಬಸ್ ನಿಲ್ದಾಣ ನಿರ್ಮಾಣದ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; (ಪೂರ್ಣ ಮಾಹಿತಿ ನೀಡುವುದು)	ಆನೇಕಲ್ ತಾಲ್ಲೂಕಿನ ಅತ್ತಿಬೆಲೆಯಲ್ಲಿ ಬಿ.ಎಂ.ಟಿ.ಸಿ.ಯಿಂದ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಇರುವುದಿಲ್ಲ.
ಆ)	ಅತ್ತಿಬೆಲೆಯಲ್ಲಿ ಬಿ.ಎಂ.ಟಿ.ಸಿ. ಬಸ್ ನಿಲ್ದಾಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಪೂರ್ಣ ಮಾಹಿತಿ ನೀಡುವುದು)	ಅತ್ತಿಬೆಲೆಯಲ್ಲಿ ಬಿ.ಎಂ.ಟಿ.ಸಿ. ಬಸ್ ನಿಲ್ದಾಣದ ಅವಶ್ಯಕತೆ ಇರುತ್ತದೆ. ಬಸ್ ನಿಲ್ದಾಣ ನಿರ್ಮಿಸಲು ಸೂಕ್ತ ನಿವೇಶನದ ಲಭ್ಯತೆ ಇರುವುದಿಲ್ಲ. ಬಸ್ ನಿಲ್ದಾಣ ನಿರ್ಮಿಸಲು ಸೂಕ್ತ ಜಾಗ ದೊರಕಿದ ನಂತರ ಸಂಸ್ಥೆಯ ಆರ್ಥಿಕ ಪರಿಸ್ಥಿತಿ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಬಸ್ ನಿಲ್ದಾಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಟಿಡಿ 152 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3535

ಸದಸ್ಯರ ಹೆಸರು : ಶ್ರೀ ಶಿವಣ್ಣ.ಬಿ (ಆನೇಕಲ್)

ಉತ್ತರಿಸುವ ದಿನಾಂಕ: : 24/03/2021

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಆನೇಕಲ್ ತಾಲ್ಲೂಕಿಗೆ ಪ್ರತ್ಯೇಕವಾಗಿ ಕೃಷಿ ಸಹಾಯಕ ನಿರ್ದೇಶಕರ ಹುದ್ದೆಯನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; (ಪೂರ್ಣ ಮಾಹಿತಿ ನೀಡುವುದು)	ಆನೇಕಲ್ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಈಗಾಗಲೇ ಅಸ್ತಿತ್ವದಲ್ಲಿದೆ.
ಆ)	ಈ ತಾಲ್ಲೂಕಿಗೆ ಪ್ರತ್ಯೇಕವಾದ ಕೃಷಿ ಸಹಾಯಕರ ಹುದ್ದೆಯನ್ನು ಸೃಷ್ಟಿಸುವ ಅವಶ್ಯಕತೆ ಸರ್ಕಾರದ ಗಮನಕ್ಕೆ ಇದೆಯೇ? (ಪೂರ್ಣ ಮಾಹಿತಿ ನೀಡುವುದು)	ಈ ತಾಲ್ಲೂಕಿಗೆ ಪ್ರತ್ಯೇಕವಾದ ಕೃಷಿ ಸಹಾಯಕರ ಹುದ್ದೆಯನ್ನು ಸೃಷ್ಟಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ: AGRI-AGS-72/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3546
ಸದಸ್ಯರ ಹೆಸರು	ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ಉತ್ತರಿಸುವ ದಿನಾಂಕ	24.03.2021
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕೃಷಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈತ ಅನುವುಗಾರರ ಸಂಖ್ಯೆ ಎಷ್ಟು;	ಭೂಚೇತನ ಯೋಜನೆಯು 2017-18ನೇ ಸಾಲಿನಲ್ಲಿ ಅಂತ್ಯ ಗೊಂಡಿರುವುದರಿಂದ, ಪ್ರಸ್ತುತ ಕೃಷಿ ಇಲಾಖೆಯಲ್ಲಿ ರೈತ ಅನುವುಗಾರರ ಸೇವೆಯನ್ನು ಪಡೆಯಲಾಗುತ್ತಿಲ್ಲ.
ಆ	ಇಲಾಖೆಯ ರೈತ ಅನುವುಗಾರರಿಗೆ ಪಾವತಿಸುತ್ತಿರುವ ಮಾಸಿಕ ವೇತನವೆಷ್ಟು ಹಾಗೂ ಅವರಿಗೆ ಬಾಕಿಯಿರುವ ವೇತನವನ್ನು ಯಾವಾಗ ಪಾವತಿಸಲಾಗುವುದು; (ಮಾಹಿತಿ ಒದಗಿಸುವುದು)	ಉದ್ಭವಿಸುವುದಿಲ್ಲ
ಇ	ರೈತ ಅನುವುಗಾರರಿಗೆ ಪಾವತಿಸುತ್ತಿರುವ ವೇತನವನ್ನು ಹೆಚ್ಚಳ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು)	ಉದ್ಭವಿಸುವುದಿಲ್ಲ

ಸಂಖ್ಯೆ: AGRI-ACT/62/ 2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3548
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	24.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ವೃತ್ತಿಪರ ನೇಕಾರರನ್ನು ಕಾರ್ಮಿಕರಂತೆ ಪರಿಗಣಿಸಿ, ಕಟ್ಟಡ ಕಾರ್ಮಿಕರಿಗಿರುವ ಸೌಲಭ್ಯವನ್ನು ಇವರಿಗೂ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇರುವುದಿಲ್ಲ
ಆ)	ರಾಜ್ಯದಲ್ಲಿ ವಿದ್ಯುತ್ ಚಾಲಿತ ಮಗ್ಗಗಳಲ್ಲಿ ಬಟ್ಟೆ ತಯಾರಿಸುವ ನೇಕಾರರಲ್ಲಿ ಶೇ.70 ರಷ್ಟು ಬಡತನ ರೇಖೆಗಿಂತ ಕೆಳಗಿನವ ರಾಗಿರುವ ಕಾರಣ ನಾಲ್ಕು ವಿದ್ಯುತ್ ಚಾಲಿತ ಮಗ್ಗಗಳಿರುವ ನೇಕಾರರಿಗೆ ಉಚಿತವಾಗಿ 5 ಹೆಚ್.ಪಿ ವರೆಗೆ ವಿದ್ಯುತ್ ಪೂರೈಸಿದ್ದಲ್ಲಿ 10,000 ಕುಟುಂಬಗಳಿಗೆ ಅನುಕೂಲವಾಗುವುದರಿಂದ ಇವರುಗಳಿಗೆ ಉಚಿತವಾಗಿ ವಿದ್ಯುತ್ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇರುವುದಿಲ್ಲ ಆದಾಗ್ಯೂ, ಸರ್ಕಾರದ ಆದೇಶ ಸಂಖ್ಯೆ: ವಾಕೈ/70ಜಕೈಇ/ 2004, ದಿನಾಂಕ: 09.11.2004 ರನ್ವಯ ವಿದ್ಯುತ್ ಮಗ್ಗ ನೇಕಾರರಿಗೆ ಉತ್ಪಾದನೆ ಹೆಚ್ಚಳ ಹಾಗೂ ಜೀವನ ಮಟ್ಟ ಸುಧಾರಣೆಗೆ ನೆರವಾಗಲು ಸರ್ಕಾರವು ಗರಿಷ್ಠ 10 ಹೆಚ್.ಪಿ ರವರಿಗೆ ವಿದ್ಯುಚ್ಛಕ್ತಿ ಸಂಪರ್ಕ ಹೊಂದಿರುವ ವಿದ್ಯುತ್ ಮಗ್ಗಗಳ ಹಾಗೂ ಮಗ್ಗಪೂರ್ವ ಚಟುವಟಿಕೆಗಳ ಘಟಕಗಳಿಗೆ ವಿದ್ಯುತ್ ದರ ಸಹಾಯಧನ ನೀಡಲು ಆದೇಶಿಸಲಾಗಿರುತ್ತದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ವಾಕೈ 57 ಜಕೈಇ 2006, ದಿನಾಂಕ:16.09.2006 ರಲ್ಲಿ ಇದರ ಮಿತಿಯನ್ನು ಗರಿಷ್ಠ 20 ಹೆಚ್.ಪಿ ರವರಿಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ. ಅದರಂತೆ ಸದರಿ ಘಟಕಗಳಿಗೆ ಯೂನಿಟ್ ಗೆ ರೂ.1.25 ರಂತೆ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.
ಇ)	ಹಾಗಿದ್ದಲ್ಲಿ, ಯಾವಾಗ ಉಚಿತ ವಿದ್ಯುತ್ ನೀಡಲಾಗುವುದು?	ಅನ್ವಯಿಸುವುದಿಲ್ಲ

ಸಂ: CI 83 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3550
ಸದಸ್ಯರ ಹೆಸರು : ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)
ಉತ್ತರಿಸುವ ದಿನಾಂಕ : 24-03-2021.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆಗೆ ಅನುಗುಣವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ)	ಒಟ್ಟು ಮಂಜೂರಾದ ಪಿ.ಡಿ.ಓ. ಹುದ್ದೆಗಳ ಪೈಕಿ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ ಎಷ್ಟು; ಕೊರತೆಯಿರುವ ಪಿ.ಡಿ.ಓ.ಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮವಹಿಸಿದೆಯೇ?	ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಮಂಜೂರಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ಸಂಖ್ಯೆ:6021. ಪ್ರಸ್ತುತ ರಾಜ್ಯದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ನೇರ ನೇಮಕಾತಿ ಕೋಟಾದಲ್ಲಿ 3717 ನೌಕರರು ಮತ್ತು ಮುಂಬಡ್ತಿ ಕೋಟಾದಲ್ಲಿ 1563 ನೌಕರರು ಸೇರಿದಂತೆ ಒಟ್ಟು 5280 ನೌಕರರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಪ್ರಸ್ತುತ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ನೇರ ನೇಮಕಾತಿ ಕೋಟಾದಲ್ಲಿ 205 ಹುದ್ದೆಗಳು ಮತ್ತು ಮುಂಬಡ್ತಿ ಕೋಟಾದಲ್ಲಿ 536 ಹುದ್ದೆಗಳು ಸೇರಿದಂತೆ ಒಟ್ಟು 741 ಹುದ್ದೆಗಳು ಖಾಲಿ ಇರುತ್ತವೆ. ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದಕ್ಕೆ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೇಮಕಾತಿ ಪ್ರಾಧಿಕಾರ ಆಗಿದ್ದು ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ವೃಂದದ ಅರ್ಹ ನೌಕರರು ಲಭ್ಯವಾದಂತೆ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಮುಂಬಡ್ತಿ ಮೂಲಕ ಭರ್ತಿ ಮಾಡಲು ಸರ್ಕಾರದಿಂದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಸಂ. ಗ್ರಾಅಪ 164 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 3553
ಸದಸ್ಯರ ಹೆಸರು	: ಎಸ್.ಎನ್. ನಾರಾಯಣ ಸ್ವಾಮಿ ಕೆ.ಎಂ.
ಉತ್ತರಿಸುವ ಸಚಿವರು	: ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 24-03-2021

ಕ್ರ ಸಂ	ಪ್ರಶ್ನೆ	ಉತ್ತರಗಳು
ಅ)	ಬಂಗಾರಪೇಟೆ ತಾಲ್ಲೂಕು ಹೋಬಳಿ ಕೇಂದ್ರ ಸ್ಥಾನದಲ್ಲಿರುವ ಹಳೆ ಸರ್ಕಾರಿ ಆಸ್ಪತ್ರೆಯ ಕಟ್ಟಡ ಮತ್ತು ಸುಮಾರು 2 ಎಕರೆ ವಿಸ್ತೀರ್ಣದ ಪ್ರದೇಶವನ್ನು ಉಪಯೋಗಿಸಿಕೊಂಡು ಬಂಗಾರಪೇಟೆ ತಾಲ್ಲೂಕಿನ ಬಸ್ ಡಿಪೋ ಮತ್ತು ಬೂದಿಕೋಟೆ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ;	ಬಂಗಾರಪೇಟೆ ತಾಲ್ಲೂಕಿನ ಬಂಗಾರಪೇಟೆ ಪಟ್ಟಣದಲ್ಲಿ ಬಸ್ ಡಿಪೋ ನಿರ್ಮಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಆದರೆ, ಬೂದಿಕೋಟೆ ಗ್ರಾಮದ ಹಳೆಯ ಸರ್ಕಾರಿ ಆಸ್ಪತ್ರೆಗೆ ಸೇರಿದ 15.00 ಗುಂಟೆ ಜಾಗದಲ್ಲಿ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣಕ್ಕಾಗಿ ಉಪಯೋಗಿಸಿಕೊಳ್ಳುವಂತೆ ಪ್ರಸ್ತಾವನೆ ಬಂದಿರುತ್ತದೆ.
ಆ)	2017-18ನೇ ಸಾಲಿನಿಂದ ಈ ಪ್ರಸ್ತಾವನೆ ಇದ್ದರೂ ಸಹ ಭೂಮಿ ವರ್ಗಾವಣೆ ಸಂಬಂಧ ಇಲಾಖೆ ಕೈಗೊಂಡ ಕ್ರಮಗಳೇನು;	ಬೂದಿಕೋಟೆ ಗ್ರಾಮದಲ್ಲಿ ಕ.ರಾ.ರ.ಸಾ.ನಿಗಮದ ಬಸ್ ನಿಲ್ದಾಣ ನಿರ್ಮಿಸಲು ಬೂದಿಕೋಟೆಯ ಹಳೆಯ ಸರ್ಕಾರಿ ಆಸ್ಪತ್ರೆಯ ಸರ್ವೆ ನಂ.656ರ 147 ಅಡಿ x 110 ಅಡಿ (15.00 ಗುಂಟೆ) ನಿವೇಶನವನ್ನು ಬಳಕೆ ಮಾಡಿಕೊಳ್ಳಲು ಆಸಕ್ತಿ ಇದ್ದರೂ ಸಹ, ಸದರಿ ವಿಸ್ತೀರ್ಣದ ನಿವೇಶನವು ಬಸ್ ನಿಲ್ದಾಣ ನಿರ್ಮಾಣಕ್ಕೆ ಸಾಕಾಗದೇ ಇರುವುದರಿಂದ, ಸರ್ಕಾರಿ ಆಸ್ಪತ್ರೆಯ ನಿವೇಶನಕ್ಕೆ ಹೊಂದಿಕೊಂಡಂತೆ 25.00 ಗುಂಟೆ ನಿವೇಶನವು ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಒಟ್ಟು 1.00 ಎಕರೆ ನಿವೇಶನವನ್ನು ಉಚಿತವಾಗಿ ಮಂಜೂರು ಮಾಡುವಂತೆ ಅಥವಾ ಪ್ರತ್ಯೇಕವಾಗಿ ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸೂಕ್ತವಾದ 1.00 ಎಕರೆ ನಿವೇಶನವನ್ನು ಉಚಿತವಾಗಿ ಮಂಜೂರು ಮಾಡುವಂತೆ ಜಿಲ್ಲಾಡಳಿತಕ್ಕೆ ಕೋರಲಾಗಿರುತ್ತದೆ.
ಇ)	ಒಂದು ಇಲಾಖೆಗೆ ಅಗತ್ಯವಿಲ್ಲದ ಸಾರ್ವಜನಿಕ ಆಸ್ತಿಯನ್ನು ಮತ್ತೊಂದು ಸಾರ್ವಜನಿಕ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಲು ಇಲಾಖೆಗೆ ಆಸಕ್ತಿ ಇಲ್ಲವೇ;	
ಈ)	ಹಾಗಿದ್ದಲ್ಲಿ, ಇಲಾಖೆಯು ಇದುವರೆಗೆ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು)	ಸೂಕ್ತ ನಿವೇಶನವು ನಿಗಮದ ಸ್ವಾಧೀನಕ್ಕೆ ಬಂದ ನಂತರ ಸಂಸ್ಥೆಯು ಬಸ್ ನಿಲ್ದಾಣ ನಿರ್ಮಾಣ ಮಾಡಲು ಹೊರಡಿಸಿರುವ ಸುತ್ತೋಲೆ ಸಂಖ್ಯೆ: 01/2015-16, ದಿನಾಂಕ: 06.06.2015ರ ಪ್ರಕಾರ ಸಾರಿಗೆ ಅವಶ್ಯಕತೆ ಹಾಗೂ ಆರ್ಥಿಕ ಲಭ್ಯತೆಯನ್ನು ಆಧರಿಸಿ ಈ ಬಗ್ಗೆ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಟಿಡಿ 154 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3560

ಸದಸ್ಯರ ಹೆಸರು : ಶ್ರೀ ಮಹದೇವ ಕೆ.

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಬಸ್ ನಿಲ್ದಾಣಗಳನ್ನು ಹೈಟೆಕ್ ನಿಲ್ದಾಣಗಳನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ;	**ಕ.ರಾ.ರ.ಸಾ.ನಿಗಮ ಮತ್ತು ಬೆಂ.ಮ.ಸಾ.ಸಂಸ್ಥೆ:-** ಪ್ರಸ್ತುತ ಪ್ರಸ್ತಾವನೆ ಇರುವುದಿಲ್ಲ. **ವಾ.ಕ.ರ.ಸಾ.ಸಂಸ್ಥೆ** ವ್ಯಾಪ್ತಿಯ ಬಸ್ ನಿಲ್ದಾಣಗಳನ್ನು ಹೈಟೆಕ್ ನಿಲ್ದಾಣಗಳನ್ನಾಗಿ ಹಂತಹಂತವಾಗಿ ಮಾಡಲಾಗುತ್ತಿದೆ. **ಈ.ಕ.ರ.ಸಾ.ಸಂಸ್ಥೆಯ** ಬಸ್ ನಿಲ್ದಾಣಗಳನ್ನು ಉನ್ನತೀಕರಿಸುವ ಪ್ರಸ್ತಾವನೆ ಇರುತ್ತದೆ. ಅವಶ್ಯಕತೆಯನುಸಾರವಾಗಿ ಅನುದಾನದ ಲಭ್ಯತೆ ಹಾಗೂ ಆದ್ಯತೆಯ ಮೇರೆಗೆ ಬಸ್ ನಿಲ್ದಾಣಗಳನ್ನು ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.
ಆ)	ಪಿರಿಯಾಪಟ್ಟಣ ಮತ ಕ್ಷೇತ್ರದಲ್ಲಿರುವ ಬಸ್ ನಿಲ್ದಾಣವು ತುಂಬಾ ಹಳೆಯದಾಗಿರುವುದರಿಂದ ಹಾಗೂ ಪ್ರವಾಸಿಗರು ಅಧಿಕ ಸಂಖ್ಯೆಯಲ್ಲಿ ಬರುವ ಕಾರಣ ಹೈಟೆಕ್ ಬಸ್ ನಿಲ್ದಾಣವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ;	ಕ.ರಾ.ರ.ಸಾ.ನಿಗಮವು ಪ್ರಸ್ತುತ ಪಿರಿಯಾಪಟ್ಟಣದಲ್ಲಿ 2 ಎಕರೆ 13.5 ಗುಂಟೆ ಜಾಗದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಿ ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಹಾಲಿ ಇರುವ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಅವಶ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಹೈಟೆಕ್ ಬಸ್ ನಿಲ್ದಾಣವನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ.
ಇ)	ಪ್ರಸ್ತಾವನೆ ಇದ್ದಲ್ಲಿ, ಯಾವಾಗ ಹೈಟೆಕ್ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗುವುದು?	

ಸಂಖ್ಯೆ: ಟಿಡಿ 155 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	::	3562 (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ವರ್ಗಾವಣೆಗೊಂಡಿರುವ ಪ್ರಶ್ನೆ)
ಸದಸ್ಯರ ಹೆಸರು	::	ಶ್ರೀ ಸತೀಶ್ ಎಲ್.ಜಾರಕಿಹೊಳಿ (ಯಮಕನಮರಡಿ)
ಉತ್ತರಿಸುವ ದಿನಾಂಕ:	::	24.03.2021
ಉತ್ತರಿಸುವ ಸಚಿವರು	::	ಕಂದಾಯ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹುಕ್ಕೇರಿ ತಾಲ್ಲೂಕಿನ ಹತ್ತರಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಆನಂದಪುರ ಗ್ರಾಮದ ಸರ್ವೆ ನಂ.251/ಎ ರಲ್ಲಿನ 4-00 ಎಕರೆ ಭೂಮಿಯನ್ನು ಹಿಡಕಲ್ ಡ್ಯಾಮ್ ಹಿನ್ನೀರಿನ ನಿರಾಶ್ರಿತರ ಸ್ಮಶಾನಕ್ಕಾಗಿ ಕಾಯ್ದಿರಿಸಿದ್ದು, ಕೆಲವರು ನಕಲಿ ದಾಖಲೆ ಸೃಷ್ಟಿಸಿ ಸದರಿ ಸ್ಮಶಾನ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?	ಬಂದಿರುತ್ತದೆ.
ಆ)	ಬಂದಿದ್ದರೆ ಸರ್ಕಾರ ತೆಗೆದುಕೊಂಡ ಕ್ರಮವೇನು?	ಹುಕ್ಕೇರಿ ತಾಲ್ಲೂಕಿನ ಹತ್ತರಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಆನಂದಪುರ ಗ್ರಾಮದ ಸರ್ವೆ ನಂ.251/ಎ ರಲ್ಲಿನ 4-00 ಎಕರೆ ಜಮೀನಿಗೆ "ಸ್ಮಶಾನ ಜಮೀನು" ಎಂದು ದಾಖಲಿಸುವ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ರಾಮಲಿಂಗ ಶ್ರೀಕಾಂತ ಕುಂಬಾರ ವಗೈರೆ ಜನರು ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯ, ಸಂಕೇಶ್ವರದಲ್ಲಿ ಓ.ಎಸ್.ನಂ.151/2019ನ್ನು ದಾಖಲಿಸಿರುತ್ತಾರೆ. ಈ ಸಂಬಂಧ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ಜರುಗುತ್ತಿದ್ದು, ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ನಂತರ ಸೂಕ್ತ ಕ್ರಮ ಜರುಗಿಸಲಾಗುವುದು.

ಸಂಖ್ಯೆ: ಆರ್‌ಡಿ 16 ಎಲ್‌ಜಿಎಲ್ 2021

(ಆರ್.ಅಶೋಕ್)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3565
ಸದಸ್ಯರ ಹೆಸರು : ಶ್ರೀ ಮುನಿಯಪ್ಪ ವಿ.
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 24-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಿಗೆ ಸಾರಿಗೆ ವ್ಯವಸ್ಥೆ ಸರಿ ಇಲ್ಲದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕ.ರಾ.ರ.ಸಾ.ನಿಗಮದ ವತಿಯಿಂದ ಗ್ರಾಮೀಣ ಪ್ರದೇಶಗಳಿಗೆ 42 ಅನುಸೂಚಿಗಳಿಂದ 148 ಸುತ್ತುವಳಿಗಳ ಹಾಗೂ ಶಿಡ್ಲಘಟ್ಟದಿಂದ ಚಿಕ್ಕಬಳ್ಳಾಪುರಕ್ಕೆ 6 ಅನುಸೂಚಿಗಳಿಂದ 86 ಸುತ್ತುವಳಿಗಳ ಪ್ರತ್ಯೇಕ ಸಾರಿಗೆ ಸೌಲಭ್ಯ ಸಹ ಕಲ್ಪಿಸಲಾಗಿರುತ್ತದೆ. ಪ್ರಸ್ತುತ ನಿಗಮದ ವತಿಯಿಂದ ಕಲ್ಪಿಸಿರುವ ಸಾರಿಗೆ ಸೌಲಭ್ಯ ಅವಶ್ಯಕತೆಗೆ ಅನುಗುಣವಾಗಿದೆ.
ಆ)	ಬಂದಿದ್ದಲ್ಲಿ, ಅವ್ಯವಸ್ಥೆಯಿಂದ ಕೂಡಿರುವ ಸಾರಿಗೆ ವ್ಯವಸ್ಥೆಯನ್ನು ಸರಿಪಡಿಸದಿರಲು ಕಾರಣವೇನು;	
ಇ)	ಗ್ರಾಮಾಂತರ ಪ್ರದೇಶಗಳಿಗೆ ಉತ್ತಮ ಸಾರಿಗೆ ವ್ಯವಸ್ಥೆ ಕಲ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?	ಕೋವಿಡ್-19ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಸಾರಿಗೆಗಳ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು. ಲಾಕ್‌ಡೌನ್ ತೆರವುಗೊಳಿಸಿದ ನಂತರ ಪ್ರಯಾಣಿಕರು ಕಡಿಮೆ ಸಂಖ್ಯೆಯಲ್ಲಿ ಓಡಾಡುತ್ತಿದ್ದು, ಪ್ರಸ್ತುತ ಹಲವಾರು ಶಾಲೆಗಳು ಪ್ರಾರಂಭವಾಗದಿರುವುದರಿಂದ, ಪ್ರಯಾಣಿಕರ/ವಿದ್ಯಾರ್ಥಿಗಳ ಲಭ್ಯತೆ, ದಟ್ಟಣೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ಸಂಖ್ಯೆ: ಟಿಡಿ 156 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 3568
ಉತ್ತರಿಸಬೇಕಾದ ದಿನಾಂಕ – 24-03-2021
ಸದಸ್ಯರ ಹೆಸರು – ಶ್ರೀ ಖಾದರ್ ಯು. ಟಿ. (ಮಂಗಳೂರು)
ಉತ್ತರಿಸುವ ಸಚಿವರು – ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	2018 ರಿಂದ 2020 ಮಾರ್ಚ್ ಅವಧಿಯ ತನಕ ಬಿದಾಯಿ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2247 ಅರ್ಜಿಗಳಿಗೆ ಸಹಾಯಧನ ವಿತರಿಸಲು ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ, ಯಾವಾಗ ಸಹಾಯಧನ ವಿತರಿಸಲಾಗುವುದು;	2019-20ನೇ ಸಾಲಿನಲ್ಲಿ ಬಿದಾಯಿ ಯೋಜನೆಯಡಿ One Time Settlement ಮಾದರಿಯಲ್ಲಿ ಎಲ್ಲಾ ಜಿಲ್ಲೆಗಳ ಬಾಕಿ ಇರುವ ಪ್ರತಿ ಅರ್ಹ ಅರ್ಜಿದಾರರಿಗೆ ರೂ.25,000/- ಗಳಂತೆ Beneficiary Management System ರಡಿ ಸಹಾಯಧನ ಮಂಜೂರು ಮಾಡಲಾಗಿತ್ತು. ಆದರೆ ಖಜಾನೆ-2 ರಲ್ಲಿ ಜಿಲ್ಲೆಯ 2247 ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಸಹಾಯಧನ ಜಮೆಯಾಗಲು ವಿಳಂಬವಾಗಿರುತ್ತದೆ. ತಾಂತ್ರಿಕ ದೋಷವನ್ನು ನಿವಾರಿಸಿ, ಕೂಡಲೇ ಸದರಿ ಜಿಲ್ಲೆಯ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಸಹಾಯಧನ ಜಮೆ ಮಾಡಲು ಕ್ರಮವಹಿಸಲಾಗುವುದು.
ಆ)	ಅರಿವು ಯೋಜನೆಯಲ್ಲಿ ವಿದ್ಯಾರ್ಥಿಗಳಿಗೆ ಈವರೆವಿಗೆ ಹಣ ಬಿಡುಗಡೆಯಾಗದಿರಲು ಕಾರಣವೇನು; ಹಾಗೂ ಪ್ರಸಕ್ತ ವರ್ಷ ಅರಿವು ಯೋಜನೆಯಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡದಿರಲು ಕಾರಣವೇನು; (ವಿವರ ನೀಡುವುದು)	• 2019-20ನೇ ಸಾಲಿನಲ್ಲಿ ಬಾಕಿ ಉಳಿದಿರುವ 13027 ಹೆಚ್ಚುವರಿ ಅರ್ಜಿಗಳ ಪೈಕಿ 4361 ವಿದ್ಯಾರ್ಥಿಗಳಿಗೆ 2020-21ನೇ ಸಾಲಿನಲ್ಲಿ ರೂ.12.39 ಕೋಟಿ ಅರಿವು ವಿದ್ಯಾಭ್ಯಾಸ ಸಾಲ ಬಿಡುಗಡೆ ಮಾಡಲಾಗಿದೆ. • 2020-21ನೇ ಸಾಲಿನಲ್ಲಿ CET/NEET ವಿದ್ಯಾರ್ಥಿಗಳಿಗೆ ಮಾತ್ರ ಅರಿವು ಸಾಲವನ್ನು ಬಿಡುಗಡೆ ಮಾಡಲು ರೂ.10.00 ಕೋಟಿ ಮೊತ್ತವನ್ನು KEA ಸಂಸ್ಥೆಗೆ ನೀಡಲಾಗಿದೆ. ಹಾಗೂ ಪ್ರಸ್ತುತ ಸಾಲಿನಲ್ಲಿ ಕೋವಿಡ್-19 ಪರಿಸ್ಥಿತಿ ಇರುವ ಕಾರಣದಿಂದ ಆರ್ಥಿಕ ಇಲಾಖೆಯಿಂದ ಅನುದಾನ ಕಡಿತಗೊಳಿಸಿರುವುದರಿಂದ ಸಾಮಾನ್ಯ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅರಿವು ವಿದ್ಯಾಭ್ಯಾಸ ಸಾಲ ಬಿಡುಗಡೆ ಮಾಡಲು ಹೊಸ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ.

MWD 144 LMQ 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : **ಶ್ರೀ ಖಾದರ್ ಯು.ಟಿ**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : **3569**

ಉತ್ತರಿಸಬೇಕಾದ ಸಚಿವರು : **ಮಾನ್ಯ ಕೃಷಿ ಸಚಿವರು**

ಉತ್ತರಿಸಬೇಕಾದ ದಿನಾಂಕ : **24-03-2021**

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಸಾವಯವ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಇದೆಯೇ;	ಇದೆ.
ಆ	ಇದ್ದಲ್ಲಿ, ಸದರಿ ಸಾವಯವ ಕೃಷಿ ವಿಶ್ವವಿದ್ಯಾಲಯವನ್ನು ರಾಜ್ಯದ ಯಾವ ಸ್ಥಳದಲ್ಲಿ ಮತ್ತು ಯಾವ ವರ್ಷದಲ್ಲಿ ಸ್ಥಾಪಿಸಲಾಗುವುದು? (ವಿವರ ನೀಡುವುದು)	ದಿನಾಂಕ:11.02.2021 ರಂದು ನಡೆದ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಸಭೆಯಲ್ಲಿ ನಿರ್ಣಯಿಸಿದಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಸಾವಯವ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ.

ಸಂಖ್ಯೆ:AGRI-AUM/6/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3570
ಸದಸ್ಯರ ಹೆಸರು	:	ಶ್ರೀ ಖಾದರ್ ಯು.ಟಿ. (ಮಂಗಳೂರು)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ	:	24/03/2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಅಂಗನವಾಡಿ ಕೇಂದ್ರಗಳಿಗೆ ಹೊಸದಾಗಿ ಕಟ್ಟಡ ನಿರ್ಮಿಸಲು ಉದ್ದೇಶ ಸರ್ಕಾರಕ್ಕಿದೆಯೇ; ಇದ್ದಲ್ಲಿ, 2020-21ನೇ ಸಾಲಿನಲ್ಲಿ ಎಷ್ಟು ಕೇಂದ್ರಗಳಿಗೆ ಕಟ್ಟಡ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ? (ವಿವರ ನೀಡುವುದು.)	2020-21ನೇ ಸಾಲಿನಲ್ಲಿ ಹೊಸ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕಾಗಿ ಈ ಕೆಳಗಿನಂತೆ ಅನುದಾನ ಬಿಡುಗಡೆಯಾಗಿದೆ. (ಕೆಳಗಿನ ಕೋಷ್ಟಕ ನೋಡಿ)

ಕ್ರ.ಸಂ	ಯೋಜನೆ	ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)	ಕಟ್ಟಡಗಳ ಸಂಖ್ಯೆ
1.	ನರೇಗಾ ಒಗ್ಗೂಡಿಸುವಿಕೆ	500.00	100
2.	ವಿಶೇಷ ಅಭಿವೃದ್ಧಿ ಯೋಜನೆ-ನರೇಗಾ	1990.00	398
3.	ವಿಶೇಷ ಅಭಿವೃದ್ಧಿ ಯೋಜನೆ	8775.00	512
4.	ಎಸ್.ಸಿ.ಪಿ./ಟಿ.ಎಸ್.ಪಿ. ಅನುದಾನ ಉಳಿಕೆ ಮೊತ್ತ	330.00	19
5.	ಆರ್.ಐ.ಡಿ.ಎಫ್.-25*	5000.00	306
	ಒಟ್ಟು	16595.00	1335

*2019-20ನೇ ಸಾಲಿನಲ್ಲಿ ಮಳೆಹಾನಿಯಿಂದ ಶಿಥಿಲಗೊಂಡ 18 ಜಿಲ್ಲೆಗಳ ಒಟ್ಟು 842 ಅಂಗನವಾಡಿ ಕಟ್ಟಡಗಳನ್ನು ರೂ. 13378.00 ಲಕ್ಷಗಳ ವೆಚ್ಚದಲ್ಲಿ ಮರುನಿರ್ಮಾಣ ಮಾಡಲು ಸರ್ಕಾರದ ಆದೇಶ ದಿನಾಂಕ 11.03.2020ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಸಂಬಂಧ 2020-21ನೇ ಸಾಲಿನ ಆಯವ್ಯಯದಲ್ಲಿ ರೂ.5000.00 ಲಕ್ಷ ಅನುದಾನ ಒದಗಿಸಿ ಬಿಡುಗಡೆ ಮಾಡಲಾಗಿರುತ್ತದೆ.

ಸಂಖ್ಯೆ: ಮಮಇ 133 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3571
ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ. (ಮಂಗಳೂರು)
ಉತ್ತರಿಸುವ ದಿನಾಂಕ : 24-03-2021.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಒಂದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಜಮೀನು ಹೊಂದಿರುವ ವ್ಯಕ್ತಿಯೊಬ್ಬರು ಇನ್ನೊಂದು ಗ್ರಾಮ ಪಂಚಾಯಿತಿಯಲ್ಲಿ ಅಥವಾ ಪಟ್ಟಣ ಪಂಚಾಯಿತಿಯಲ್ಲಿ ಜಮೀನು ಹೊಂದಿರುವ ವ್ಯಕ್ತಿಯೊಬ್ಬರ ಜತೆಗೆ ತಮ್ಮ ತಮ್ಮ ಜಮೀನನ್ನು ಪರಸ್ಪರ ಬದಲಾಯಿಸಿ ನಮೂನೆ 9 & 11 ಆಧಾರದ ಮೇಲೆ ನೋಂದಾಯಿಸಿಕೊಂಡಲ್ಲಿ ಇ-ಸ್ವತ್ತು ತಂತ್ರಾಂಶದಲ್ಲಿ ಖಾತಾ ಬದಲಾವಣೆಗೆ ಅವಕಾಶವಿರುವುದೇ;	ಒಂದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಆಸ್ತಿ ಹೊಂದಿರುವ ಮಾಲೀಕರು ಇನ್ನೊಂದು ಗ್ರಾಮ ಪಂಚಾಯಿತಿಯಲ್ಲಿ ಆಸ್ತಿ ಹೊಂದಿರುವ ಮಾಲೀಕರೊಬ್ಬರ ಜತೆಗೆ ತಮ್ಮ ತಮ್ಮ ಆಸ್ತಿಯನ್ನು ಪರಸ್ಪರ ಬದಲಾಯಿಸಿಕೊಂಡು ನಮೂನೆ 9 & 11ಎ ಆಧಾರದ ಮೇಲೆ ಉಪನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಾಯಿಸಿಕೊಂಡಲ್ಲಿ ಇ-ಸ್ವತ್ತು ತಂತ್ರಾಂಶದಲ್ಲಿ ಮ್ಯುಟೇಷನ್ ಮಾಡಲು ಅವಕಾಶವಿರುತ್ತದೆ.
(ಆ)	ಇಲ್ಲದಿದ್ದಲ್ಲಿ, ಇಂತಹ ಪ್ರಕರಣಗಳು ಇದ್ದಾಗ ಖಾತಾ ಬದಲಾವಣೆಯನ್ನು ಮಾಡಲು ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುವುದು?	ಮೇಲಿನ 'ಅ' ಪ್ರಶ್ನೆಗೆ ನೀಡಿರುವ ಉತ್ತರದಿಂದ 'ಆ' ಪ್ರಶ್ನೆ ಉದ್ಭವಿಸುವುದಿಲ್ಲ.

ಸಂ. ಗ್ರಾಅಪ 165 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3572
ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ.
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 24-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕೆ.ಎಸ್.ಆರ್.ಟಿ.ಸಿ ಮಂಗಳೂರು ವಿಭಾಗದಲ್ಲಿ ಎಷ್ಟು ಹುದ್ದೆಗಳು ಖಾಲಿಯಿವೆ;	ಕೆ.ಎಸ್.ಆರ್.ಟಿ.ಸಿ ಮಂಗಳೂರು ವಿಭಾಗದಲ್ಲಿ ಅಧಿಕಾರಿ/ಸಿಬ್ಬಂದಿಗಳ ಒಟ್ಟು 110 ಹುದ್ದೆಗಳು ಖಾಲಿ ಇರುತ್ತದೆ.
ಆ)	ಖಾಲಿಯಿರುವ ಹುದ್ದೆಗಳನ್ನು ಭರ್ತಿಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ;	ಖಾಲಿ ಇರುವ ಹುದ್ದೆಗಳ ಪೈಕಿ ಮುಂಬಡ್ತಿಗೆ ಮೀಸಲಾಗಿರುವ ಹುದ್ದೆಗಳನ್ನು ವಿಭಾಗದ ಅಗತ್ಯಕ್ಕೆ ತಕ್ಕಂತೆ ತುಂಬಲು ಕ್ರಮ ಜರುಗಿಸಲಾಗುತ್ತದೆ. ನಿಗಮದ ವ್ಯಾಪ್ತಿಯಲ್ಲಿನ ಎಲ್ಲಾ ವಿಭಾಗಗಳಲ್ಲಿ ನೇರ ನೇಮಕಾತಿಗಾಗಿ ಖಾಲಿ ಇರುವ ಹುದ್ದೆಗಳನ್ನು ಕ್ರೋಢೀಕರಿಸಿ ಪ್ರಚಲಿತ ಸರ್ಕಾರದ ಮೀಸಲಾತಿ ನಿಯಮಾವಳಿಗಳನ್ವಯ ಕೇಂದ್ರ ಕಛೇರಿಯಲ್ಲಿ ನೇಮಕ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ನಿಗಮದಲ್ಲಿ ನೇರ ನೇಮಕಾತಿಗಾಗಿ ಪ್ರಸ್ತುತ ಚಾಲ್ತಿಯಲ್ಲಿರುವ ತಾಂತ್ರಿಕ ಸಹಾಯಕ – 726 ಹುದ್ದೆಗಳಿಗೆ ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ನಡೆಸಿ ಅಂಕಗಳನ್ನು ಪ್ರಕಟಿಸಲಾಗಿದೆ. ಮೂಲ ದಾಖಲಾತಿ/ದೇಹದಾರ್ಢ್ಯತೆ ಪರಿಶೀಲನೆಗೆ ಬಾಕಿ ಇರುತ್ತದೆ. ಭದ್ರತಾ ರಕ್ಷಕ – 200 ಹುದ್ದೆಗಳಿಗೆ ಸಾಮಾನ್ಯ ಸಾಮರ್ಥ್ಯ ಪರೀಕ್ಷೆ ನಡೆಸಿ ಅಂಕಗಳನ್ನು ಪ್ರಕಟಿಸಲಾಗಿದೆ. ಮೂಲ ದಾಖಲಾತಿ, ದೇಹದಾರ್ಢ್ಯತೆ ಮತ್ತು ದೈಹಿಕ ಸಾಮರ್ಥ್ಯ ಪರೀಕೆಗಾಗಿ ಬಾಕಿ ಇರುತ್ತದೆ. ಚಾಲಕ – 1200 ಮತ್ತು ಚಾ–ಕಂ–ನಿರ್ವಾಹಕ – 2545 ಹುದ್ದೆಗಳಿಗೆ ಜಾಹೀರಾತು ಪ್ರಕಟಿಸಿ, ಆನ್‌ಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಿದ್ದು, ಚಾಲನಾ ವೃತ್ತಿ ಪರೀಕ್ಷೆ ನಡೆಸಬೇಕಾಗಿರುತ್ತದೆ. ಈ ಮಧ್ಯೆ, ಕೋವಿಡ್–19ರ ಹಿನ್ನಲೆಯಲ್ಲಿ ಆರ್ಥಿಕ ಇಲಾಖೆಯು ನೇರ ನೇಮಕಾತಿ ಪ್ರಕ್ರಿಯೆಗಳನ್ನು ತಾತ್ಕಾಲಿಕವಾಗಿ ತಡೆಹಿಡಿಯುವಂತೆ ನಿರ್ಬಂಧಿಸಿದ್ದು, ಸದರಿ ನಿರ್ಭಂಧ ತೆರವುಗೊಳಿಸಿದ ನಂತರ ನೇರ ನೇಮಕಾತಿ ಮೂಲಕ ಹುದ್ದೆಗಳನ್ನು ಭರ್ತಿಗೊಳಿಸುವ ಕುರಿತು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.
ಇ)	ಉದ್ದೇಶಿಸಿದ್ದಲ್ಲಿ ಯಾವಾಗ ಭರ್ತಿ ಮಾಡಲಾಗುವುದು?	

ಸಂಖ್ಯೆ: ಟಿಡಿ 157 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3577
ಸದಸ್ಯರ ಹೆಸರು	:	ಶ್ರೀ ವೆಂಕಟರೆಡ್ಡಿ ಮುದ್ನಾಳ (ಯಾದಗಿರಿ)
ಉತ್ತರಿಸಬೇಕಾದ ದಿನಾಂಕ	:	24-03-2021.
ಉತ್ತರಿಸುವ ಸಚಿವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಯಾದಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾದಗಿರಿ ನಗರದ ಖಬರಸ್ತಾನದ ಸ್ಥಳದಲ್ಲಿ ಅಕ್ರಮವಾಗಿ ಮಳಿಗೆಗಳನ್ನು ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಯಾದಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಯಾದಗಿರಿ ನಗರದ ಖಬರಸ್ತಾನದ ಸ್ಥಳದಲ್ಲಿ ಅಕ್ರಮವಾಗಿ ಮಳಿಗೆಗಳನ್ನು ನಿರ್ಮಾಣ ಮಾಡುತ್ತಿರುವ ಕುರಿತಂತೆ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಆ.	ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು;	ಉದ್ಭವಿಸುವುದಿಲ್ಲ
ಇ.	ಅಧಿಕಾರಿಗಳಿಗೆ ಮಾಹಿತಿ ಇದ್ದರೂ ಯಾವುದೇ ಕ್ರಮ ಕೈಗೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು?	ಉದ್ಭವಿಸುವುದಿಲ್ಲ

ಸಂಖ್ಯೆ: **MWD 154 LMQ 2021**

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3586
ಮಾನ್ಯ ಸದಸ್ಯರ ಹೆಸರು : ಶ್ರೀ. ರಾಜೀವ್ ಪಿ. (ಕುಡಚಿ)
ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು
ಉತ್ತರಿಸಬೇಕಾದ ದಿನಾಂಕ : 24-03-2021.

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಗಳನ್ನು ಕೈಗೊಳ್ಳಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮಹಿಳೆಯರ ಅಬಿವೃದ್ಧಿಗಾಗಿ ಬೆಳಗಾವಿ ಜಿಲ್ಲೆಯಲ್ಲಿ ಕೈಗೊಳ್ಳಲಾದ ಯೋಜನೆಗಳು. 1. ಉದ್ಯೋಗಿನಿ 2. ಕಿರುಸಾಲ 3. ಸಮೃದ್ಧಿ 4. ಚೇತನಾ 5. ಧನಶ್ರೀ 6. ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ 7. ದೇವದಾಸಿ ಪುನರ್ವಸತಿ 8. ಮಾಜಿ ದೇವದಾಸಿಯರಿಗೆ ಮಾಸಾಶನ. 9. ಮಾಜಿ ದೇವದಾಸಿಯರಿಗೆ ವಸತಿ ನಿರ್ಮಾಣ 10. ಕೆ.ಎಸ್.ಎಫ್.ಸಿ ಮೂಲಕ ಬಡ್ಡಿ ಸಹಾಯಧನ ಯೋಜನೆ. ಮೇಲ್ಕಂಡ ಎಲ್ಲಾ ಯೋಜನೆಗಳನ್ನು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯೂ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಕೆ.ಎಸ್.ಎಫ್.ಸಿ ಯೋಜನೆಯನ್ನು ಕಳೆದ ಮೂರು ವರ್ಷಗಳಲ್ಲಿ ಅಥಣಿ, ಬೆಳಗಾವಿ, ಚಿಕ್ಕೋಡಿ, ಗೋಕಾಕ್, ಹುಕ್ಕೇರಿ, ರಾಯಬಾಗ್ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಅನುಷ್ಠಾಗೊಳಿಸಲಾಗಿದೆ.
ಆ)	ಕೆಲವೊಂದು ಯೋಜನೆಗಳು ಇದುವರೆಗೆ ಅನುಷ್ಠಾನಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಎಲ್ಲಾ ಯೋಜನೆಗಳನ್ನು ಅನುಷ್ಠಾಗೊಳಿಸಲಾಗಿದೆ.
ಇ)	ಸರ್ಕಾರ ಕೂಡಲೇ ಯೋಜನೆಯನ್ನು ಅನುಷ್ಠಾನಗೊಳಿಸಿ, ಅನುದಾನ ಬಿಡುಗಡೆ ಮಾಡಲಾಗುವುದೇ?	ಅನ್ವಯಿಸುವುದಿಲ್ಲ

ಸಂಖ್ಯೆ: ಮಮಇ/35/ಮಅನಿ2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3591
ಸದಸ್ಯರ ಹೆಸರು	:	ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು)
ಉತ್ತರಿಸಬೇಕಾದ ದಿನಾಂಕ	:	24-03-2021.
ಉತ್ತರಿಸುವ ಸಚಿವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ.	ರಾಜ್ಯಾದ್ಯಂತ ಮುಸಲ್ಮಾನರ ಮಸೀದಿ ನಿರ್ಮಾಣಗಳಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಅನುದಾನ ನೀಡಲಾಗುತ್ತಿದೆಯೇ;	ಇಲ್ಲ
ಆ.	ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಿಂದ ಮಸೀದಿಗಳ ನಿರ್ಮಾಣಕ್ಕೆ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು; ಹುಣಸೂರು ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಷ್ಟು ಮಸೀದಿಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ; (ಗ್ರಾಮವಾರು ವಿವರ ನೀಡುವುದು)	ಅನ್ವಯಿಸುವುದಿಲ್ಲ
ಇ.	ಮಸೀದಿಗಳ ನಿರ್ಮಾಣಕ್ಕೆ ಅನುದಾನ ನೀಡಲು ಇರುವ ಮಾನದಂಡಗಳೇನು; (ವಿವರ ನೀಡುವುದು)	ಮಸೀದಿಗಳ ನಿರ್ಮಾಣಕ್ಕೆ ಅನುದಾನ ನೀಡಲು ಯಾವುದೇ ಮಾನದಂಡಗಳು ಇರುವುದಿಲ್ಲ.
ಈ	ಈಗಾಗಲೇ ಸ್ವಂತ ಹಣದಿಂದ ನಿರ್ಮಿಸಿರುವ ಮಸೀದಿಗಳಿಗೆ ಅನುದಾನ ನೀಡಲಾಗುವುದೆ; ಯಾವ ರೀತಿ ಕ್ರಮ ಕೈಗೊಂಡು ಯಾವಾಗ ನೀಡಲಾಗುವುದು; (ವಿವರ ನೀಡುವುದು)	ವಕ್ಫ್ ಸಂಸ್ಥೆಗಳು ಸ್ವಂತ ಹಣದಿಂದ ನಿರ್ಮಿಸಿರುವ ಮಸೀದಿಗಳಿಗೆ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಹಾಗೂ ಕಾಂಪೌಂಡ್ ಗೋಡೆ ನಿರ್ಮಿಸಲು ಸರ್ಕಾರದಿಂದ ಸಹಾಯಾನುದಾನ ಬಿಡುಗಡೆ ಮಾಡಲಾಗುವುದು.
ಉ	ಅನುದಾನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರದೆ ಇದ್ದರೆ ಕಾರಣಗಳೇನು;	ಜಿಲ್ಲೆಗಳಿಂದ ಬಂದಂತಹ ಪ್ರಸ್ತಾವನೆಗಳನ್ನು ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸಲಾಗುತ್ತದೆ.
ಊ	ಹೊಸದಾಗಿ ಮಸೀದಿಗಳ ನಿರ್ಮಾಣಕ್ಕೆ ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಬಂದಿರುವ ಬೇಡಿಕೆಗಳೆಷ್ಟು? (ಬೇಡಿಕೆಗಳ ಪಟ್ಟಿ ಸಹಿತ ವಿವರ ನೀಡುವುದು)	ಹೊಸದಾಗಿ ಮಸೀದಿಗಳ ನಿರ್ಮಾಣಕ್ಕೆ ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಯಾವುದೇ ಬೇಡಿಕೆಗಳು ಬಂದಿರುವುದಿಲ್ಲ.

ಸಂಖ್ಯೆ: MWD 153 LMQ 2021

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3593
ಸದಸ್ಯರ ಹೆಸರು : ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು)
ಉತ್ತರಿಸುವ ದಿನಾಂಕ : 24-03-2021.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದ ಗ್ರಾಮ ಪಂಚಾಯತ್‌ಗಳಲ್ಲಿ ಹೆಚ್ಚಿನ ಕೆಲಸ ಕಾರ್ಯಗಳನ್ನು ಕಂಪ್ಯೂಟರ್ ಹಾಗೂ ಮೊಬೈಲ್‌ಗಳ ಮುಖಾಂತರ ಆನ್‌ಲೈನ್‌ನಲ್ಲಿಯೇ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಆ)	ಗ್ರಾಮ ಪಂಚಾಯತ್‌ಗಳಲ್ಲಿ ಬಾಪೂಜಿ ಸೇವಾ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ಅದಕ್ಕೆ ಕಂಪ್ಯೂಟರ್ ಆಪರೇಟರ್‌ಗಳನ್ನು ಒದಗಿಸಲಾಗಿದೆಯೇ;	ಹಾಲಿ ಗ್ರಾಮ ಪಂಚಾಯತಿಗಳಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ನೌಕರರಿಂದ ಬಾಪೂಜಿ ಸೇವಾ ಕೇಂದ್ರದ ಸೇವೆಗಳನ್ನು ಒದಗಿಸಲಾಗುತ್ತಿದೆ.
(ಇ)	ಗ್ರಾಮ ಪಂಚಾಯತ್‌ಗಳಲ್ಲಿ ಹೆಚ್ಚಿನ ಕೆಲಸಗಳು ಕಂಪ್ಯೂಟರ್ ಮತ್ತು ಮೊಬೈಲ್ ಮೂಲಕ ಆನ್‌ಲೈನ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಕಂಪ್ಯೂಟರ್ ಆಪರೇಟರ್ ಹುದ್ದೆಯನ್ನು ಪ್ರತ್ಯೇಕವಾಗಿ ಸೃಜಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016, ದಿನಾಂಕ:29-09-2020 ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು, ನೇಮಕಾತಿ ವಿಧಾನ ಮತ್ತು ಇತರೆ ಸೇವಾ ಷರತ್ತುಗಳು) ನಿಯಮಗಳು, 2020 ಅನ್ನು ರೂಪಿಸಲಾಗಿದ್ದು, ಅದರಲ್ಲಿ ಡಾಟಾ ಎಂಟ್ರಿ ಆಪರೇಟರ್ ಹುದ್ದೆ ನಿರ್ದಿಷ್ಟಪಡಿಸಲಾಗಿದೆ.
(ಈ)	ಗ್ರಾಮ ಪಂಚಾಯತ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳಿಗೆ ಪಾವತಿಸಲಾಗುತ್ತಿರುವ ವೇತನದ ಮೊತ್ತವನ್ನು ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಣೆ ವ್ಯಕ್ತಪಡಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ.

ಸಂ. ಗ್ರಾಅಪ 166 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3594
2. ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ.ಸುಕುಮಾರ್ ಶೆಟ್ಟಿ ಬಿ.ಎಂ (ಬೈಂದೂರು)
3. ಉತ್ತರಿಸಬೇಕಾದ ದಿನಾಂಕ : 24-03-2021.
4. ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಬೈಂದೂರು ವಿಧಾನಸಭಾ ಕ್ಷೇತ್ರದ ಬೈಂದೂರು ಹೊಸ ತಾಲ್ಲೂಕಿನಲ್ಲಿ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಛೇರಿ ಕಾರ್ಯಾರಂಭಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಆ)	ಈ ಹೊಸ ತಾಲ್ಲೂಕಿನಲ್ಲಿ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಛೇರಿ ತೆರೆಯುವ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಬೈಂದೂರು ವಿಧಾನಸಭಾ ಕ್ಷೇತ್ರದ ಬೈಂದೂರು ಹೊಸ ತಾಲ್ಲೂಕಿನಲ್ಲಿ ಸಹಾಯಕ ತೋಟಗಾರಿಕಾ ನಿರ್ದೇಶಕರ ಕಛೇರಿ ಆರಂಭಿಸುವ ಸಂಬಂಧ ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಮುಂದಿನ 4 ವರ್ಷಗಳ ಅವಧಿಯವರೆಗೆ ಹೊಸ ತಾಲ್ಲೂಕು ರಚನೆಯಾಗುವ ಪೂರ್ವ ಇದ್ದಂತಹ ಹಳೆಯ ತಾಲ್ಲೂಕುಗಳಲ್ಲಿ, ಹಾಲಿ ಇರುವ ಅಧಿಕಾರಿ ಮತ್ತು ಸಿಬ್ಬಂದಿಗಳಿಂದಲೇ ಕೆಲಸ ನಿರ್ವಹಿಸಲು ಆರ್ಥಿಕ ಇಲಾಖೆಯ ಸೂಚನೆ ಇರುತ್ತದೆ.
ಇ)	ಸಹಾಯಕ ತೋಟಗಾರಿಕಾ ನಿರ್ದೇಶಕರ ಕಛೇರಿ ಯಾವ ಕಾಲಮಿತಿಯಲ್ಲಿ ಕಾರ್ಯಾರಂಭಗೊಳ್ಳುವುದು?.	

ಸಂಖ್ಯೆ: HORT! 200 HGM 2021

(ಆರ್.ಶಂಕರ್)

ತೋಟಗಾರಿಕೆ ಮತ್ತು ರೇಷ್ಮೆ

ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3595
ಸದಸ್ಯರ ಹೆಸರು	:	ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.
ಉತ್ತರಿಸುವ ದಿನಾಂಕ	:	24.03.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಬೈಂದೂರು ವಿಧಾನಸಭಾ ಕ್ಷೇತ್ರದ ಬೈಂದೂರು ಹೊಸ ತಾಲ್ಲೂಕಿನಲ್ಲಿ, ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಛೇರಿ ಕಾರ್ಯಾರಂಭಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.
ಆ)	ಈ ಹೊಸ ತಾಲ್ಲೂಕಿನ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಛೇರಿ ತೆರೆಯುವ ಪ್ರಸ್ತಾವನೆ ಯಾವ ಹಂತದಲ್ಲಿದೆ;	ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಬೈಂದೂರಿನಲ್ಲಿ ಹೊಸದಾಗಿ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಪ್ರಾರಂಭಿಸುವ ಕುರಿತು, ಈಗಾಗಲೇ ಮಂಜೂರಾತಿ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.
ಇ)	ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಛೇರಿ ಯಾವ ಕಾಲಮಿತಿಯಲ್ಲಿ ಕಾರ್ಯಾರಂಭಗೊಳ್ಳುವುದು?	ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತ ಕೂಡಲೇ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಯ ಕಛೇರಿಯನ್ನು ಕಾರ್ಯಾರಂಭ ಮಾಡಲಾಗುವುದು.

ಸಂ. ಮಮಇ 121 ಎಸ್‌ಜೆಡಿ 2021

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 3597

ಸದಸ್ಯರ ಹೆಸರು : ಶ್ರೀ. ಸುಬ್ಬಾರೆಡ್ಡಿ ಎಸ್. ಎನ್. (ಬಾಗೇಪಲ್ಲಿ)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 24.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಒಟ್ಟು ಎಷ್ಟು ಜಮೀನಿನಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ; ಎಷ್ಟು ಕುಟುಂಬಗಳು, ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ;	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 7120 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. 3966 ಸಂಖ್ಯೆ ರೈತ ಕುಟುಂಬಗಳು ತೋಟಗಾರಿಕಾ ಬೆಳೆಗಳಾದ ಮಾವು, ಸೀಬೆ, ದಾಳಿಂಬೆ, ತೆಂಗು, ಕಲ್ಲಂಗಡಿ, ಕರಬೂಜ, ಟೊಮ್ಯಾಟೋ, ಬದನೆ, ಬೀನ್ಸ್, ಬೆಂಡೆಕಾಯಿ, ಆಲೂಗಡ್ಡೆ, ಈರುಳ್ಳಿ, ಮೂಲಂಗಿ, ಹೂಕೋಸು, ಕ್ಯಾರೆಟ್, ಕ್ಯಾಪ್ಸಿಕಮ್, ಸೌತೆಕಾಯಿ, ಗುಲಾಬಿ, ಚೆಂಡು ಹೂ ಹಾಗೂ ಸೇವಂತಿಗೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ.
ಆ)	ಈ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಿಗೆ ಕಳೆದ 3 ವರ್ಷಗಳಿಂದ ಎಷ್ಟು ಸಹಾಯಧನ ಮಂಜೂರು ಮಾಡಲಾಗಿದೆ; (ವಿವರ ನೀಡುವುದು)	ಈ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ರೈತರಿಗೆ ಕಳೆದ ಮೂರು ವರ್ಷಗಳಿಂದ ಅಂದರೆ 2017-18 ರಿಂದ 2019-20ನೇ ಸಾಲಿನವರೆಗೆ ಒಟ್ಟು ರೂ.26.83 ಕೋಟಿಗಳ ಸಹಾಯಧನ ಮಂಜೂರು ಮಾಡಲಾಗಿದೆ. ವಿವರ ಈ ಕೆಳಗಿನಂತಿದೆ.

ವರ್ಷ	2017-18	2018-19	2019-20	ಒಟ್ಟು
ಮಂಜೂರಾದ ಅನುದಾನ (ರೂ.ಕೋಟಿಗಳಲ್ಲಿ)	5.67	8.86	12.29	26.83

ಕ್ರ.ಸಂ.	ಪ್ರಶ್ನೆ	ಉತ್ತರ
ಇ)	ಕೆಲ ರೈತರ ಹೆಸರಿನಲ್ಲಿ ಕೃಷಿ ಇಲಾಖೆ ಹಾಗೂ ತೋಟಗಾರಿಕಾ ಇಲಾಖೆ ಎರಡೂ ಕಡೆ ಹನಿ ನೀರಾವರಿ ಹಾಗೂ ತುಂತುರು ನೀರಾವರಿ ಅಳವಡಿಸುವ ಏಜೆನ್ಸಿಯವರು ಸಹಾಯಧನವನ್ನು ಪಡೆಯುತ್ತಿರುವುದು ನಿಜವೇ? (ವಿವರ ನೀಡುವುದು)	PMKSY ಯೋಜನೆಯ ಮಾರ್ಗಸೂಚಿಗಳನ್ವಯ ರೈತರಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಒಂದು ವೇಳೆ ರೈತರು NOC ನೀಡಿದಲ್ಲಿ ರೈತರ ಸಹಾಯಧನವನ್ನು ಏಜೆನ್ಸಿರವರಿಗೆ ನೀಡಲಾಗುತ್ತಿದೆ. ಒಬ್ಬ ರೈತರಿಗೆ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳು ಸೇರಿ ಗರಿಷ್ಠ 5.0 ಹೆ. ಪ್ರದೇಶದವರೆಗೆ ಸಹಾಯಧನ ಪಡೆಯಲು ಅವಕಾಶವಿರುತ್ತದೆ.

ಸಂಖ್ಯೆ: HORT! 201 HGM 2021

(ಆರ್. ಶಂಕರ್)

ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 3615
ಸದಸ್ಯರ ಹೆಸರು	: ಶ್ರೀ ರೇವಣ್ಣ ಹೆಚ್.ಡಿ.
ಉತ್ತರಿಸುವ ಸಚಿವರು	: ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ	: 24-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಹಾಸನ ನಗರದಲ್ಲಿ ಸುಮಾರು 100 ವರ್ಷಗಳ ಹಳೆಯದಾದ ಕರ್ನಾಟಕ ಇಂಪ್ಲಿಮೆಂಟೇಶನ್ ಫ್ಯಾಕ್ಟರಿಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪ್ರಾದೇಶಿಕ ಕಾರ್ಯಾಗಾರವಾಗಿ (ಬಸ್ಸುಗಳ ಬಾಡಿ ನಿರ್ಮಾಣ ಮಾಡುವ) ನವೀಕರಣ ಮಾಡುವ ಕಾಮಗಾರಿಗೆ ಅಂದಾಜು ಮೊತ್ತ ರೂ.42.00 ಕೋಟಿ ಅನುದಾನ ಮಂಜೂರಾಗಿದ್ದು, ರೂ.31.00 ಕೋಟಿ ಮೊತ್ತಕ್ಕೆ ಟೆಂಡರ್ ಕರೆದಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಹಾಸನ ನಗರದಲ್ಲಿರುವ ಪ್ರಾದೇಶಿಕ ಕಾರ್ಯಾಗಾರವನ್ನು ಅಭಿವೃದ್ಧಿಪಡಿಸುವ ಕಾಮಗಾರಿ ಕೆಲಸಗಳನ್ನು ಮತ್ತು ನೂತನ ಯಂತ್ರೋಪಕರಣಗಳನ್ನು ಅಳವಡಿಸುವ ಯೋಜನೆಗೆ ರೂ.42.00 ಕೋಟಿಗಳ ಯೋಜನಾ ವೆಚ್ಚದಲ್ಲಿ ಹಂತಹಂತವಾಗಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಒಟ್ಟಾರೆ ಯೋಜನೆಯ ಮೊತ್ತವಾದ ರೂ.42.00 ಕೋಟಿಗಳಲ್ಲಿ ರೂ.10.00 ಕೋಟಿಗಳನ್ನು ಆಧುನಿಕ ಯಂತ್ರೋಪಕರಣಗಳಿಗಾಗಿ ಮೀಸಲಿರಿಸಲಾಗಿದೆ. ಅದರಂತೆ ಕಾಮಗಾರಿ ಕೆಲಸಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಆ)	ಹಾಗಿದ್ದಲ್ಲಿ, ಈ ನವೀಕರಣ ಕಾಮಗಾರಿಯನ್ನು ಇ-ಪ್ರೊಕ್ಯೂರ್ಮೆಂಟ್‌ಗಳ ಮೂಲಕ ರೂ.31.00 ಕೋಟಿಗಳಿಗೆ ಕರೆದಿರುವ ಟೆಂಡರ್‌ನಲ್ಲಿ ಎಷ್ಟು ಅರ್ಹ ಗುತ್ತಿಗೆದಾರರು ಭಾಗವಹಿಸಿದ್ದರು; ಟೆಂಡರ್ ಯಾವ ಹಂತದಲ್ಲಿದೆ; (ಸಂಪೂರ್ಣ ಮಾಹಿತಿ ನೀಡುವುದು)	ಸದರಿ ಟೆಂಡರ್‌ನಲ್ಲಿ ಒಟ್ಟು 6 ಜನ ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಗುತ್ತಿಗೆದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ ಟೆಂಡರ್‌ನ ತಾಂತ್ರಿಕ ಬಿಡ್‌ನಲ್ಲಿ 5 ಜನ ಗುತ್ತಿಗೆದಾರರು ಅನರ್ಹಗೊಂಡಿದ್ದು, ಒಬ್ಬರೇ ಗುತ್ತಿಗೆದಾರರು ಅರ್ಹಗೊಂಡಿರುವ ಹಿನ್ನೆಲೆಯಲ್ಲಿ ಸದರಿ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಲಾಗಿರುತ್ತದೆ. ಸದರಿ ಕಾಮಗಾರಿಗಾಗಿ ಇದುವರೆಗೂ ರೂ.10.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ನಿಗಮದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯಿಂದಾಗಿ ಆಂತರಿಕ ಸಂಪನ್ಮೂಲದಿಂದ ಉಳಿದ ಮೊತ್ತವನ್ನು ಭರಿಸಲು ಕಷ್ಟಸಾಧ್ಯವಾಗಿರುವುದರಿಂದ, ಸದರಿ ಅನುದಾನವನ್ನು ಲಭ್ಯಪಡಿಸುವ ಕುರಿತು ಪರಿಶೀಲಿಸಲಾಗುತ್ತಿದೆ. ಉಳಿದ ಅನುದಾನದ ಲಭ್ಯತೆಯ ನಂತರ ಹೊಸದಾಗಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಕುರಿತು ಪರಿಶೀಲಿಸಲಾಗುವುದು.
ಇ)	ಕೆಲವು ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಸರಿಯಾಗಿ ದಾಖಲಾತಿಗಳನ್ನು ಸಲ್ಲಿಸದೆ ಮತ್ತು ಅರ್ಹತೆ ಇಲ್ಲದಿದ್ದರೂ ಸಹ ಟೆಂಡರ್‌ನಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿರುವುದು ನಿಜವೇ; ಹಾಗಿದ್ದಲ್ಲಿ, ಈಗಾಗಲೇ ಪ್ರಾರಂಭಿಸಿರುವ ಟೆಂಡರ್ ಪ್ರಕ್ರಿಯೆಗಳನ್ನು ರದ್ದುಪಡಿಸಿ ಹೊಸದಾಗಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರ ಮುಂದಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು).	

ಸಂಖ್ಯೆ: ಟಿಡಿ 159 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 3618
ಉತ್ತರ ದಿನಾಂಕ : 24.03.2021

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯ ಎಲ್ಲಾ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವ ಜಲಧಾರೆ ಯೋಜನೆ 2019–20ನೇ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾಗಿದ್ದು, ಇದಕ್ಕಾಗಿ 1000 ಕೋಟಿಗಳನ್ನು ಮೀಸಲಿರಿಸಲಾಗಿದ್ದರೂ ಇಲ್ಲಿಯವರೆಗೆ ಯೋಜನೆಯನ್ನು ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಕಾಮಗಾರಿ ಪ್ರಾರಂಭಿಸದೇ ಇರುವುದಕ್ಕೆ ಕಾರಣವೇನು; ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರವನ್ನು ನೀಡುವುದು)	ಬಂದಿದೆ. ಸಚಿವ ಸಂಪುಟದ ಟಿಪ್ಪಣಿ ಸಂ:RDP/35/RWS(5)/2018, ದಿನಾಂಕ:25.02.2019ರಲ್ಲಿ ಜಲಧಾರೆ ಯೋಜನೆಯಡಿ ರಾಯಚೂರು ಜಿಲ್ಲೆಯ ರಾಯಚೂರು, ಸಿಂಧನೂರು, ಮಾನ್ವಿ, ದೇವದುರ್ಗ ಹಾಗೂ ಲಿಂಗಸುಗೂರು ತಾಲ್ಲೂಕುಗಳ ಎಲ್ಲಾ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ದೊರೆತಿರುತ್ತದೆ. ಅದರಂತೆ ರೂ.1988.01ಕೋಟಿಗಳಿಗೆ ಯೋಜನೆಯ ಪಿ.ಎಸ್.ಆರ್ ಅನ್ನು ತಯಾರಿಸಿದ್ದು, ಕರಡು ಸಚಿವ ಸಂಪುಟದ ಟಿಪ್ಪಣಿಯನ್ನು ಆರ್ಥಿಕ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆಗಳಿಗೆ ಸಹಮತಿಗಾಗಿ ಕಳುಹಿಸಲಾಗಿರುತ್ತದೆ.
ಆ)	ಈ ಜಿಲ್ಲೆಯ ಎಲ್ಲಾ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರು ಒದಗಿಸುವ ಜಲಧಾರೆ ಯೋಜನೆಯನ್ನು ಪ್ರಾರಂಭ ಮಾಡುವ ಇಚ್ಛಾಶಕ್ತಿ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು; ಸದರಿ ಯೋಜನೆಯನ್ನು ಯಾವಾಗ ಮುಕ್ತಾಯಗೊಳಿಸಲಾಗುವುದು; (ಸಂಪೂರ್ಣ ವಿವರವನ್ನು ನೀಡುವುದು)	ಪ್ರಸ್ತುತ ಯೋಜನೆಯ ಪಿ.ಎಸ್.ಆರ್ ಅನ್ನು ತಯಾರಿಸಿದ್ದು, ಕರಡು ಸಚಿವ ಸಂಪುಟದ ಟಿಪ್ಪಣಿಯನ್ನು ಆರ್ಥಿಕ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆಗಳಿಗೆ ಸಹಮತಿಗಾಗಿ ಕಳುಹಿಸಲಾಗಿರುತ್ತದೆ. ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಟೆಂಡರ್ ಕರೆದು, 2021–22ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಿ ನಿಗಧಿತ ಅವಧಿಯೊಳಗೆ ಯೋಜನೆಯನ್ನು ಮುಕ್ತಾಯಗೊಳಿಸಲು ಕ್ರಮವಹಿಸಲಾಗುವುದು.
ಇ)	2021–22ನೇ ಸಾಲಿನಲ್ಲಿ ಸದರಿ ಯೋಜನೆಗೆ ಎಷ್ಟು ಹಣ ಮೀಸಲಿಡಲಾಗುವುದು? (ವಿವರವನ್ನು ನೀಡುವುದು)	2021–22ನೇ ಸಾಲಿನಲ್ಲಿ ಜೆ.ಜೆ.ಎಂ ಕ್ರಿಯಾ ಯೋಜನೆಯಲ್ಲಿ ಸದರಿ ಯೋಜನೆಗೆ ರೂ.198.80ಕೋಟಿಗಳ ಅನುದಾನವನ್ನು ಮೀಸಲಿಡಲಾಗುವುದು.

ಸಂ:ಗ್ರಾಕುನೀ&ನೈಇ 123 ಗ್ರಾನೀಸ(4)2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ವೆಂಕಟರಮಣಯ್ಯ. ಟಿ. (ದೊಡ್ಡಬಳ್ಳಾಪುರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3624
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	24.03.2021

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ನೇಕಾರರಿಗೆ ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳನ್ನು ಮಂಜೂರು ಮಾಡಲಾಗಿದೆ; (ವಿವರ ನೀಡುವುದು)</td><td>ದೊಡ್ಡಬಳ್ಳಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ನೇಕಾರರಿಗೆ ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳನ್ನು ಮಂಜೂರು ಮಾಡಲಾದ ವಿವರ ಈ ಕೆಳಗಿನಂತಿದೆ:-
<table>
<tr><th>ಕ್ರ ಸಂ</th><th>ಕಾಂಪೋನೆಂಟ್</th><th>2018-19</th><th>2019-20</th><th>2020-21</th></tr>
<tr><td>1</td><td>ಕೈಮಗ್ಗಗಳು</td><td>10</td><td>07</td><td>10</td></tr>
<tr><td>2</td><td>ವಿದ್ಯುತ್ ಮಗ್ಗಗಳು</td><td>-</td><td>24</td><td>20</td></tr>
</table>
</td></tr>
<tr><td>ಆ)</td><td>ಇನ್ನೂ ವಿತರಿಸಬೇಕಾಗಿರುವ ಬಾಕಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು; ಯಾವ ಕಾಲಮಿತಿಯಲ್ಲಿ ವಿತರಿಸ ಲಾಗುವುದು? (ವಿವರ ನೀಡುವುದು)</td><td>ನೇಕಾರರ ಪ್ಯಾಕೇಜ್ ಯೋಜನೆಯಡಿ ವಿದ್ಯುತ್ ಮಗ್ಗ ಖರೀದಿ ಸಹಾಯಧನ ಮಂಜೂರಾತಿ ಗಾಗಿ ವಿತರಿಸಲು ಬಾಕಿ ಇರುವ ಫಲಾನುಭವಿಗಳ ಸಂಖ್ಯೆ:02

2020-21ನೇ ಸಾಲಿನ ಅಂತ್ಯದೊಳಗೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿದ ನಂತರ ಸಹಾಯಧನ ಒದಗಿಸಲು ಕ್ರಮವಹಿಸ ಲಾಗುವುದು.</td></tr>
</table>

ಸಂ: CI 86 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	–	3625
ಉತ್ತರಿಸಬೇಕಾದ ದಿನಾಂಕ	–	24-03-2021
ಸದಸ್ಯರ ಹೆಸರು	–	ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)
ಉತ್ತರಿಸುವ ಸಚಿವರು	–	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರಿನ ಮಾದರಿಯಲ್ಲಿ ಹುಬ್ಬಳ್ಳಿಯಲ್ಲಿ ಹಜ್ ಭವನ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ; ಇದ್ದಲ್ಲಿ ಯಾವ ಹಂತದಲ್ಲಿದೆ.	ಬೆಂಗಳೂರಿನ ಮಾದರಿಯಲ್ಲಿ ಹುಬ್ಬಳ್ಳಿಯಲ್ಲಿ ಹಜ್ ಭವನ ನಿರ್ಮಾಣ ಮಾಡುವ ಪ್ರಸ್ತಾವನೆ ಇರುವುದಿಲ್ಲ.
ಆ)	ಎಷ್ಟು ವೆಚ್ಚದಲ್ಲಿ ಹಜ್ ಭವನ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ; ಹಾಗೂ ಯಾವ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುವು? (ವಿವರ ನೀಡುವುದು)	ಉದ್ಭವಿಸುವುದಿಲ್ಲ.

MWD 141 LMQ 2021

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2075

ಸದಸ್ಯರ ಹೆಸರು : ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ವಿದ್ಯಾರ್ಥಿ ಪಾಸ್‌ಗಳಿಗಾಗಿ ವಿದ್ಯಾರ್ಥಿ ವಂತಿಕೆ ಮತ್ತು ಸರ್ಕಾರದ ಅನುದಾನ ಸೇರಿ ಸಾವಿರಾರು ಕೋಟಿ ಸಾರಿಗೆ ಇಲಾಖೆಗೆ ಸಂದಾಯವಾದರೂ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಆಯಾ ಮಾರ್ಗಗಳಲ್ಲಿ ಅಗತ್ಯ ಸಂಖ್ಯೆಯ ಬಸ್‌ಗಳು ಸಂಚರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ನಾಲ್ಕೂ ಸಾರಿಗೆ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಮನೆಯಿಂದ ಶಾಲೆ/ಕಾಲೇಜಿಗೆ ಹಾಗೂ ಶಾಲೆ/ಕಾಲೇಜಿನಿಂದ ಮನೆಗೆ ಪ್ರಯಾಣಿಸಲು ಅನುಕೂಲವಾಗುವಂತೆ ಸಂಚಾರ ದಟ್ಟಣೆ ವೇಳೆಗಳಲ್ಲಿ ಹೆಚ್ಚಿನ ಸುತ್ತುವಳಿಗಳನ್ನು ಅಳವಡಿಸಿ ಸಾರಿಗೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ಕೋವಿಡ್-19ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ವಿರಳ ಜನಸಂದಣಿ ಇರುವುದರಿಂದ ಹಾಗೂ ಇನ್ನೂ ಹಲವಾರು ಶಾಲೆಗಳು ಪ್ರಾರಂಭವಾಗದೇ ಇರುವುದರಿಂದ ಪ್ರಯಾಣಿಕರು/ ವಿದ್ಯಾರ್ಥಿಗಳ ಲಭ್ಯತೆ, ಸಾರ್ವಜನಿಕರು/ವಿದ್ಯಾರ್ಥಿಗಳ ದಟ್ಟಣೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಿಸಲಾಗುತ್ತಿದ್ದು, ಸಾರಿಗೆಗಳನ್ನು ಹಂತಹಂತವಾಗಿ ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
ಆ)	2019-20 ಮತ್ತು ಪ್ರಸಕ್ತ ಸಾಲಿನಲ್ಲಿ ವಾ.ಕ.ರ.ಸಾ.ಸಂಸ್ಥೆಯ ಖಾನಾಪೂರ ಘಟಕ ವ್ಯಾಪ್ತಿಯಲ್ಲಿ ಪಾಸ್ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;	ವಾ.ಕ.ರ.ಸಾ.ಸಂಸ್ಥೆಯ ಖಾನಾಪೂರ ಘಟಕದ ವ್ಯಾಪ್ತಿಯಲ್ಲಿ ಪಾಸ್ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಈ ಕೆಳಗಿನಂತಿದೆ:- ವರ್ಷ — ವಿದ್ಯಾರ್ಥಿಗಳ ಸಂಖ್ಯೆ 2019-20 — 5696 2020-21 (17-11-2020ರಿಂದ 16-03-2021ರವರೆಗೆ) — 2179
ಇ)	ಈ ಪೈಕಿ ವಿದ್ಯಾರ್ಥಿ ಪಾಸ್‌ಗಳಿಗಾಗಿ ಸರ್ಕಾರದಿಂದ ಸಂಸ್ಥೆಗೆ ಸಂದಾಯವಾಗುವ ಮೊತ್ತವೆಷ್ಟು;	ವಿದ್ಯಾರ್ಥಿ ಬಸ್ ಪಾಸ್ ಮೊತ್ತವನ್ನು ವಿದ್ಯಾರ್ಥಿ, ಸಂಸ್ಥೆ, ಸರ್ಕಾರದ ಪಾಲು ಎಂದು ಅನುಪಾತ ಮಾದರಿಯಡಿಯಲ್ಲಿ ನಿಗದಿಪಡಿಸಿರುತ್ತದೆ. ಸಾಮಾನ್ಯ ವಿದ್ಯಾರ್ಥಿಯಾದಲ್ಲಿ 25:25:50 ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಯಾದಲ್ಲಿ 2017-18ನೇ ಸಾಲಿನಿಂದ 00:25:75ರ ಪ್ರಮಾಣಕ್ಕೆ ಸೀಮಿತಗೊಳಿಸಿದೆ. ವಾ.ಕ.ರ.ಸಾ.ಸಂಸ್ಥೆಗೆ ವಿದ್ಯಾರ್ಥಿ ಬಸ್ ಪಾಸ್‌ಗಳ ವೆಚ್ಚದ ಮರುಪಾವತಿಗಾಗಿ ಸರ್ಕಾರದಿಂದ **ಒಟ್ಟಾರೆಯಾಗಿ** 2019-20ನೇ ಸಾಲಿನಲ್ಲಿ ರೂ.206.84 ಕೋಟಿ ಹಾಗೂ ಪ್ರಸಕ್ತ ಸಾಲಿನಲ್ಲಿ ರೂ.150.98 ಕೋಟಿ ಹಂಚಿಕೆಯಾಗಿರುತ್ತದೆ. ಆದರೆ, ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾದ ಮೊತ್ತವನ್ನು ಕೋವಿಡ್-19ರಿಂದ ಸಂಸ್ಥೆಗೆ ಉಂಟಾದ ಆರ್ಥಿಕ ಸಂಕಷ್ಟದಿಂದಾಗಿ ಸಂಸ್ಥೆಯ ಅಧಿಕಾರಿ/ನೌಕರರ ವೇತನ ಪಾವತಿಗಾಗಿ ಬಳಸಿಕೊಳ್ಳಲಾಗಿದೆ.

...2

<table>
<tr>
<td>ಈ)</td>
<td>ವಿದ್ಯಾರ್ಥಿಗಳು ಪಾವತಿಸಿದ ಪಾಸ್ ಶುಲ್ಕದ ಒಟ್ಟು ಮೊತ್ತವೆಷ್ಟು?</td>
<td>ಖಾನಾಪೂರ ಘಟಕದ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳು ಪಾವತಿಸಿದ ಪಾಸ್ ಶುಲ್ಕದ ವಿವರ ಈ ಕೆಳಗಿನಂತಿದೆ:
(ರೂ.ಗಳಲ್ಲಿ)
<table>
<tr><th>ಕ್ರಸಂ.</th><th>ವರ್ಷ</th><th>ವಿತರಿಸಿದ ಪಾಸ್ ಸಂಖ್ಯೆ</th><th>ವಿದ್ಯಾರ್ಥಿಗಳಿಂದ ಪಡೆದ ಪಾಸ್‌ನ ಮೊತ್ತ</th></tr>
<tr><td>1</td><td>2019-20</td><td>5696</td><td>42,14,840/-</td></tr>
<tr><td>2</td><td>2020-21 (17-11-2020ರಿಂದ 16-03-2021ರವರೆಗೆ)</td><td>2179</td><td>19,67,982/-</td></tr>
</table>
</td>
</tr>
</table>

ಸಂಖ್ಯೆ: ಟಿಡಿ 140 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2907
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ:	:	24-3-2021

ಕ್ರ ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಪದೇ ಪದೇ ಪ್ರತಿಭಟನೆ, ಸತ್ಯಾಗ್ರಹ ಹಾಗೂ ಧರಣಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ.	ಬಂದಿದ್ದಲ್ಲಿ, ಪ್ರತಿಭಟನೆ ಹಾಗೂ ಮುಷ್ಕರಕ್ಕೆ ಕಾರಣಗಳೇನು; ಅವರ ನ್ಯಾಯಯುತ ಬೇಡಿಕೆಗಳೇನು;	ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಪ್ರಮುಖ ಬೇಡಿಕೆಗಳ ವಿವರಗಳು ಈ ಕೆಳಕಂಡಂತಿರುತ್ತದೆ:- 1. ಕೆಲಸವನ್ನು ಖಾಯಂಗೊಳಿಸಬೇಕು ಅಥವಾ ಕನಿಷ್ಠ ವೇತನವನ್ನು ಮಾಡಬೇಕು. 2. ಐ.ಸಿ.ಡಿ.ಎಸ್. ಯೋಜನೇತರ ಕೆಲಸವಹಿಸುವುದನ್ನು ನಿಲ್ಲಿಸುವುದು. 3. ಇ.ಎಸ್.ಐ. / ಪಿ.ಎಫ್. ಜಾರಿಗೊಳಿಸುವುದು. 4. ಗೌರವಧನವನ್ನು ಹೆಚ್ಚಿಸುವ ಕುರಿತು. 5. ಸೇವಾ ಹಿರಿತನದ ಆಧಾರದಲ್ಲಿ ಗೌರವಧನ ಹೆಚ್ಚಳ ಮಾಡುವುದು. 6. ಮಿನಿ ಅಂಗನವಾಡಿಗಳನ್ನು ಉನ್ನತೀಕರಿಸಿ, ಸಹಾಯಕಿಯರನ್ನು ನೇಮಕಾತಿ ಮಾಡಿ, ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಕೊಡುವ ಗೌರವಧನದಷ್ಟೇ ಮೊತ್ತವನ್ನು ಕೊಡುವುದು.
ಇ.	ಸದರಿ ನೌಕರರುಗಳಿಗೆ ನೀಡುತ್ತಿರುವ ವೇತನ/ ಗೌರವಧನ / ಇತರೆ ಭತ್ಯೆಗಳ ಮೊತ್ತ ಎಷ್ಟು; (ಪ್ರತ್ಯೇಕವಾಗಿ ವಿವರ ನೀಡುವುದು).	ಪ್ರಸ್ತುತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ, ಮಿನಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರಿಗೆ ಈ ಕೆಳಕಂಡಂತೆ ಮಾಸಿಕ ಗೌರವಧನವನ್ನು ಪಾವತಿಸಲಾಗುತ್ತಿದೆ.

ಕ್ರ.ಸಂ.	ವಿವರ	ನಿಗದಿಪಡಿಸಿರುವ ಗೌರವಧನ (ರೂ.ಗಳಲ್ಲಿ)
1.	ಅಂಗನವಾಡಿ ಕಾರ್ಯಕರ್ತೆ	10,000/-
2.	ಮಿನಿ ಅಂಗನವಾಡಿ ಕಾರ್ಯಕರ್ತೆ	6,250/-
3.	ಅಂಗನವಾಡಿ ಸಹಾಯಕಿ	5,250/-

<table>
<tr>
<td>ಈ.</td>
<td>ಈ ಗೌರವಧನ ಅಥವಾ ವೇತನದಲ್ಲಿ ಇವತ್ತಿನ ಬೆಲೆ ಏರಿಕೆಯ ದಿನಗಳಲ್ಲಿ ಸದರಿಯವರು ಕುಟುಂಬದ ಜೀವನ ನಿರ್ವಹಣೆ ಮಾಡಲು ಸಾಧ್ಯವೇ;</td>
<td rowspan="2">ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಗೌರವಧನದೊಂದಿಗೆ ಈ ಕೆಳಕಂಡ ಸೌಲಭ್ಯಗಳನ್ನು ಸಹ ನೀಡಲಾಗುತ್ತಿದೆ.
• ವೈದ್ಯಕೀಯ ವೆಚ್ಚ ಮರುಪಾವತಿ ಗರಿಷ್ಠ ರೂ. 50,000/-
• ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ ಮತ್ತು ಭಾಗ್ಯಲಕ್ಷ್ಮಿ ಯೋಜನೆಯಡಿ ಫಲಾನುಭವಿಗಳನ್ನು ನೊಂದಾಯಿಸಿದ್ದಲ್ಲಿ ಪ್ರೋತ್ಸಾಹ ಧನ ನೀಡಲಾಗುವುದು.
• ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರನ್ನು ಎನ್.ಪಿ.ಎಸ್. ಲೈಟ್ ಯೋಜನೆಯಡಿ ನೊಂದಾಯಿಸಿದ್ದು, ಪಿಂಚಣಿ ಸೌಲಭ್ಯ ಒದಗಿಸಲಾಗುತ್ತಿದೆ.
• ಸೇವೆಯಲ್ಲಿರುವಾಗಲೇ ಮೃತಪಟ್ಟ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಕುಟುಂಬದ ಅವಲಂಬಿತರಿಗೆ ರೂ. 50,000/- ಮರಣ ಪರಿಹಾರ ನಿಧಿಯನ್ನು ಸಹ ನೀಡಲಾಗುತ್ತಿದೆ.
• ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರು ಫಲಾನುಭವಿಗಳಾಗಿರುತ್ತಾರೆ.
ಮೇಲಿನ ಸವಲತ್ತುಗಳು ಹಾಗೂ ಪ್ರೋತ್ಸಾಹ ಧನ ನೀಡುತ್ತಿರುವುದರಿಂದ ಜೀವನ ನಿರ್ವಹಣೆ ಮಾಡಲು ಯಾವುದೇ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.</td>
</tr>
<tr>
<td>ಉ.</td>
<td>ಸದರಿ ನೌಕರರುಗಳ ಜೀವನ ಭದ್ರತೆಗೆ ಹಾಗೂ ಅವರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು).</td>
</tr>
<tr>
<td>ಊ.</td>
<td>ಗೌರವಧನ ಮತ್ತು ಭತ್ಯೆಗಳನ್ನು ಹೆಚ್ಚಳ ಮಾಡಲು ಸರ್ಕಾರ ಆಸಕ್ತಿ ಹೊಂದಿದೆಯೇ; ಹೊಂದಿದ್ದರೆ, ಎಷ್ಟು ಗೌರವಧನ ಹೆಚ್ಚಳ ಮಾಡಲಾಗುವುದು? (ವಿವರ ನೀಡುವುದು).</td>
<td>ರಾಜ್ಯ ಸರ್ಕಾರವು ದಿನಾಂಕ 12.07.2019ರಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 500/-, ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 250/- ಹಾಗೂ ಅಂಗನವಾಡಿ ಸಹಾಯಕಿಯರಿಗೆ ರೂ. 250/-ರಂತೆ ಗೌರವಧನವನ್ನು ಹೆಚ್ಚಳ ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಗೌರವಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.</td>
</tr>
</table>

ಸಂಖ್ಯೆ: ಮಮಇ 139 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2923

ಸದಸ್ಯರ ಹೆಸರು : ಶ್ರೀ ಗಣೇಶ್ ಜೆ.ಎನ್.

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕಂಪ್ಲಿ ವಿಧಾನ ಸಭಾ ಕ್ಷೇತ್ರದಲ್ಲಿನ ಗ್ರಾಮೀಣ ವಿದ್ಯಾರ್ಥಿಗಳು ಶಾಲೆ ಮತ್ತು ಕಾಲೇಜುಗಳಿಗೆ ಪ್ರಯಾಣಿಸಲು ಬೆಳಿಗ್ಗೆ ಮತ್ತು ಸಂಜೆ ಗ್ರಾಮೀಣ ಸಾರಿಗೆ ಬಸ್ಸುಗಳ ವ್ಯವಸ್ಥೆಯನ್ನು ಮಾಡಲಾಗಿದೆಯೇ; (ಗ್ರಾಮವಾರು ಬಸ್ಸುಗಳ ವೇಳಾಪಟ್ಟಿಯೊಂದಿಗೆ ಮಾಹಿತಿ ಒದಗಿಸುವುದು)	ಕಂಪ್ಲಿ ವಿಧಾನ ಸಭಾ ಕ್ಷೇತ್ರದಲ್ಲಿನ ಗ್ರಾಮೀಣ ವಿದ್ಯಾರ್ಥಿಗಳು ಶಾಲೆ ಮತ್ತು ಕಾಲೇಜುಗಳಿಗೆ ಪ್ರಯಾಣಿಸಲು ಗ್ರಾಮೀಣ ಸಾರಿಗೆ ಬಸ್ಸುಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಬಸ್ಸುಗಳ ವ್ಯವಸ್ಥೆ ವಿವರವನ್ನು <u>ಅನುಬಂಧ</u>ದಲ್ಲಿ ಒದಗಿಸಲಾಗಿದೆ.
ಆ)	ಈ ಕ್ಷೇತ್ರದಲ್ಲಿ ಹಲವಾರು ಗ್ರಾಮಗಳಿಗೆ ಶಾಲೆ ಮತ್ತು ಕಾಲೇಜುಗಳ ಸಮಯಕ್ಕೆ ಗ್ರಾಮೀಣ ಸಾರಿಗೆ ಬಸ್ಸುಗಳ ವ್ಯವಸ್ಥೆ ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಂಪ್ಲಿ ವಿಧಾನ ಸಭಾ ಕ್ಷೇತ್ರದ ಎಲ್ಲಾ ಗ್ರಾಮಗಳಿಗೆ ಶಾಲೆ ಮತ್ತು ಕಾಲೇಜು ಸಮಯಕ್ಕೆ ಗ್ರಾಮೀಣ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದ್ದು, ವಿದ್ಯಾರ್ಥಿಗಳು ಇದರ ಅನುಕೂಲತೆಯನ್ನು ಪಡೆದುಕೊಳ್ಳುತ್ತಿದ್ದಾರೆ.
ಇ)	ಹಾಗಿದ್ದಲ್ಲಿ, ಸದರಿ ಗ್ರಾಮಗಳಿಗೆ ಶಾಲಾ ಮತ್ತು ಕಾಲೇಜುಗಳ ಸಮಯಕ್ಕೆ ಗ್ರಾಮೀಣ ಸಾರಿಗೆ ವ್ಯವಸ್ಥೆಯನ್ನು ಒದಗಿಸಲಾಗುವುದೇ?	ಕಂಪ್ಲಿ ತಾಲೂಕಿನ ಶಾಲಾ-ಕಾಲೇಜುಗಳ ಸಮಯಕ್ಕೆ ಗ್ರಾಮೀಣ ಸಾರಿಗೆ ವ್ಯವಸ್ಥೆಯನ್ನು ಒದಗಿಸಲಾಗಿದೆ.

ಸಂಖ್ಯೆ: ಟಿಡಿ 146 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಅನುಬಂಧ

ಕಂಪ್ಲಿ ತಾಲೂಕಿನ ಗ್ರಾಮಗಳಿಗೆ ಬಸ್ ಸೌಕರ್ಯ ಒದಗಿಸಿದ ವೇಳಾಪಟ್ಟಿ

ಕ್ರ.ಸಂ	ಗ್ರಾಮಗಳ ಹೆಸರು	ಕಾರ್ಯಾಚರಣೆಯಲ್ಲಿರುವ ಅನುಸೂಚಿಗಳ ವೇಳಾ ಪಟ್ಟಿಯ ವಿವರ
1	ಅರಳಿಹಳ್ಳಿ	6.15, 8.15, 8.30, 10.15, 12.15, 14.15, 15.15, 16.15, 17.00, 17.15
2	ಬೆಳಗೋಡಹಾಳ್	7.30, 16.30
3	ಚಿಕ್ಕಜಾಯಿಗನೂರು	8.30, 17.00
4	ದೇವಲಾಪುರ	ಪ್ರತಿ 15 ನಿಮಿಷಕ್ಕೊಮ್ಮೆ ವಾಹನ ಇರುತ್ತದೆ
5	ದೇವಸಮುದ್ರ	8.30, 13.30, 17.00
6	15 ಗೋನಹಾಳ್	8.30, 17.00 ಜೊತೆಗೆ ಬಳ್ಳಾರಿ ವಿಭಾಗದ 3 ದುಂಡು ಸರತಿ ಕಾರ್ಯಾಚರಣೆಯಲ್ಲಿದೆ.
7	ಹಂಪದೇವನಹಳ್ಳಿ	8.30, 17.00 ಜೊತೆಗೆ ಬಳ್ಳಾರಿ ವಿಭಾಗದ 3 ದುಂಡು ಸರತಿ ಕಾರ್ಯಾಚರಣೆಯಲ್ಲಿದೆ.
8	ಹಿರೇಜಾಯಿಗನೂರು	8.30, 17.00
9	ಹೊನ್ನಹಳ್ಳಿ	6.00, 7.45, 10.00, 14.30, 16.30, 18.30 (ಃಖಿಖ ಆಗಿಒ)
10	ಇಟಗಿ	7.30, 17.00
11	ಜೀರಿಗನುರು	6.00, 7.45, 10.00, 14.30, 16.30, 18.30 (ಃಖಿಖ ಆಗಿಒ)
12	ಜೌಕು	10.00, 14.00, 18.00, 20.00, ಜೊತೆಗೆ ಬಳ್ಳಾರಿ ವಿಭಾಗದ 3 ದುಂಡು ಸರತಿ ಕಾರ್ಯಾಚರಣೆಯಲ್ಲಿದೆ.
13	ಕಣವಿತಿಮ್ಮಲಾಪುರ	7.30, 16.30
14	ಮಾವಿನಹಳ್ಳಿ	6.00, 7.45, 10.00, 14.30, 16.30, 18.30 (ಃಖಿಖ ಆಗಿಒ)
15	ಮೆಟ್ರಿ	ಪ್ರತಿ 15 ನಿಮಿಷಕ್ಕೊಮ್ಮೆ ವಾಹನ ಇರುತ್ತದೆ
16	10 ಮುದ್ದಾಪುರ	ಪ್ರತಿ 30 ನಿಮಿಷಕ್ಕೊಮ್ಮೆ ವಾಹನ ಇರುತ್ತದೆ
17	2 ಮುದ್ದಾಪುರ	7.30, 16.30
18	ರಾಮಸಾಗರ	ಪ್ರತಿ 15 ನಿಮಿಷಕ್ಕೊಮ್ಮೆ ವಾಹನ ಇರುತ್ತದೆ
19	ಸಾಣಾಪುರ	6.15, 8.15, 8.30, 10.15, 12.15, 14.15, 15.15, 16.15, 17.00, 17.15
20	ಸೋಮಲಾಪುರ	8.30, ಸದರಿ ಗ್ರಾಮವು ಕಂಪ್ಲಿ–ಬಳ್ಳಾರಿ ಮುಖ್ಯ ರಸ್ತೆಯಿಂದ 1 ಕಿ.ಮೀ ಒಳಗಡೆ ಇದ್ದು ಪ್ರತಿ 15 ನಿಮಿಷಕ್ಕೊಂದು ವಾಹನ ಸೋಮಲಾಪುರ ಕ್ರಾಸ್‌ಗೆ ಇರುತ್ತದೆ.
21	ಸುಗ್ಗೇನಹಳ್ಳಿ	10.00, 14.00, 18.00 ಜೊತೆಗೆ ಬಳ್ಳಾರಿ ವಿಭಾಗದ 3 ದುಂಡು ಸರತಿ ಕಾರ್ಯಾಚರಣೆಯಲ್ಲಿದೆ.
22	ಉಪ್ಪಾರಹಳ್ಳಿ	8.30, 17.00

ಕರ್ನಾಟಕ ವಿಧಾನ ಸಭೆ

15 ನೇ ವಿಧಾನ ಸಭೆ, 9 ನೇ ಅಧಿವೇಶನ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :2924

2. ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ)

3. ಉತ್ತರಿಸುವ ದಿನಾಂಕ : 24.3.2021

4. ಉತ್ತರಿಸುವವರು :ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
(ಆ)	ಬಂದಿದ್ದಲ್ಲಿ, ಈ ಅಧಿಕಾರಿಗಳು ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿಗಾಗಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಿಂದ ಆದೇಶ ಪಡೆದರೂ ಬಡ್ತಿ ನೀಡದೇ ಇರುವುದಕ್ಕೆ ಸರ್ಕಾರಕ್ಕೆ ಇರುವ ತೊಂದರೇಗಳೇನು;	ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದಕ್ಕೆ ಸೇರಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮಾನ್ಯ ಕೆ.ಎ.ಟಿ ಪೀಠ, ಕಲಬುರಗಿ ಇಲ್ಲಿ ಸಲ್ಲಿಸಿದ್ದ ಅರ್ಜಿ ಸಂಖ್ಯೆ:20157-20177/2020 ರಲ್ಲಿ ಮಾನ್ಯ ಕೆ.ಎ.ಟಿಯು ದಿನಾಂಕ:28.1.2021 ರಂದು ನೀಡಿರುವ ತೀರ್ಪಿನಲ್ಲಿ ನೀಡಿರುವ ನಿರ್ದೇಶನದಂತೆ ಅರ್ಜಿದಾರರ ದಿನಾಂಕ:03.10.2019 ರ ಮನವಿಯ ಕುರಿತು ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.
(ಇ)	ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗಳು ಖಾಲಿ ಇರುವ ಕಾರಣ ಗ್ರಾಮೀಣಾಭಿವೃದ್ಧಿಗೆ	ಖಾಲಿ ಇರುವ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಹುದ್ದೆಗಳಿಗೆ ಅರ್ಹ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 68 ರ

	ಅಡಚಣೆಯಾಗುತ್ತಿರುವುದು ಸರ್ಕಾರ ಗಂಭೀರವಾಗಿ ಪರಿಗಣಿಸದೇ ಇರಲು ಕಾರಣವೇನು;	ಅನುಸಾರ ಹೆಚ್ಚುವರಿ ಪ್ರಭಾರದಲ್ಲಿರಿಸುವ ಮೂಲಕ ತಾತ್ಕಾಲಿಕ ವ್ಯವಸ್ಥೆಯಾಗಿ ಅಗತ್ಯ ಕಾರ್ಯನಿರ್ವಹಣೆ ಮಾಡಲಾಗುತ್ತಿರುವುದರಿಂದ ಗ್ರಾಮೀಣಾಭಿವೃದ್ಧಿಗೆ ಅಡಚಣೆಯಾಗಿರುವುದಿಲ್ಲ.
(ಈ)	ಹಾಗಿದ್ದಲ್ಲಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಯಾವಾಗ ಬಡ್ತಿ ನೀಡಲಾಗುವುದು.?	ದಿನಾಂಕ:21.2.2014ರ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಮೂಲ ಜೇಷ್ಠತಾ ಪಟ್ಟಿಯ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ವಿವಿಧ ರಿಟ್ ಅರ್ಜಿಗಳು ಇತ್ಯರ್ಥಗೊಂಡಲ್ಲಿ ಮಾನ್ಯ ನ್ಯಾಯಾಲಯದ ಆದೇಶಗಳನುಗುಣವಾಗಿ ಹಾಗೂ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ 2017, -ಮೇ 2019 ರಲ್ಲಿ ಜಾರಿಗೆ ಬಂದಿದ್ದು, ಅದರನುಸಾರ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಣೆ ಮಾಡಲು ಅವಕಾಶ ಲಭ್ಯವಾಗುತ್ತದೆ. ಈ ರೀತಿ ಜೇಷ್ಠತಾ ಪಟ್ಟಿಯ ಪರಿಷ್ಕರಣೆಯ ನಂತರ ಕಲ್ಯಾಣ ಕರ್ನಾಟಕ ಪ್ರದೇಶದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಒಳಗೊಂಡಂತೆ ಇನ್ನಿತರ ಅರ್ಹ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಹುದ್ದೆಗೆ ನಿಯಮಾನುಸಾರ ಮುಂಬಡ್ತಿಗೆ ಪರಿಗಣಿಸಲು ಅವಕಾಶವಾಗುತ್ತದೆ.

ಗ್ರಾಅಪ 68 ಕೆ.ಎಸ್.ಎಸ್ 21(ಇ)

(ಕೆ.ಎಸ್.ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	೩೫೦೩
ಉತ್ತರಿಸಬೇಕಾದ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	24.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ನಶಿಸುತ್ತಿರುವ ಕೈಮಗ್ಗ ವಲಯಕ್ಕೆ ಸರ್ಕಾರದ ಪ್ರೋತ್ಸಾಹಕ ಯೋಜನೆಗಳ ಅನುಷ್ಠಾನ ಚಾಲನೆಯಲ್ಲಿವೆಯೇ; (ವಿವರ ನೀಡುವುದು)	ಕೈಮಗ್ಗ ವಲಯಕ್ಕೆ ಸರ್ಕಾರದ ಪ್ರೋತ್ಸಾಹಕ ಯೋಜನೆಗಳು ಈ ಕೆಳಕಂಡಂತೆ ಅನುಷ್ಠಾನ ಚಾಲನೆಯಲ್ಲಿರುತ್ತವೆ:- • ಕೈಮಗ್ಗ ನೇಕಾರರಿಗೆ ನೇಕಾರ ಸಮ್ಮಾನ್ ಯೋಜನೆ • ನೇಕಾರರ ಸಾಲ ಮನ್ನಾ ಯೋಜನೆ, ನೇಕಾರಿಕೆ ಉದ್ದೇಶಕ್ಕಾಗಿ ನೇಕಾರರ ಸಹಕಾರ ಸಂಘಗಳು ಹಾಗೂ ಇತರೆ ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಪಡೆದಿರುವ ಅರ್ಹ ನೇಕಾರರ ಸಾಲಮನ್ನಾ. • ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಪ್ರೋತ್ಸಾಹನಕ್ಕಾಗಿ ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯ (20% ರಿಬೇಟ್), ಕಚ್ಚಾನೂಲು ಖರೀದಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ • ಶೇಕಡ 1 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ ಸಾಲ ಮತ್ತು ಶೇಕಡ 3 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಸಾಲ ಸೌಲಭ್ಯ. • ಪೂರಕ ಉಳಿತಾಯ ಯೋಜನೆಯಾದ ಕೈಮಗ್ಗ ನೇಕಾರರಿಗೆ ಮಿತವ್ಯಯ ನಿಧಿ ಯೋಜನೆ • ಮೂಲಭೂತ ಸೌಕರ್ಯಕ್ಕಾಗಿ ಕೈಮಗ್ಗ ವಿಕಾಸ ಯೋಜನೆ. • ನೇಕಾರರ ಕಲ್ಯಾಣಕ್ಕಾಗಿ ನೇಕಾರರ ಅಂತ್ಯ ಸಂಸ್ಕಾರಕ್ಕಾಗಿ ಸಹಾಯಧನ, ಕೈಮಗ್ಗ ನೇಕಾರರಿಗೆ ತರಬೇತಿ (ಸ್ಟೈಫಂಡ್), ಬಡ್ಡಿ ಸಹಾಯಧನ, ಉಣ್ಣೆ ವಲಯ ಅಭಿವೃದ್ಧಿ ಯೋಜನೆ, • ರಾಷ್ಟ್ರೀಯ ಕೈಮಗ್ಗ ಅಭಿವೃಧ್ಧಿ ಕಾರ್ಯಕ್ರಮ (ಎನ್.ಹೆಚ್.ಡಿ.ಪಿ)ಯಡಿ- ವಿಶೇಷ ಕೈಮಗ್ಗ ಮೇಳ (ಎಸ್.ಹೆಚ್.ಇ), ಕೈಮಗ್ಗ ಕ್ಲಸ್ಟರ್. • ಕರ್ನಾಟಕ ಕೈಮಗ್ಗ ಅಭಿವೃಧ್ಧಿ ಮನಃಶ್ಚೇತನ ಹಾಗೂ ಪುನರ್ರಚನೆಗಾಗಿ ಸರ್ಕಾರವು ಕ್ರಮಕೈಗೊಂಡಿದ್ದು, ಸರ್ಕಾರದ ಆದೇಶ ಸಂಖ್ಯೆ: ವಾಕೈ 22 ಜಕೈಯೋ 2016, ದಿನಾಂಕ: 31.01.2018 ರನ್ವಯ ರೂ.50.00 ಕೋಟಿಗಳು ಮಂಜೂರಾಗಿದ್ದು, ಇದರಲ್ಲಿ ರೂ.45.73 ಕೋಟಿಗಳನ್ನು ಸಾಲದ ರೂಪದಲ್ಲಿ ಬಿಡುಗಡೆ ಮಾಡಿರುತ್ತದೆ.

<table>
<tr><td>ಆ)</td><td>ಕೈಮಗ್ಗ ವಿಕಾಸ ಯೋಜನೆ ಯಡಿಯಲ್ಲಿ ಎಷ್ಟು ಫಲಾನುಭವಿಗಳಿಗೆ ಯೋಜನಾ ಸೌಲಭ್ಯವನ್ನು ಒದಗಿಸಿ ಕೊಡಲಾಗಿದೆ; ಕೈಮಗ್ಗಗಳಿಗೆ ನ್ಯೂಮ್ಯಾಟಿಕ್ ಮತ್ತು ಜಕಾರ್ಡ್ ಸಲಕರಣೆ ಗಳನ್ನು ಒದಗಿಸುವ ಕಾರ್ಯಕ್ರಮದಡಿಯಲ್ಲಿ ಎಷ್ಟು ಜನ ಫಲಾನುಭವಿಗಳು ಯೋಜನಾ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ;</td><td>• ಕೈಮಗ್ಗ ವಿಕಾಸ ಯೋಜನೆಯಡಿಯಲ್ಲಿ 407 ಫಲಾನುಭವಿಗಳಿಗೆ ರೂ.58.49 ಲಕ್ಷಗಳ ಯೋಜನಾ ಸೌಲಭ್ಯವನ್ನು ಒದಗಿಸಲಾಗಿದೆ.
• ಕೈಮಗ್ಗಗಳಿಗೆ ನ್ಯೂಮ್ಯಾಟಿಕ್ ಸಲಕರಣೆಗಳನ್ನು ಒದಗಿಸುವ ಕಾರ್ಯಕ್ರಮದಡಿಯಲ್ಲಿ 7 ಫಲಾನುಭವಿಗಳಿಗೆ ರೂ.1.43 ಲಕ್ಷಗಳ ಯೋಜನಾ ಸೌಲಭ್ಯವನ್ನು ಒದಗಿಸಲಾಗಿದೆ.</td></tr>
<tr><td>ಇ)</td><td>ಕೈಮಗ್ಗ ವಿನ್ಯಾಸಗಳ ಉನ್ನತೀಕರಣ ಕ್ಕಾಗಿ ಎಲೆಕ್ಟ್ರಾನಿಕ್ ಜಕಾರ್ಡ್ ಒದಗಿಸಿಕೊಡುವ ಸೌಲಭ್ಯಗಳ ಮೂಲಕ ಎಷ್ಟು ಫಲಾನುಭವಿಗಳಿಗೆ ಯೋಜನಾ ಸೌಲಭ್ಯವನ್ನು ತಲುಪಿಸ ಲಾಗಿದೆ; (ಜಿಲ್ಲಾವಾರು, ಸಂಖ್ಯಾವಾರು ಮಾಹಿತಿ ನೀಡುವುದು ಹಾಗೂ ಇ-ಮಾರ್ಕೆಟಿಂಗ್ ಕಾರ್ಯಕ್ರಮ ಕುರಿತ ಪ್ರಗತಿಯ ವಿವರ ನೀಡುವುದು)</td><td>ಕೈಮಗ್ಗ ವಿನ್ಯಾಸಗಳ ಉನ್ನತೀಕರಣಕ್ಕಾಗಿ ಎಲೆಕ್ಟ್ರಾನಿಕ್ ಜಕಾರ್ಡ್ ಒದಗಿಸಿಕೊಡುವ ಸೌಲಭ್ಯಗಳ ಮೂಲಕ 8 ಫಲಾನುಭವಿಗಳಿಗೆ ರೂ.18.90 ಲಕ್ಷಗಳ ಯೋಜನಾ ಸೌಲಭ್ಯವನ್ನು ಒದಗಿಸಲಾಗಿದೆ.
ಜಿಲ್ಲಾವಾರು, ಸಂಖ್ಯಾವಾರು ಮಾಹಿತಿಯನ್ನು ಈ ಕೆಳಕಂಡಂತಿರುತ್ತದೆ:-
<table>
<tr><th>ಕ್ರ.ಸಂ</th><th>ಜಿಲ್ಲೆಯ ಹೆಸರು</th><th>ಭೌತಿಕ</th><th>ಆರ್ಥಿಕ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>ಬಾಗಲಕೋಟೆ</td><td>4</td><td>9.00</td></tr>
<tr><td>2</td><td>ಚಾಮರಾಜನಗರ</td><td>2</td><td>4.50</td></tr>
<tr><td>3</td><td>ಮಂಡ್ಯ</td><td>1</td><td>2.25</td></tr>
<tr><td>4</td><td>ಚಿತ್ರದುರ್ಗ</td><td>1</td><td>3.15</td></tr>
<tr><td></td><td>ಒಟ್ಟು</td><td>8</td><td>18.90</td></tr>
</table>
ಕೇಂದ್ರ ಸರ್ಕಾರದ ಯೋಜನೆಯಡಿ ಇ-ಮಾರ್ಕೆಟಿಂಗ್ ವ್ಯವಸ್ಥೆಯನ್ನು ನೇಕಾರರಿಗೆ ಜೆಮ್ ಇ-ಮಾರ್ಕೆಟಿಂಗ್ ಪೋರ್ಟಲ್ ಹಾಗೂ ಇ-ಶಿಲ್‌ಮಾರ್ಟ್ ವೆಬ್ ಪೋರ್ಟಲ್‌ನಲ್ಲಿ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ.
ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಇ-ಮಾರ್ಕೆಟಿಂಗ್ ಕಾರ್ಯಕ್ರಮದಲ್ಲಿ ಅಮೇಜಾನ್, ಫ್ಲಿಪ್‌ಕಾರ್ಟ್ ಇವರ ಸಹಭಾಗಿತ್ವದಲ್ಲಿ ಇ-ಮಾರ್ಕೆಟಿಂಗ್ ಪ್ಲಾಟ್ ಫಾರಂನಲ್ಲಿ ಕೈಮಗ್ಗ ಉತ್ಪನ್ನಗಳನ್ನು ಮಾರಾಟ ಮಾಡಲು ಯೋಜನೆ ರೂಪಿಸಲಾಗುತ್ತಿದೆ.</td></tr>
<tr><td>ಈ)</td><td>ಗ್ರಾಮಾಂತರ ಪ್ರದೇಶಗಳಲ್ಲಿನ ನೇಕಾರರಿಗೆ ಆಧುನಿಕ ಸೌಲಭ್ಯ ಗಳನ್ನು ಒದಗಿಸಿಕೊಡುವಲ್ಲಿ ಮತ್ತು ಆಧುನಿಕ ನೇಕಾರಿಕೆಯ ಉಪಯೋಗದ ಕುರಿತು ಅರಿವು ಮೂಡಿಸುವಲ್ಲಿ ಇಲಾಖೆ ಕೈಗೊಂಡಿರುವ ಕ್ರಮಗಳೇನು?</td><td>ಜಿಲ್ಲಾ ವಲಯ ಯೋಜನೆಯಡಿಯಲ್ಲಿ ಕೈಮಗ್ಗ ಉದ್ದಿಮೆಗಳಿಗೆ ಸಹಾಯಧನ ಅಡಿಯಲ್ಲಿ ಕೈಮಗ್ಗ ನೇಕಾರರಿಗೆ ಸುಧಾರಿತ ಕೈಮಗ್ಗ ಹಾಗೂ ಯಂತ್ರೋಪಕರಣಗಳನ್ನು ಅವಶ್ಯಕತೆ ಅನುಗುಣವಾಗಿ ನೀಡಲಾಗುತ್ತಿದೆ ಹಾಗೂ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ (ಎನ್.ಹೆಚ್.ಡಿ.ಪಿ) ಯಡಿ Baseline survey ಕೈಗೊಂಡು ಅವಶ್ಯಕತೆ ಅನುಗುಣವಾಗಿ ಸುಧಾರಿತ ಕೈಮಗ್ಗ ಯಂತ್ರೋಪಕರಣಗಳು ಮತ್ತು ತರಬೇತಿಯನ್ನು ನೀಡ ಲಾಗುತ್ತಿದೆ ಹಾಗೂ ಇಲಾಖಾವತಿಯಿಂದ ಇ.ಡಿ.ಪಿ. ಕಾರ್ಯಕ್ರಮ ಹಾಗೂ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳ ಲಾಗುತ್ತಿದೆ.</td></tr>
</table>

ಸಂ : CI 82 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3521

ಸದಸ್ಯರ ಹೆಸರು : ಶ್ರೀ ಉಮಾನಾಥ ಎ. ಕೋಟ್ಯಾನ್ (ಮೂಡಬಿದ್ರೆ)

ಉತ್ತರಿಸುವ ದಿನಾಂಕ : 24-03-2021.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹಣೆ ಪ್ರಮಾಣ ನಿಗದಿತ ಗುರಿಯನ್ನು ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳೇನು;	ಬಂದಿಲ್ಲ. 2020-21ನೇ ಸಾಲಿನಲ್ಲಿ ಪ್ರಸಕ್ತ ಸಾಲಿನ ಬೇಡಿಕೆಗನುಗುಣವಾಗಿ ಶೇ.79.39 ರಷ್ಟು ತೆರಿಗೆಯನ್ನು ಗ್ರಾಮ ಪಂಚಾಯತಿಗಳು ವಸೂಲಿ ಮಾಡಿರುತ್ತವೆ. ಆದಾಗ್ಯೂ, ಗ್ರಾಮ ಪಂಚಾಯತಿ ವ್ಯಾಪ್ತಿಯ ಭೂಮಿ ಮತ್ತು ಕಟ್ಟಡಗಳ ಮೇಲೆ ತೆರಿಗೆ ಸಂಗ್ರಹಣೆ ಮಾಡಲು ಸರ್ಕಾರದಿಂದ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಪ್ರತಿ ಮಾಹೆ ಪ್ರಗತಿ ಪರಿಶೀಲನಾ ಸಭೆಗಳನ್ನು ಜರುಗಿಸಿ, ಗ್ರಾಮ ಪಂಚಾಯತಿವಾರು ಗುರಿ ನಿಗಧಿಪಡಿಸಿ, ವಸೂಲಿ ಮಾಡಲು ಕ್ರಮ ವಹಿಸಲಾಗುತ್ತಿದೆ. ಮುಂದುವರೆದು, ತೆರಿಗೆ ವಸೂಲಾತಿಗಾಗಿ ಗ್ರಾಮಗಳಲ್ಲಿ ಡಂಗುರ ಸಾರಿಸಿ, ಜಾಥಾ ಕಾರ್ಯಕ್ರಮಗಳನ್ನು ಆಯೋಜಿಸಿ ಜನರಿಗೆ ತೆರಿಗೆ ಕಟ್ಟಿಸಲು ಉತ್ತೇಜಿಸುವುದು ಹಾಗೂ ಕರ ವಸೂಲಾತಿ ಮಾಸಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತಿದೆ. 31 ಮಾರ್ಚ್ 2021 ರೊಳಗಾಗಿ ಶೇ.100 ರಷ್ಟು ತೆರಿಗೆ ಸಂಗ್ರಹ ಮಾಡಲು ಗುರಿ ಹೊಂದಲಾಗಿದೆ.
(ಆ)	ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳು ಮತ್ತು ಕಟ್ಟಡಗಳ ಆಸ್ತಿ ತೆರಿಗೆ ಕಟ್ಟಿಸಿಕೊಳ್ಳಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು; ಆಸ್ತಿ ತೆರಿಗೆ ಸಂಗ್ರಹಕ್ಕಾಗಿ ಸರ್ಕಾರ ನಿಗಧಿಪಡಿಸಿರುವ ತೆರಿಗೆ ದರ ಮತ್ತು ತೆರಿಗೆ ಲೆಕ್ಕಚಾರದ ಸಂಪೂರ್ಣ ವಿವರಗಳನ್ನು ನೀಡುವುದು;	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ರಲ್ಲಿ ಗ್ರಾಮ ಪಂಚಾಯತಿಯು ಪಂಚಾಯತಿ ಪ್ರದೇಶದ ಪರಿಮತಿಗಳೊಳಗಿರುವ, ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ಅನುಸೂಚಿ-IV ರಲ್ಲಿ ನಿರ್ದಿಷ್ಟಪಡಿಸಿರುವಂತೆ ತೆರಿಗೆಗಳನ್ನು ಅಥವಾ ಫೀಜುಗಳನ್ನು ವಿಧಿಸಬಹುದಾಗಿದೆ. ಗ್ರಾಮ ಪಂಚಾಯತಿಯು ಆಸ್ತಿ ತೆರಿಗೆ ಸಂಗ್ರಹಕ್ಕಾಗಿ ಸರ್ಕಾರ ನಿಗಧಿಪಡಿಸಿರುವ ತೆರಿಗೆ ದರ ಮತ್ತು ತೆರಿಗೆ ಲೆಕ್ಕಚಾರವನ್ನು ಈ ಕೆಳಕಂಡಂತೆ ಮಾಡಬೇಕಾಗಿರುತ್ತದೆ. 1. ತೆರಿಗೆಗೆ ಗುರಿಯಾಗುವ ಸ್ವತ್ತಿನ ಮೂಲ ಮೌಲ್ಯ ಎಂದರೆ (ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957 ರ 45-ಬಿ

		ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದಲ್ಲಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ನಿರ್ಧರಣೆಯ ಸಮಯದ ಮೌಲ್ಯದ ಸವಕಳಿಯನ್ನು ಕಳೆಯುವುದು. 2. ಕಟ್ಟಡದ ಖಾಲಿ ಜಮೀನು ಅಥವಾ ಅವೆರಡರ ಮೇಲೆ ಪ್ರದೇಶವನ್ನು, ಕಟ್ಟಡದ ನಿರ್ಮಾಣ ವಿಧಾನ, ಅದರ ಉಪಯೋಗ ಮತ್ತು ಕಟ್ಟಡದ ಆಯುಸ್ಸು ಮತ್ತು ನೇಮಿಸಬಹುದಾದ ಅಂತಹ ಇತರೆ ಯಾವುದೇ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಗಳು ಮತ್ತು ದರಗಳನ್ನು ಅನುಸೂಚಿಯಲ್ಲಿ ನಿಯಮಿಸಲಾದ ತೆರಿಗೆಯ ನಿರ್ಧರಣೆ.
(ಇ)	2018-19 ರಿಂದ 2020-21ನೇ ಸಾಲಿಗಾಗಿ ರಾಜ್ಯದಲ್ಲಿನ ಗ್ರಾಮ ಪಂಚಾಯತ್‌ಗಳಿಂದ ಸರ್ಕಾರ ಪ್ರತಿ ವರ್ಷ ಎಷ್ಟು ಪ್ರಮಾಣದ ಆಸ್ತಿ ತೆರಿಗೆ ಮೊತ್ತ ಸಂಗ್ರಹಿಸುವ ಗುರಿ ಹೊಂದಿತ್ತು? (ವಿವರಗಳನ್ನು ಒದಗಿಸುವುದು)	2018-2019 ರಿಂದ 2020-21 ನೇ ಸಾಲಿಗಾಗಿ ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳಿಂದ ಸರ್ಕಾರ ಪ್ರತಿ ವರ್ಷ ಶೇಕಡ 100 ರಷ್ಟು ಆಸ್ತಿ ತೆರಿಗೆ ಮೊತ್ತ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚತಂತ್ರ ವರದಿಯ ಪ್ರಕಾರ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳು ಪ್ರಸಕ್ತ ಸಾಲಿನ ಬೇಡಿಕೆಗೆ ಅನುಗುಣವಾಗಿ 2018-19ನೇ ಸಾಲಿನಲ್ಲಿ ಶೇ.69.61 ರಷ್ಟು, 2019-20ನೇ ಸಾಲಿನಲ್ಲಿ ಶೇ.99.39 ರಷ್ಟು ಮತ್ತು 2020-21ನೇ ಸಾಲಿನಲ್ಲಿ ಶೇ.79.39 ರಷ್ಟು ತೆರಿಗೆಯನ್ನು ವಸೂಲಿ ಮಾಡಿರುತ್ತವೆ. ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

ಸಂ. ಗ್ರಾಅಪ 161 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3524
ಸದಸ್ಯರ ಹೆಸರು	:	ಶ್ರೀ ಮಹೇಶ್ ಎನ್. (ಕೊಳ್ಳೇಗಾಲ)
ಉತ್ತರಿಸುವ ದಿನಾಂಕ	:	24-03-2020
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳನ್ನು ಸಬಲೀಕರಣ ಮಾಡುವ ಉದ್ದೇಶಕ್ಕಾಗಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಯನ್ನು ಸೃಜನೆ ಮಾಡಲಾಗಿದ್ದು, ಆಡಳಿತಾತ್ಮಕ ತೊಂದರೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿಲ್ಲ.
ಆ	ಗ್ರಾಮ ಪಂಚಾಯತಿ ವ್ಯಾಪ್ತಿಯ ವಿವಿಧ ಇಲಾಖೆಗಳಲ್ಲಿ ಗ್ರೂಪ್ ಬಿ ವೃಂದದ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಇವರುಗಳ ಮೇಲುಸ್ತುವಾರಿ ಮಾಡಬೇಕಿರುವ ಪಿಡಿಓ ಹುದ್ದೆಯು ಗ್ರೂಪ್-ಸಿ ವೃಂದಕ್ಕೆ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗ್ರಾಮ ಪಂಚಾಯತಿಯು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಅನುಸೂಚಿ-1 ರಲ್ಲಿನ ಪ್ರಕಾರ್ಯಗಳಿಗೆ ಸಂಬಂಧಿಸಿದಂತೆ ಇಲಾಖೆಗಳ ಮೇಲ್ವಿಚಾರಣೆ ಮತ್ತು ಪರಿಶೀಲನೆ ಮಾಡಬೇಕಾಗಿರುತ್ತದೆ.
ಇ	ಗ್ರೂಪ್ ಸಿ ವೃಂದದ ಪಿಡಿಓಗಳು ಗ್ರಾಮ ಪಂಚಾಯತಿ ಮಟ್ಟದ ಕೆಡಿಪಿ ಸಭೆಗಳಲ್ಲಿ ಗ್ರೂಪ್-ಬಿ ವೃಂದದ ಇತರೆ ಇಲಾಖೆಗಳ ಮೇಲುಸ್ತುವಾರಿ ಮತ್ತು ಪ್ರಗತಿ ಪರಿಶೀಲನೆ ಮಾಡುವಲ್ಲಿ ತಾಂತ್ರಿಕ ತೊಂದರೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿಲ್ಲ. ಆದಾಗ್ಯೂ ದಿನಾಂಕ:11-06-2019 ರಂದು ಹೊರಡಿಸಿರುವ ಸರ್ಕಾರದ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (ಕೆ.ಡಿ.ಪಿ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಲು ಸಮಿತಿ ರಚನೆ ಮಾಡಲಾಗಿದ್ದು, ಅದರಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಪರಿಶೀಲನೆ ಮತ್ತು ಮೇಲ್ವಿಚಾರಣೆ ಮಾಡುವರು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಸದಸ್ಯ ಕಾರ್ಯದರ್ಶಿಯಾಗಿದ್ದು ಕೆ.ಡಿ.ಪಿ ಸಭೆಯನ್ನು ನಡೆಸಲು ದಿನಾಂಕವನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರಿಂದ ಪಡೆದು ಸಭೆ ನಡೆಸಲು ಕ್ರಮ ಕೈಗೊಂಡು, ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕಾಗಿರುತ್ತದೆ.

ಈ	ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೆಡಿಪಿ ಹಾಗೂ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನೆ ಸುಗಮವಾಗಿ ಸಾಗಲು ಹಾಗೂ ಗ್ರಾಮಗಳ ಜನರಿಗೆ ಸಮರ್ಪಕ ಸೇವೆ ಸಿಗುವಂತಾಗಲು ಪಿಡಿಓ ಹುದ್ದೆಯನ್ನು ಗ್ರೂಪ್-ಬಿ ವೃಂದಕ್ಕೆ ಮೇಲ್ದರ್ಜೇಗೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಆರ್ಥಿಕ ಇಲಾಖೆಯ ಅಭಿಪ್ರಾಯದ ಮೇರೆಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಗೆ ಮೇಲ್ದರ್ಜೇಗೇರಿಸುವ ಪ್ರಸ್ತಾವನೆಯನ್ನು 6ನೇ ಕರ್ನಾಟಕ ರಾಜ್ಯ ವೇತನ ಆಯೋಗದ ಮುಂದೆ ಮಂಡಿಸಲಾಗಿತ್ತು. 6ನೇ ರಾಜ್ಯ ವೇತನ ಆಯೋಗವು ತನ್ನ ವರದಿಯ 2ನೇ ಸಂಪುಟವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದ್ದು, ಗ್ರಾಮ ಪಂಚಾಯತಿಗಳ ಮೇಲ್ದರ್ಜೇಗೇರಿಸುವಿಕೆ ವಿಷಯವು ಸರ್ಕಾರದ ಹಂತದಲ್ಲಿ ಅದರ ಕಾರ್ಯನಿರ್ವಹಣೆಯ ಅಗತ್ಯತೆಗಳನ್ನು ಮತ್ತು ಇತರೆ ತತ್ಸಬಂಧ ಅಂಶಗಳನ್ನು ತೀರ್ಮಾನಿಸಬೇಕಾಗುತ್ತದೆ ಎಂದು ತಿಳಿಸಿರುತ್ತದೆ. ರಾಜ್ಯದ ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಯನ್ನಾಗಿ ಮೇಲ್ದರ್ಜೇಗೇರಿಸುವ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.
ಉ	ಯಾವ ಕಾಲಮಿತಿಯೊಳಗೆ ಪಿಡಿಓ ಹುದ್ದೆಯನ್ನು ಗ್ರೂಪ್-ಬಿ ವೃಂದಕ್ಕೆ ಮೇಲ್ದಜೇಗೇರಿಸಲಾಗುವುದೇ?	ಕಾಲಮಿತಿ ನಿಗಧಿಪಡಿಸಿರುವುದಿಲ್ಲ.

ಸಂ. ಗ್ರಾಅಪ 162 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3526
ಸದಸ್ಯರ ಹೆಸರು	:	ಶ್ರೀ ಮಹೇಶ್ ಎನ್. (ಕೊಳ್ಳೇಗಾಲ)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ	:	24/03/2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಹಾಗೂ ಕಿರು ಅಂಗನವಾಡಿ ಘಟಕಗಳು ಎಷ್ಟು; ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕಿಯರು ಹಾಗೂ ಸಹಾಯಕಿಯರು ಎಷ್ಟು; (ವಿವರ ನೀಡುವುದು.)	ರಾಜ್ಯದಲ್ಲಿ 62580 ಮುಖ್ಯ ಅಂಗನವಾಡಿ ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ – ಅಂಗನವಾಡಿ ಕಾರ್ಯಕರ್ತೆಯರು – 64120 ಅಂಗನವಾಡಿ ಸಹಾಯಕಿಯರು – 59079
ಆ.	ಅಂಗನವಾಡಿ ಶಿಕ್ಷಕಿಯರು ಹಾಗೂ ಸಹಾಯಕಿಯರು ತಮ್ಮ ಬೇಡಿಕೆಗಳನ್ನು ಈಡೇರಿಸಲು ಸರ್ಕಾರಕ್ಕೆ ಪ್ರತಿಭಟನೆ ಮೂಲಕ ಮನವಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಇ.	ಅಂಗನವಾಡಿ ಶಿಕ್ಷಕಿಯರು ಹಾಗೂ ಸಹಾಯಕಿಯರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರವು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಂಡಿರುತ್ತದೆ.

ಕ್ರ. ಸಂ.	ಬೇಡಿಕೆ	ಕೈಗೊಂಡ ಕ್ರಮ
1	ಅಂ.ಕಾರ್ಯಕರ್ತೆಯರ ಕೆಲಸವನ್ನು ಖಾಯಂಗೊಳಿಸಬೇಕು ಅಥವಾ ಕನಿಷ್ಠ ವೇತನವನ್ನು ಮಾಡಬೇಕು.	ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರು ಗೌರವಧನ ಸೇವೆಗೆ ಸೇರಿರುವುದರಿಂದ ಖಾಯಂಗೊಳಿಸುವ ವಿಷಯ ಮತ್ತು ಕನಿಷ್ಠ ವೇತನ ನಿಯಮ ಅನ್ವಯಿಸುವುದಿಲ್ಲ.
2	ಐ.ಸಿ.ಡಿ.ಎಸ್. ಯೋಜನೇತರ ಕೆಲಸವನ್ನು ವಹಿಸುವುದನ್ನು ನಿಲ್ಲಿಸುವುದು.	ಐ.ಸಿ.ಡಿ.ಎಸ್. ಯೋಜನೆಯನ್ನು ಹೊರತುಪಡಿಸಿ ಇತರೆ ಕೆಲಸ ಕಾರ್ಯಗಳನ್ನು ವಹಿಸದಿರುವ ಬಗ್ಗೆ ಈಗಾಗಲೇ ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಉಪ ನಿರ್ದೇಶಕರುಗಳಿಗೆ ಪತ್ರ ಬರೆಯಲಾಗಿದೆ.
3	ಅಂ.ಕಾರ್ಯಕರ್ತೆಯರಿಗೆ ಇ.ಎಸ್.ಐ. / ಪಿ.ಎಫ್. ಜಾರಿಗೊಳಿಸುವುದು.	ಅಂ.ಕಾರ್ಯಕರ್ತೆ / ಸಹಾಯಕಿಯರು ಗೌರವ ಸೇವೆಗೆ ಸೇರಿರುವುದರಿಂದ ಇ.ಎಸ್.ಐ. / ಪಿ.ಎಫ್. ನಿಯಮ ಅನ್ವಯಿಸುವುದಿಲ್ಲ.

4	ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಗೌರವಧನವನ್ನು ಹೆಚ್ಚಿಸುವ ಕುರಿತು.	ಕಳೆದ ಸಾಲಿನಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಅಂಗನವಾಡಿ ಸಹಾಯಕಿಯರ ಗೌರವಧನವನ್ನು ಹೆಚ್ಚಿಸಿರುವುದರಿಂದ, ಪ್ರಸ್ತುತ ಗೌರವಧನ ಹೆಚ್ಚಿಸುವ ಪ್ರಸ್ತಾವನೆ ಇರುವುದಿಲ್ಲ.
5	ಸೇವಾ ಹಿರಿತನದ ಆಧಾರದಲ್ಲಿ ಗೌರವಧನ ಹೆಚ್ಚಳ ಮಾಡುವುದು.	ಕೋವಿಡ್–19ರ ಹಿನ್ನೆಲೆಯಲ್ಲಿ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗಿರುವುದಿಲ್ಲ.
6	ಮಿನಿ ಅಂಗನವಾಡಿಗಳನ್ನು ಉನ್ನತೀಕರಿಸಿ, ಸಹಾಯಕಿಯರನ್ನು ನೇಮಕಾತಿ ಮಾಡಿ, ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ, ಕಾರ್ಯಕರ್ತೆಯರಿಗೆ ಕೊಡುವ ಗೌರವಧನದಷ್ಟೇ ಮೊತ್ತವನ್ನು ಕೊಡುವುದು.	ಕೋವಿಡ್–19ರ ಹಿನ್ನೆಲೆಯಲ್ಲಿ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗಿರುವುದಿಲ್ಲ.

ಈ.	ಸರ್ಕಾರವು ಯಾವ ಕಾಲಮಿತಿಯೊಳಗೆ ಈ ಬೇಡಿಕೆಗಳನ್ನು ಈಡೇರಿಸಲಾಗುವುದು?	ಕೋವಿಡ್–19ರ ಹಿನ್ನೆಲೆಯಲ್ಲಿ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಬೇಡಿಕೆಗಳನ್ನು ಪರಿಗಣಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಮಮಇ 135 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3544

ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಸಾರಿಗೆ ಇಲಾಖೆಯ ವತಿಯಿಂದ ಬಸ್ ಪಾಸುಗಳನ್ನು ಪಡೆದುಕೊಂಡವರ ಸಂಖ್ಯೆ ಎಷ್ಟು;	ಈ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಬೀದರ್ ಜಿಲ್ಲೆಯ ಬೀದರ್ ದಕ್ಷಿಣ ಕ್ಷೇತ್ರದಲ್ಲಿ ಸಂಸ್ಥೆಯ ವತಿಯಿಂದ 2020-21ನೇ ಸಾಲಿನಲ್ಲಿ ವಿವಿಧ ದರ್ಜೆಯ ಒಟ್ಟು 8979 ಬಸ್ ಪಾಸ್‌ಗಳನ್ನು ವಿತರಿಸಲಾಗಿರುತ್ತದೆ.
ಆ)	ಈ ಕ್ಷೇತ್ರದಲ್ಲಿನ ಸಾರಿಗೆ ಇಲಾಖೆಯು ಈ ಪೈಕಿ ಎಷ್ಟು ವಿದ್ಯಾರ್ಥಿಗಳು ಹಾಗೂ ವಿಕಲಚೇತನರಿಗೆ ಬಸ್ ಪಾಸುಗಳನ್ನು ವಿತರಿಸಲಾಗಿದೆ;	ಸದರಿ ಕ್ಷೇತ್ರದಲ್ಲಿ ಒಟ್ಟು 8560 ಬಸ್ ಪಾಸ್‌ಗಳನ್ನು ವಿದ್ಯಾರ್ಥಿಗಳಿಗೆ ಹಾಗೂ 400 ಬಸ್ ಪಾಸ್‌ಗಳನ್ನು ವಿಕಲಚೇತನರಿಗೆ ವಿತರಿಸಲಾಗಿದೆ.
ಇ)	ಸಾರಿಗೆ ಇಲಾಖೆಯ ವತಿಯಿಂದ ಒದಗಿಸಲಾದ ವಿವಿಧ ಬಸ್ ಪಾಸುಗಳ ವಿವರಗಳನ್ನು ಒದಗಿಸುವುದು?	ನಾಲ್ಕೂ ಸಾರಿಗೆ ಸಂಸ್ಥೆಗಳಿಂದ ವಿತರಿಸಲಾಗುವ ವಿವಿಧ ರಿಯಾಯಿತಿ/ ಉಚಿತ ಬಸ್ ಪಾಸುಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ: ಟಿಡಿ 153 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

<u>ಅನುಬಂಧ</u>

1. ವಿದ್ಯಾರ್ಥಿ ಉಚಿತ / ರಿಯಾಯಿತಿ ಬಸ್ ಪಾಸ್
2. ವಿಕಲಚೇತನರ ರಿಯಾಯಿತಿ ಬಸ್ ಪಾಸ್
3. ಅಂಧರ ಉಚಿತ ಬಸ್ ಪಾಸ್
4. ಸ್ವಾತಂತ್ರ್ಯ ಹೋರಾಟಗಾರರ ಉಚಿತ ಬಸ್ ಪಾಸ್
5. ಸ್ವಾತಂತ್ರ್ಯ ಹೋರಾಟಗಾರರ ವಿಧವಾ ಪತ್ನಿಯರ ಉಚಿತ ಬಸ್ ಪ್ರಯಾಣದ ಕೂಪನ್
6. ಹುತಾತ್ಮ ಯೋಧರ ಅವಲಂಬಿತರ ಬಸ್ ಪಾಸ್
7. ಗೋವಾ ವಿಮೋಚನಾ ಚಳುವಳಿಗ್ಗರರ ಉಚಿತ ಬಸ್ ಪಾಸ್
8. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಷ್ಟ್ರಪ್ರಶಸ್ತಿ ವಿಜೇತ ಸಾಹಿತಿ / ಕಲಾವಿದರಿಗೆ ಉಚಿತ ಬಸ್ ಪಾಸ್
9. ಪತ್ರಕರ್ತರ ಉಚಿತ ಬಸ್ ಪಾಸ್
10. ಮಾಜಿ ವಿಧಾನ ಸಭಾ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯರ ಉಚಿತ ಬಸ್ ಪಾಸ್
11. ಅರ್ಜುನ ಪ್ರಶಸ್ತಿ, ದ್ರೋಣಾಚಾರ್ಯ, ರಾಜೀವ್ ಗಾಂಧಿ ಖೇಲ್ ರತ್ನಾ, ಧ್ಯಾನ್ ಚಂದ್ ಪ್ರಶಸ್ತಿ ಪುರಸ್ಕೃತರ ಉಚಿತ ಬಸ್ ಪಾಸ್.
12. ಶೌರ್ಯಪ್ರಶಸ್ತಿ ವಿಜೇತರಿಗೆ 18 ವರ್ಷದವರೆಗೆ ಉಚಿತ ಬಸ್ ಪಾಸ್.
13. ಹಾಲಿ ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳಿಗೆ ಉಚಿತ ಬಸ್ ಪಾಸ್.
14. ಕನ್ನಡ ಸಾಹಿತ್ಯ ಪರಿಷತ್‌ನ ರಾಜ್ಯ ಹಾಗೂ ಜಿಲ್ಲಾಧ್ಯಕ್ಷರುಗಳಿಗೆ ಉಚಿತ ಬಸ್ ಪಾಸ್.
15. ಎಂಡೋಸಲ್ಫಾನ್ ಪೀಡಿತರಿಗೆ ಉಚಿತ ಬಸ್ ಪಾಸ್ (ಕ.ರಾ.ರ.ಸಾ.ನಿಗಮ ಹಾಗೂ ವಾ.ಕ.ರ.ಸಾ.ಸಂಸ್ಥೆಗಳಿಂದ ವಿತರಿಸಲಾಗುತ್ತದೆ).
16. ಒಲಂಪಿಕ್ ಪ್ರಶಸ್ತಿ ಹಾಗೂ ಪ್ಯಾರಾ ಒಲಂಪಿಕ್ ಪ್ರಶಸ್ತಿ ವಿಜೇತರ ಉಚಿತ ಬಸ್ ಪಾಸ್.
17. ಪೊಲೀಸ್ ಡ್ಯೂಟಿ ಪಾಸ್ (ಬೆಂ.ಮ.ಸಾ.ಸಂಸ್ಥೆಯಿಂದ ವಿತರಿಸಲಾಗುತ್ತದೆ)
18. ಪೊಲೀಸ್ ಡ್ಯೂಟಿ ಸಮನ್ಸ್ ಪಾಸ್ (ಬೆಂ.ಮ.ಸಾ.ಸಂಸ್ಥೆಯಿಂದ ವಿತರಿಸಲಾಗುತ್ತದೆ)
19. ಅಗ್ನಿಶಾಮಕ ಮತ್ತು ತುರ್ತುದಳದ ಪಾಸ್ (ಬೆಂ.ಮ.ಸಾ.ಸಂಸ್ಥೆಯಿಂದ ವಿತರಿಸಲಾಗುತ್ತದೆ)
20. ಸಹಾಯಹಸ್ತ ಪಾಸ್ (ಬೆಂ.ಮ.ಸಾ.ಸಂಸ್ಥೆಯಿಂದ ವಿತರಿಸಲಾಗುತ್ತದೆ)

****

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3545
ಸದಸ್ಯರ ಹೆಸರು	ಶ್ರೀ ಬಂಡೆಪ್ಪ ಖಾಶೆಂಪೂರ್
ಉತ್ತರಿಸುವ ದಿನಾಂಕ	24/03/2021
ಉತ್ತರಿಸುವವರು	ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

	ಪ್ರಶ್ನೆಗಳು	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ರೇಷ್ಮೆ ಬೆಳೆಯುವ ರೈತರ ಸಂಖ್ಯೆ ಎಷ್ಟು;	ಬೀದರ್ ಜಿಲ್ಲೆಯಲ್ಲಿ ಒಟ್ಟು 592 ರೈತರು ರೇಷ್ಮೆ ಬೆಳೆಗಾರರಿರುತ್ತಾರೆ.
ಆ)	ರೇಷ್ಮೆ ಬೆಳೆಯುವ ರೈತರಿಗೆ ಇಲಾಖೆಯ ವತಿಯಿಂದ ಯಾವ ಯಾವ ಯೋಜನೆಗಳಿವೆ;	ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಇಲಾಖೆವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. 1. ರೇಷ್ಮೆ ಅಭಿವೃದ್ಧಿ ಯೋಜನೆ 2. ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು ಯೋಜನೆ 3. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 4. ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ 5. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ 6. ಕಟ್ಟಡ ಕಾಮಗಾರಿಗಳು ಜಿಲ್ಲಾ / ತಾಲ್ಲೂಕು ವಲಯ ಯೋಜನೆಗಳು
ಇ)	ಕಳೆದ ವರ್ಷ ಈ ಯೋಜನೆಗಳಡಿ ಜಿಲ್ಲೆಯ ಎಷ್ಟು ರೈತರು ಯಾವ ಯಾವ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ;	ಬೀದರ್ ಜಿಲ್ಲೆಯಲ್ಲಿ ಕಳೆದ ಸಾಲಿನಲ್ಲಿ ವಿವಿಧ ಯೋಜನೆಯಡಿ ಸಹಾಯಧನ / ಪ್ರೋತ್ಸಾಹಧನ ಪಡೆದ ರೇಷ್ಮೆ ಬೆಳೆಗಾರರ ವಿವರ ಕೆಳಕಂಡಂತಿದೆ. 1. ರೇಷ್ಮೆ ಅಭಿವೃದ್ಧಿ ಯೋಜನೆಯಡಿ ರೇಷ್ಮೆ ಹುಳು ಸಾಕಾಣಿಕೆ ಮನೆಗೆ 19 ಮಂದಿ ಮತ್ತು ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗಳಿಗೆ 229 ಮಂದಿ ರೇಷ್ಮೆ ಬೆಳೆಗಾರರು ಸೌಲಭ್ಯ ಪಡೆದಿರುತ್ತಾರೆ. 2. ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು ಯೋಜನೆಯಡಿ ದ್ವಿತಳಿ ಚಾಕಿ ವೆಚ್ಚ ಮತ್ತು ದ್ವಿತಳಿ ರೇಷ್ಮೆ ಗೂಡು ಸಾಗಾಣಿಕಾ ವೆಚ್ಚಕ್ಕಾಗಿ 373 ಮಂದಿ ರೇಷ್ಮೆ ಬೆಳೆಗಾರರು ಸೌಲಭ್ಯ ಪಡೆದಿರುತ್ತಾರೆ. 3. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹನಿ ನೀರಾವರಿ ಘಟಕ ಅಳವಡಿಕೆಗೆ 36 ಮಂದಿ ರೇಷ್ಮೆ ಬೆಳೆಗಾರರು ಸೌಲಭ್ಯ ಪಡೆದಿರುತ್ತಾರೆ. 4. ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆಯಡಿಯಲ್ಲಿ ರೈತರಿಂದ ರೈತರಿಗೆ ತರಬೇತಿ ಕಾರ್ಯಕ್ರಮದಡಿಯಲ್ಲಿ 200 ಜನ ರೇಷ್ಮೆ ಬೆಳೆಗಾರರಿಗೆ ತರಬೇತಿ ನೀಡಲಾಗಿದೆ. 5. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಟ್ರಂಚಿಂಗ್ ಮತ್ತು ಮಲ್ಚಿಂಗ್ ಹಾಗೂ ಮಣ್ಣಿನ ಫಲವತ್ತತೆ ಸಮೃದ್ಧಿಗೆ ಪ್ಯಾಕೇಜ್ ಅಡಿಯಲ್ಲಿ 78 ಮಂದಿ ರೇಷ್ಮೆ ಬೆಳೆಗಾರರು ಸೌಲಭ್ಯ ಪಡೆದಿರುತ್ತಾರೆ. 6. ಜಿಲ್ಲಾ / ತಾಲ್ಲೂಕು ವಲಯ ಯೋಜನೆಯಡಿಯಲ್ಲಿ ಹಿಪ್ಪುನೇರಳೆ ನಾಟಿ / ನರ್ಸರಿ ಮಾಡಿರುವ 32 ಮಂದಿ ರೇಷ್ಮೆ ಬೆಳೆಗಾರರು ಸೌಲಭ್ಯ ಪಡೆದಿರುತ್ತಾರೆ

----2

ಈ)	ಪ್ರಸಕ್ತ ಸಾಲಿನಲ್ಲಿ ಈ ಯೋಜನೆಗಳಿಗೆ ಒದಗಿಸಲಾಗಿರುವ ಅನುದಾನವೆಷ್ಟು? (ವಿವರ ನೀಡುವುದು)	ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಈ ಯೋಜನೆಗಳ ಅನುಷ್ಠಾನಕ್ಕಾಗಿ ಒದಗಿಸಿರುವ ಅನುದಾನದ ವಿವರ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆ	ಒದಗಿಸಿರುವ ಅನುದಾನ
1	ರೇಷ್ಮೆ ಅಭಿವೃದ್ಧಿ ಯೋಜನೆ	74.41
2	ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು ಯೋಜನೆ	7.70
3	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ	20.00
4	ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ	3.15
5	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ	5.13
6	ಜಿಲ್ಲಾ / ತಾಲ್ಲೂಕು ವಲಯ ಯೋಜನೆಗಳು	12.19
	ಒಟ್ಟು	**122.58**

ಸಂಖ್ಯೆ: ರೇಷ್ಮೆ 83 ರೇಕೃವಿ 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3555

ಸದಸ್ಯರ ಹೆಸರು : ಶ್ರೀ ಸಿದ್ದು ಸವದಿ (ತೇರದಾಳ)

ಉತ್ತರಿಸಬೇಕಾದ ದಿನಾಂಕ : 24-03-2021.

ಉತ್ತರಿಸುವ ಸಚಿವರು : ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ.</td><td>ಬಾಗಲಕೋಟೆ ಜಿಲ್ಲೆಯಲ್ಲಿರುವ ವಕ್ಫ್ ಆಸ್ತಿಗಳೆಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಬಾಗಲಕೋಟೆ ಜಿಲ್ಲೆಯಲ್ಲಿರುವ ವಕ್ಫ್ ಆಸ್ತಿಗಳ ವಿಧಾನಸಭಾ ಕ್ಷೇತ್ರವಾರು ಮಾಹಿತಿ ಲಭ್ಯವಿರುವುದಿಲ್ಲ, ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ತಾಲ್ಲೂಕಿನ ಹೆಸರು</th><th>ಒಟ್ಟು ವಕ್ಫ್ ಆಸ್ತಿಗಳ ಸಂಖ್ಯೆ</th></tr>
<tr><td>1</td><td>ಬಾಗಲಕೋಟೆ</td><td>185</td></tr>
<tr><td>2</td><td>ಹುನಗುಂದ</td><td>256</td></tr>
<tr><td>3</td><td>ಬಾದಾಮಿ</td><td>190</td></tr>
<tr><td>4</td><td>ಜಮಖಂಡಿ</td><td>281</td></tr>
<tr><td>5</td><td>ಮುಧೋಳ</td><td>200</td></tr>
<tr><td>6</td><td>ಬೀಳಗಿ</td><td>205</td></tr>
<tr><td></td><td>ಒಟ್ಟು</td><td>1317</td></tr>
</table></td></tr>
<tr><td>ಆ.</td><td>ಸದರಿ ಜಿಲ್ಲಾ ಆಸ್ತಿಗಳು ಯಾವಾಗ ಮತ್ತು ಯಾವ ನಿಯಮಾವಳಿ ಪ್ರಕಾರ ಇಲಾಖೆಯ ಆಸ್ತಿಗಳಾಗಿವೆ; (ಕ್ಷೇತ್ರವಾರು ಮಾಹಿತಿ ಒದಗಿಸುವುದು)</td><td>ಬಾಗಲಕೋಟೆ ಜಿಲ್ಲೆಯಲ್ಲಿರುವ ಆಸ್ತಿಗಳು ವಕ್ಫ್ ಕಾಯ್ದೆ 1954ರ ಕಲಂ 5 ರನ್ವಯ ದಿನಾಂಕ: 29-08-1973 ರಂದು ಅಧಿಸೂಚನೆಯಾಗಿರುತ್ತದೆ. ಹಾಗೂ ವಕ್ಫ್ ಕಾಯ್ದೆ, 1995ರ ಕಲಂ 36 ರನ್ವಯ ನೋಂದಣಿಯಾಗಿರುವ ಆಸ್ತಿಯ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ತಾಲ್ಲೂಕಿನ ಹೆಸರು</th><th>ಒಟ್ಟು ವಕ್ಫ್ ಆಸ್ತಿಗಳ ಸಂಖ್ಯೆ</th></tr>
<tr><td>1</td><td>ಬಾಗಲಕೋಟೆ</td><td>185</td></tr>
<tr><td>2</td><td>ಹುನಗುಂದ</td><td>256</td></tr>
<tr><td>3</td><td>ಬಾದಾಮಿ</td><td>190</td></tr>
<tr><td>4</td><td>ಜಮಖಂಡಿ</td><td>281</td></tr>
<tr><td>5</td><td>ಮುಧೋಳ</td><td>200</td></tr>
<tr><td>6</td><td>ಬೀಳಗಿ</td><td>205</td></tr>
<tr><td></td><td>ಒಟ್ಟು</td><td>1317</td></tr>
</table></td></tr>
</table>

......2

<table>
<tr>
<td>ಇ.</td>
<td>ನ್ಯಾಯಾಲಯದಲ್ಲಿರುವ ಇಲಾಖೆ ಆಸ್ತಿ ಎಷ್ಟು; ಯಾವ ಕಾರಣಕ್ಕೆ ವ್ಯಾಜ್ಯಗಳಿವೆ;</td>
<td>ನ್ಯಾಯಾಲಯದಲ್ಲಿರುವ ಇಲಾಖೆ ಆಸ್ತಿಗಳ ವಿವರ ಈ ಕೆಳಕಂಡಂತಿದೆ.
<table>
<tr><th>ನ್ಯಾಯಾಲಯದ ಹೆಸರು</th><th>ಆಸ್ತಿಗಳ ಸಂಖ್ಯೆ</th><th>ವ್ಯಾಜ್ಯದ ಕಾರಣ</th></tr>
<tr><td>ವಕ್ಫ್ ಮಂಡಳಿ</td><td>1960</td><td>ಅನಧಿಕೃತ ಒತ್ತುವರಿ</td></tr>
<tr><td>ವಕ್ಫ್ ಮಂಡಳಿ</td><td>478</td><td>ಅನಧಿಕೃತ ಮಾರಾಟ</td></tr>
<tr><td>ವಕ್ಫ್ ನ್ಯಾಯಾಧಿಕರಣ</td><td>381</td><td>ಸಿವಿಲ್ ಸ್ವರೂಪದ ವ್ಯಾಜ್ಯ</td></tr>
<tr><td>ವಕ್ಫ್ ನ್ಯಾಯಾಧಿಕರಣ</td><td>695</td><td>ಸಿವಿಲ್ ಸ್ವರೂಪದ ವ್ಯಾಜ್ಯ</td></tr>
<tr><td>ಒಟ್ಟು</td><td>3514</td><td></td></tr>
</table>
</td>
</tr>
<tr>
<td>ಈ.</td>
<td>ಸದರಿ ಎಲ್ಲಾ ಆಸ್ತಿಗಳ ಎಕರೆವಾರು ಮಾಹಿತಿ ನೀಡುವುದು?</td>
<td>ಆಸ್ತಿಗಳ ಎಕರೆವಾರು ವಿವರ ಈ ಕೆಳಕಂಡಂತಿದೆ.
<table>
<tr><th rowspan="2">ತಾಲ್ಲೂಕಿನ ಹೆಸರು</th><th rowspan="2">ವಕ್ಫ್ ಆಸ್ತಿಗಳ ಸಂಖ್ಯೆ</th><th colspan="2">ವಿಸ್ತೀರ್ಣ</th></tr>
<tr><th>ಎ-ಗುಂ</th><th>ಚ.ಅಡಿ</th></tr>
<tr><td>ಬಾಗಲಕೋಟೆ</td><td>185</td><td>1614-13</td><td>211181.58</td></tr>
<tr><td>ಹುನಗುಂದ</td><td>256</td><td>228-21</td><td>146209.47</td></tr>
<tr><td>ಬಾದಾಮಿ</td><td>190</td><td>1566-35</td><td>763115.89</td></tr>
<tr><td>ಜಮಖಂಡಿ</td><td>281</td><td>1941-42</td><td>1336915.61</td></tr>
<tr><td>ಮುಧೋಳ</td><td>200</td><td>1470-59</td><td>657603.566</td></tr>
<tr><td>ಬೀಳಗಿ</td><td>205</td><td>712-23</td><td>43298.17</td></tr>
<tr><td>ಒಟ್ಟು</td><td>1317</td><td>7535-33</td><td>3158324.286</td></tr>
</table>
</td>
</tr>
</table>

ಸಂಖ್ಯೆ: MWD 155 LMQ 2021

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3559
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	24.03.2021

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಿಜಯಪುರ ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ನಿವಾರಿಸಲು ಉದ್ಯೋಗ ಸೃಷ್ಟಿಗಾಗಿ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಟೆಕ್ಸ್ ಟೈಲ್ ಪಾರ್ಕ್ ಸ್ಥಾಪನೆ ಮಾಡುವ ಯೋಜನೆಯು ಸರ್ಕಾರದ ಮುಂದಿದೆಯೇ;</td><td>ವಿಜಯಪುರ ಜಿಲ್ಲೆಯಲ್ಲಿ ಟೆಕ್ಸ್ ಟೈಲ್ ಪಾರ್ಕ್ ಸ್ಥಾಪನೆ ಮಾಡುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.
ಆದಾಗ್ಯೂ, 15 ಎಕರೆ ಜಾಗ ಹೊಂದಿರುವ ಆಸಕ್ತ ಜವಳಿ ಉದ್ದಿಮೆದಾರರು ಎಸ್.ಪಿ.ವಿ. ರಚಿಸಿ ಜವಳಿ ಪಾರ್ಕ್ ಸ್ಥಾಪಿಸಲು ಮುಂದೆ ಬಂದಲ್ಲಿ, ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24ರ ಯೋಜನೆಯ ಮಾರ್ಗಸೂಚಿ ಅನ್ವಯ ಅರ್ಹ ಪ್ರೋತ್ಸಾಹನ ಗಳನ್ನು ನೀಡಲಾಗುವುದು.</td></tr>
<tr><td>ಆ)</td><td>ಈ ಜಿಲ್ಲೆಯಲ್ಲಿ ಯಾವ ಯಾವ ಯೋಜನೆಗಳಿಂದ ಎಷ್ಟು ಫಲಾನುಭವಿ ನೇಕಾರರಿಗೆ ಸಹಾಯಧನ ಮಂಜೂರು ಮಾಡಲಾಗಿದೆ?</td><td>ವಿಜಯಪುರ ಜಿಲ್ಲೆಯಲ್ಲಿ ಅನುಷ್ಠಾನ ಗೊಳಿಸಲಾಗಿರುವ ಯೋಜನೆಗಳ ವಿವರಗಳು;
ನೇಕಾರರ ಸಾಲಮನ್ನಾ ಯೋಜನೆಯಡಿ ಕಳೆದ 03 ವರ್ಷಗಳಲ್ಲಿ ನೇಕಾರರಿಗೆ ಸಾಲಮನ್ನಾ ಮಾಡಿದ ವಿವರ:
<table><tr><th>ವರ್ಷ</th><th>ಭೌತಿಕ</th><th>ಆರ್ಥಿಕ</th></tr><tr><td>2018-19</td><td>343</td><td>98,86,859</td></tr><tr><td>2019-20</td><td>729</td><td>2,99,93,707</td></tr><tr><td>2020-21</td><td>361</td><td>1,72,63,309</td></tr></table>2)ನೇಕಾರ ಸಮ್ಮಾನ್ ಯೋಜನೆ:
ವಿಜಯಪುರ ಜಿಲ್ಲೆಯ 1769 ಕೈಮಗ್ಗ ನೇಕಾರರಿಗೆ ಕೋವಿಡ್-19ರ ಪ್ರಯುಕ್ತ 2020-21ನೇ ಸಾಲಿಗೆ ರೂ.2000/-ರಂತೆ ಒಟ್ಟು ರೂ.35.38 ಲಕ್ಷಗಳ ಆರ್ಥಿಕ ಸಹಾಯ ನೀಡಲಾಗಿದೆ.
3)ವಿದ್ಯುತ್ ಮಗ್ಗ ಕೂಲಿ ಕಾರ್ಮಿಕ ನೇಕಾರರಿಗೆ ಕೋವಿಡ್-19 ರ ಪ್ರಯುಕ್ತ ಒಂದು ಬಾರಿಯ ಪರಿಹಾರವಾಗಿ ಆರ್ಥಿಕ ಬೆಂಬಲ ರೂ.2000/-ರಂತೆ 35 ಫಲಾನುಭವಿಗಳಿಗೆ ಒಟ್ಟು ರೂ.0.68 ಲಕ್ಷಗಳ ಆರ್ಥಿಕ ಸಹಾಯ ನೀಡಲಾಗಿದೆ.</td></tr>
</table>

...2

4) ಶೇ.20ರ ರಿಬೇಟ್ ಯೋಜನೆ:

ವರ್ಷ	ಭೌತಿಕ	ಆರ್ಥಿಕ
2018-19	01	62,212/-

5)ವಿದ್ಯುತ್ ಸಹಾಯಧನ ಯೋಜನೆ:

ಈ ಯೋಜನೆಯಡಿ ಸತತವಾಗಿ ವಿಜಯಪುರ ಜಿಲ್ಲೆಯ 21 ವಿದ್ಯುತ್ ನೇಕಾರರನ್ನು ಅಳವಡಿಸಿಕೊಂಡಿದ್ದು, ಸದರಿ ನೇಕಾರರು ಯೋಜನೆಯ ಪ್ರಯೋಜನವನ್ನು ಪಡೆದು ಕೊಂಡಿರುತ್ತಾರೆ.

6) ವಸತಿ ಕಾರ್ಯಾಗಾರ ಯೋಜನೆ:

ವರ್ಷ	ಭೌತಿಕ	ಆರ್ಥಿಕ
2018-19	08	17.60 ಲಕ್ಷ
2019-20	16	35.20 ಲಕ್ಷ
2020-21	--	--

7) ಜಿಲ್ಲಾ ವಲಯ ಯೋಜನೆ:

ಈ ಯೋಜನೆಯಡಿ ಕೈಮಗ್ಗ ಉದ್ದಿಮೆಗಳಿಗೆ ಕಳೆದ 03 ವರ್ಷಗಳಲ್ಲಿ ನೇಕಾರರಿಗೆ ಈ ಕೆಳಕಂಡಂತೆ ಸಹಾಯಧನ ಒದಗಿಸಲಾಗಿದೆ:-

ವರ್ಷ	ಭೌತಿಕ	ಆರ್ಥಿಕ
2018-19	15	11.25 ಲಕ್ಷ
2019-20	15	11.25 ಲಕ್ಷ
2020-21	15	11.25 ಲಕ್ಷ

ಸಂ: CI 82 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	3567
ಸದಸ್ಯರ ಹೆಸರು	ಶ್ರೀಮತಿ ಕುಸುಮಾವತಿ ಚನ್ನಬಸಪ್ಪ ಶಿವಳ್ಳಿ (ಕುಂದಗೋಳ)
ಉತ್ತರಿಸಬೇಕಾದ ದಿನಾಂಕ	24.03.2021

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	2019-20 ಮತ್ತು 2020-21ನೇ ಸಾಲಿನಲ್ಲಿ ಕುಂದಗೋಳ ವಿಧಾನಸಭೆ ಕ್ಷೇತ್ರಕ್ಕೆ ನೀಡಿರುವ ಅನುದಾನ ಎಷ್ಟು; (ಸಂಪೂರ್ಣ ವಿವರ ನೀಡುವುದು)	2019-20 ಮತ್ತು 2020-21ನೇ ಸಾಲಿನಲ್ಲಿ ಕುಂದಗೋಳ ವಿಧಾನಸಭಾ ಕ್ಷೇತ್ರಕ್ಕೆ ನೀಡಿರುವ ಅನುದಾನದ ವಿವರ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

ಕ್ರ.ಸಂ	ಲೆ.ಶೀ	ಬಿಡುಗಡೆಯಾದ ಅನುದಾನ	
		2019-20	2020-21
1	5054 ಸಿ.ಎಂ.ಜಿ.ಎಸ್.ವೈ	105.44	15.33
2	3054 ಟಾಸ್ಕ್‌ಫೋರ್ಸ್	72.58	0.00
3	3054 ಲಮ್‌ಸಮ್	0.00	400.00
4	5054 ನಬಾರ್ಡ್	0.00	43.00
5	5054 ಮಳೆಹಾನಿ	568.62	0.00
6	5054 ಎನ್.ಜಿ.ಎನ್.ಆರ್.ವೈ	41.84	168.91
7	5054 ವಿಶೇಷ ಅಭಿವೃದ್ಧಿ ಯೋಜನೆ	0.00	57.58
	ಒಟ್ಟು	788.48	684.82

ಕ್ರಸಂ	ಪ್ರಶ್ನೆಗಳು	ಉತ್ತರ
ಆ.	ಕುಂದಗೋಳ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆಗಳು ಮತ್ತು ಸೇತುವೆಗಳು ಭಾರಿ ಮಳೆಯಿಂದ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ.	ಬಂದಿದ್ದಲ್ಲಿ, ರಸ್ತೆ ಮತ್ತು ಸೇತುವೆ ದುರಸ್ತಿ ಕಾರ್ಯಗಳಿಗೆ ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು?	• 2019-20ನೇ ಸಾಲಿನಲ್ಲಿ ಸುರಿದ ಭಾರಿ ಮಳೆಯಿಂದ ಹಾನಿಗೊಳಗಾದ 41 ರಸ್ತೆ ಮತ್ತು ಸೇತುವೆಗಳ ದುರಸ್ತಿಗಾಗಿ ರೂ.568.62 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳು ಬಾಗಶಃ ಪೂರ್ಣಗೊಂಡಿರುತ್ತದೆ. • 2020-21ನೇ ಸಾಲಿನಲ್ಲಿ ಸುರಿದ ಬಾರಿ ಮಳೆಯಿಂದ ಹಾನಿಗೊಳಗಾದ ವಿವರಗಳನ್ನು ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಂದ ಪಡೆದು ಕ್ರೋಢೀಕರಿಸಿ ರೂ.110531.61 ಲಕ್ಷಗಳ ಅನುದಾನ ಒದಗಿಸುವಂತೆ ಕೋರಿ ಕಂದಾಯ ಇಲಾಖೆ (ವಿಪತ್ತು ನಿರ್ವಹಣಾ) ರವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

		• ಕಂದಾಯ ಇಲಾಖೆ ಆದೇಶ ಪತ್ರ ದಿನಾಂಕ:13.01.2021ರಲ್ಲಿ ಎನ್.ಡಿ.ಆರ್.ಎಫ್/ ಎಸ್.ಡಿ.ಆರ್.ಎಫ್ ರ ಮಾರ್ಗಸೂಚಿಗಳನ್ವಯ ರೂ.1045.35 ಲಕ್ಷಗಳ ಅನುದಾನ ಜಿಲ್ಲಾಧಿಕಾರಿಗಳು, ಧಾರವಾಡ ರವರಿಗೆ ಬಿಡುಗಡೆ ಮಾಡಲಾಗಿದೆ. • ಈ ಪೈಕಿ ಕುಂದಗೋಳ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದ ಹಾನಿಗೊಳಗಾದ 99 ರಸ್ತೆ ಮತ್ತು ಸೇತುವೆಗಳ ದುರಸ್ತಿ ಕಾಮಗಾರಿಗಳಿಗೆ ರೂ.174.02 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದ್ದು, ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುತ್ತದೆ.

ಕಡತ ಸಂಖ್ಯೆ: ಗ್ರಾಅಪ:ಅಧಿ-15-9/43:ಆರ್‌ಆರ್‌ಸಿ:2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3589
ಸದಸ್ಯರ ಹೆಸರು	ಶ್ರೀ ಆಚಾರ್ ಹಾಲಪ್ಪ ಬಸಪ್ಪ
ಉತ್ತರಿಸುವ ದಿನಾಂಕ	24/03/2021
ಉತ್ತರಿಸುವವರು	ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

<table>
<tr><th></th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ಕೊಪ್ಪಳ ಜಿಲ್ಲೆಯಲ್ಲಿ ರೇಷ್ಮೆ ಕೃಷಿಗೆ ಪ್ರೋತ್ಸಾಹ ನೀಡಲು ಸರ್ಕಾರ ರೈತರಿಗೆ ನೀಡುತ್ತಿರುವ ಸೌಲಭ್ಯಗಳೇನು:</td><td>1. ರೇಷ್ಮೆ ಅಭಿವೃದ್ಧಿ ಯೋಜನೆ.
2. ಸಿಲ್ಕ್ ಸಮಗ್ರ ಯೋಜನೆ.
3. ರೇಷ್ಮೆ ಕೃಷಿ ಅಭಿವೃದ್ಧಿಗೆ ನೂತನ ಕರ್ತೃತ್ವ ಶಕ್ತಿ ಮತ್ತು ಭಾಗೀದಾರರಿಗೆ ಸವಲತ್ತು ಯೋಜನೆ.
4. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ.
5. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ.
6. ಜಿಲ್ಲಾ ಪಂಚಾಯತ್ ಯೋಜನೆ ಹಾಗೂ ತಾಲ್ಲೂಕು ಪಂಚಾಯತ್ ಯೋಜನೆ.</td></tr>
<tr><td>ಆ)</td><td>ರೇಷ್ಮೆ ಹುಳು ಸಾಗಾಣಿಕೆಗೆ ಮನೆಗಳನ್ನು ನೀಡುವಲ್ಲಿ ಈ ಜಿಲ್ಲೆಗೆ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ ಗುರಿ ಎಷ್ಟು?
(ತಾಲ್ಲೂಕುವಾರು ವಿವರ ನೀಡುವುದು):</td><td>ಹುಳು ಸಾಕಾಣಿಕೆಗೆ ಮನೆಗಳನ್ನು ನೀಡುವಲ್ಲಿ ಈ ಜಿಲ್ಲೆಗೆ ರೇಷ್ಮೆ ಇಲಾಖೆ ಕಳೆದ ಮೂರು ವರ್ಷಗಳಲ್ಲಿ ನಿಗದಿಪಡಿಸಿದ ಭೌತಿಕ ಹಾಗೂ ಆರ್ಥಿಕ ಗುರಿ ಈ ಕೆಳಕಂಡಂತಿದೆ.

(ಭೌತಿಕ - ಸಂಖ್ಯೆಗಳಲ್ಲಿ, ಆರ್ಥಿಕ-ರೂ.ಲಕ್ಷಗಳಲ್ಲಿ)
<table>
<tr><th rowspan="2">ಕ್ರ.ಸಂ</th><th rowspan="2">ತಾಲ್ಲೂಕುಗಳು</th><th colspan="2">2017-18</th><th colspan="2">2018-19</th><th colspan="2">2019-20</th><th colspan="2">2020-21</th></tr>
<tr><th>ಭೌತಿಕ</th><th>ಆರ್ಥಿಕ</th><th>ಭೌತಿಕ</th><th>ಆರ್ಥಿಕ</th><th>ಭೌತಿಕ</th><th>ಆರ್ಥಿಕ</th><th>ಭೌತಿಕ</th><th>ಆರ್ಥಿಕ</th></tr>
<tr><td>1</td><td>ಕೊಪ್ಪಳ</td><td>5</td><td>1.795</td><td>15</td><td>18.255</td><td>10</td><td>21.95</td><td>5</td><td>14.25</td></tr>
<tr><td>2</td><td>ಗಂಗಾವತಿ</td><td>3</td><td>0.21</td><td>0</td><td>0</td><td>0</td><td>0</td><td>2</td><td>6.6</td></tr>
<tr><td>3</td><td>ಕನಕಗಿರಿ</td><td>0</td><td>0</td><td>0</td><td>0</td><td>5</td><td>3.885</td><td>2</td><td>5.25</td></tr>
<tr><td>4</td><td>ಕಾರಟಗಿ</td><td>0</td><td>0</td><td>0</td><td>0</td><td>1</td><td>1.355</td><td>0</td><td>0</td></tr>
<tr><td>5</td><td>ಯಲಬುರ್ಗಾ</td><td>16</td><td>8.345</td><td>16</td><td>19.665</td><td>14</td><td>21.235</td><td>8</td><td>24.15</td></tr>
<tr><td>6</td><td>ಕುಕನೂರು</td><td>0</td><td>0</td><td>0</td><td>0</td><td>2</td><td>6</td><td>2</td><td>6.3</td></tr>
<tr><td>7</td><td>ಕುಷ್ಟಗಿ</td><td>19</td><td>3.265</td><td>24</td><td>19.425</td><td>19</td><td>27.153</td><td>10</td><td>30.996</td></tr>
<tr><td colspan="2">ಒಟ್ಟು</td><td>43</td><td>13.615</td><td>55</td><td>57.345</td><td>51</td><td>81.578</td><td>29</td><td>87.546</td></tr>
</table></td></tr>
<tr><td>ಇ)</td><td>ಕಳೆದ ಮೂರು ವರ್ಷಗಳಲ್ಲಿ ರೇಷ್ಮೆ ಹುಳುಗಳ ಸಾಕಾಣಿಕೆಗಾಗಿ ಮನೆಗಳ ಮಂಜೂರು ಕೋರಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು:</td><td>ರೇಷ್ಮೆ ಹುಳುಗಳ ಸಾಕಾಣಿಕೆಗಾಗಿ ಮನೆಗಳ ಮಂಜೂರು ಕೋರಿ ವರ್ಷವಾರು ಬಂದಿರುವ ಅರ್ಜಿಗಳ ವಿವರ ಕೆಳಕಂಡಂತಿದೆ:-
<table>
<tr><th>2017-18</th><th>2018-19</th><th>2019-20</th><th>2020-21</th><th>ಒಟ್ಟು</th></tr>
<tr><td>43</td><td>63</td><td>74</td><td>77</td><td>257</td></tr>
</table></td></tr>
<tr><td>ಈ)</td><td>ನಿಗದಿಯಾದ ಗುರಿಗಿಂತ ಬೇಡಿಕೆ ಹೆಚ್ಚಾಗಿರುವ ಬಗ್ಗೆ ಹಾಗೂ ಹೆಚ್ಚಿನ ಗುರಿಯನ್ನು ಯೋಜನೆಯಲ್ಲಿ ನೀಡುವ ಕುರಿತು ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಕೆಯಾಗಿದೆಯೇ:</td><td rowspan="2">ನಿಗದಿಯಾದ ಗುರಿಗಿಂತ ಹೆಚ್ಚಾಗಿ ಬೇಡಿಕೆ ಬಂದಾಗ, ಎಲ್ಲಾ ಜಿಲ್ಲೆಗಳ ಬೇಡಿಕೆಗಳನ್ನು ಕ್ರೂಢೀಕರಿಸಿ ಪುನರ್ ವಿನಿಯೋಗಗೊಳಿಸಿ ಹೆಚ್ಚುವರಿ ಅನುದಾನ ನೀಡುವಂತೆ ಆರ್ಥಿಕ ಇಲಾಖೆಯನ್ನು ಕೋರಲಾಗಿತ್ತು. ಆರ್ಥಿಕ ಇಲಾಖೆಯು ಒದಗಿಸಿರುವ ಸಂಪೂರ್ಣ ಅನುದಾನವನ್ನು ವೆಚ್ಚ ಭರಿಸಿದ ನಂತರ ಪ್ರಸ್ತಾವನೆ ಸಲ್ಲಿಸಲು ತಿಳಿಸಿದ್ದು, ಸಂಪೂರ್ಣ ಅನುದಾನ ವೆಚ್ಚ ಭರಿಸಲು ಆರ್ಥಿಕ ವರ್ಷದ ಅಂತ್ಯಕ್ಕೆ ಬಂದಿದ್ದರಿಂದ, ಮತ್ತೊಮ್ಮೆ ಹೆಚ್ಚುವರಿ ಅನುದಾನ ಬಿಡುಗಡೆಗೊಳಿಸಲು ಕೋರಿ ಪ್ರಸ್ತಾವನೆ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ. ಮುಂದುವರೆದು</td></tr>
<tr><td>ಉ)</td><td>ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು?</td></tr>
</table>

---2

		ಕೇಂದ್ರ ರೇಷ್ಮೆ ಮಂಡಳಿಯು ಕೇಂದ್ರ ಪುರಸ್ಕೃತ ಸಿಲ್ಕ್ ಸಮಗ್ರ ಯೋಜನೆಯಡಿ 2020-21ನೇ ಸಾಲಿಗೆ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಿಸಲು ಕೇಂದ್ರದ ಪಾಲಾಗಿ ರೂ.3488.00 ಲಕ್ಷಗಳ ಅನುದಾನ ಒದಗಿಸಿದ್ದು, ಇದಕ್ಕೆ ರಾಜ್ಯದ ಪಾಲು ರೂ.1639.00 ಲಕ್ಷಗಳನ್ನು ಸೇರಿಸಿ ಒಟ್ಟು ರೂ.5127.00 ಲಕ್ಷಗಳು ಮತ್ತು ರಾಜ್ಯ ವಲಯದಡಿ ವಿವಿಧ ವರ್ಗಗಳಿಗೆ ಒಟ್ಟು ರೂ.2503.761 ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ರಾಜ್ಯ ವಲಯ ಮತ್ತು ಕೇಂದ್ರ ಪುರಸ್ಕೃತ ಯೋಜನೆಯಡಿ ಒಟ್ಟು ರೂ.7630.00 ಲಕ್ಷಗಳನ್ನು 3039 ರೇಷ್ಮೆ ಹುಳು ಸಾಕಾಣಿಕೆ ಮನೆಗಳ ನಿರ್ಮಾಣಕ್ಕೆ ಬಿಡುಗಡೆಗೊಳಿಸಿದ್ದು ವೆಚ್ಚ ಭರಿಸಲಾಗುತ್ತಿದೆ. ಇದೇ ಮೊದಲ ಬಾರಿಗೆ ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ರೂ.7630.00 ಲಕ್ಷಗಳು ಬಿಡುಗಡೆಗೊಳಿಸಿರುವುದು ಸರ್ವಕಾಲಿಕ ಸಾಧನೆಯಾಗಿರುತ್ತದೆ.

ಸಂಖ್ಯೆ: ರೇಷ್ಮೆ 86 ರೇಕೃವಿ 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3590
ಸದಸ್ಯರ ಹೆಸರು	ಶ್ರೀ ಆಚಾರ್ ಹಾಲಪ್ಪ ಬಸಪ್ಪ
ಉತ್ತರಿಸುವ ದಿನಾಂಕ	24/03/2021
ಉತ್ತರಿಸುವವರು	ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

<table>
<tr><th></th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಗೆ ರೇಷ್ಮೆ ಇಲಾಖೆಯಿಂದ ಒದಗಿಸಲಾದ ಹನಿ ನೀರಾವರಿ ಘಟಕಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ಕೊಪ್ಪಳ ಜಿಲ್ಲೆಗೆ ರೇಷ್ಮೆ ಇಲಾಖೆಯಿಂದ ಒಟ್ಟು 114 ಹನಿ ನೀರಾವರಿ ಘಟಕಗಳನ್ನು ಒದಗಿಸಲಾಗಿದೆ. ತಾಲ್ಲೂಕುವಾರು ವಿವರ ಕೆಳಕಂಡಂತ್ತಿದೆ.
<table>
<tr><th rowspan="2">ವರ್ಷ</th><th colspan="7">ತಾಲೂಕುಗಳು</th><th rowspan="2">ಒಟ್ಟು</th></tr>
<tr><th>ಕುಷ್ಟಗಿ</th><th>ಯಲಬುರ್ಗಾ</th><th>ಕುಕನೂರ</th><th>ಕೊಪ್ಪಳ</th><th>ಗಂಗಾವತಿ</th><th>ಕನಕಗಿರಿ</th><th>ಕಾರಟಗಿ</th></tr>
<tr><td>2017-18</td><td>18 ಘಟಕ
25.39 ಹೆ</td><td>18 ಘಟಕ
15.40 ಹೆ</td><td>03 ಘಟಕ
1.50 ಹೆ</td><td>04 ಘಟಕ
2.70 ಹೆ</td><td>0</td><td>10 ಘಟಕ
6.83 ಹೆ</td><td>0</td><td>53 ಘಟಕ
52.72 ಹೆ</td></tr>
<tr><td>2018-19</td><td>06 ಘಟಕ
4.96 ಹೆ</td><td>06 ಘಟಕ
5.20 ಹೆ</td><td>01 ಘಟಕ
0.80 ಹೆ</td><td>07 ಘಟಕ
6.15 ಹೆ</td><td>0</td><td>03 ಘಟಕ
1.60 ಹೆ</td><td>01 ಘಟಕ
0.80 ಹೆ</td><td>24 ಘಟಕ
19.51 ಹೆ</td></tr>
<tr><td>2019-20</td><td>17 ಘಟಕ
13.69 ಹೆ</td><td>08 ಘಟಕ
6.00 ಹೆ</td><td>0</td><td>10 ಘಟಕ
8.52 ಹೆ</td><td>0</td><td>02 ಘಟಕ
1.60 ಹೆ</td><td>0</td><td>37 ಘಟಕ
29.81 ಹೆ</td></tr>
</table></td></tr>
<tr><td>ಆ)</td><td>ಈ ಯೋಜನೆಯಡಿ ಫಲಾನುಭವಿಗಳ ಆಯ್ಕೆಗೆ ಅನುಸರಿಸುವ ಮಾನದಂಡಗಳೇನು:</td><td>1. ಫಲಾನುಭವಿಗಳು ರೇಷ್ಮೆ ಬೆಳೆಗಾರರಿದ್ದು ಜಮೀನು ಅವರ ಹೆಸರಿನಲ್ಲಿರಬೇಕು.
2. ಫಲಾನುಭವಿಗಳು ನೀರಾವರಿ ಮೂಲವನ್ನು ಹೊಂದಿರಬೇಕು
3. ಹನಿ ನೀರಾವರಿ ಘಟಕಗಳು ಕಾರ್ಯನಿರ್ವಹಿಸಲು ಅವಶ್ಯವಿರುವ ವಿದ್ಯುಚ್ಛಕ್ತಿ ಅಥವಾ ಇತರೆ ಶಕ್ತಿ ಮೂಲಗಳನ್ನು ಹೊಂದಿರಬೇಕು.
4. ಫಲಾನುಭವಿಗಳು ರೇಷ್ಮೆ ಕೃಷಿಯಲ್ಲಿ ಆಸಕ್ತಿ ಹೊಂದಿರಬೇಕು ಹಾಗೂ ಹನಿ ನೀರಾವರಿ ಅಳವಡಿಸಿದ ನಂತರ ರೇಷ್ಮೆ ಕೃಷಿಯನ್ನು ಕನಿಷ್ಟ 5 ವರ್ಷಗಳು ಮುಂದುವರೆಸಬೇಕು.
5. ಇಲಾಖೆಗೆ ನಿಗಧಿ ಪಡಿಸಿದ ಅರ್ಜಿಯನ್ನು ಅಗತ್ಯ ದಾಖಲಾತಿಯೊಂದಿಗೆ ಸಲ್ಲಿಸಬೇಕು.</td></tr>
<tr><td>ಇ)</td><td>ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಾಗಿ ರೈತರಿಂದ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು: ಹಾಗೂ ಅವುಗಳಲ್ಲಿ ಆಯ್ಕೆಯಾಗದೇ ಬಾಕಿ ಉಳಿದ ಅರ್ಜಿಗಳ ಸಂಖ್ಯೆ ಎಷ್ಟು: (ತಾಲ್ಲೂಕುವಾರು ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಾಗಿ ರೈತರಿಂದ 117 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಹಾಗೂ ಅವುಗಳಲ್ಲಿ ಆಯ್ಕೆಯಾಗದೇ ಬಾಕಿ ಉಳಿದ ಅರ್ಜಿಗಳ ಸಂಖ್ಯೆ:01
<table>
<tr><th rowspan="2">ವರ್ಷ</th><th colspan="7">ತಾಲೂಕುಗಳು</th><th rowspan="2">ಒಟ್ಟು</th></tr>
<tr><th>ಕುಷ್ಟಗಿ</th><th>ಯಲಬುರ್ಗಾ</th><th>ಕುಕನೂರ</th><th>ಕೊಪ್ಪಳ</th><th>ಗಂಗಾವತಿ</th><th>ಕನಕಗಿರಿ</th><th>ಕಾರಟಗಿ</th></tr>
<tr><td>2017-18</td><td>18 ಸ್ವೀಕೃತ
ಬಾಕಿ ಇಲ್ಲ</td><td>18 ಸ್ವೀಕೃತ
ಬಾಕಿ ಇಲ್ಲ</td><td>03 ಸ್ವೀಕೃತ
ಬಾಕಿ ಇಲ್ಲ</td><td>04 ಸ್ವೀಕೃತ
ಬಾಕಿ ಇಲ್ಲ</td><td>0</td><td>10 ಸ್ವೀಕೃತ
ಬಾಕಿ ಇಲ್ಲ</td><td>0</td><td>53 ಸ್ವೀಕೃತ
ಬಾಕಿ ಇಲ್ಲ</td></tr>
<tr><td>2018-19</td><td>07 ಸ್ವೀಕೃತ
01 ಬಾಕಿ</td><td>06 ಸ್ವೀಕೃತ
ಬಾಕಿ ಇಲ್ಲ</td><td>01 ಸ್ವೀಕೃತ
ಬಾಕಿ ಇಲ್ಲ</td><td>07 ಸ್ವೀಕೃತ
ಬಾಕಿ ಇಲ್ಲ</td><td>0</td><td>03 ಸ್ವೀಕೃತ
ಬಾಕಿ ಇಲ್ಲ</td><td>01 ಸ್ವೀಕೃತ
ಬಾಕಿ ಇಲ್ಲ</td><td>25 ಸ್ವೀಕೃತ
01 ಬಾಕಿ</td></tr>
<tr><td>2019-20</td><td>17 ಸ್ವೀಕೃತ
ಬಾಕಿ ಇಲ್ಲ</td><td>08 ಸ್ವೀಕೃತ
ಬಾಕಿ ಇಲ್ಲ</td><td>0</td><td>10 ಸ್ವೀಕೃತ
ಬಾಕಿ ಇಲ್ಲ</td><td>0</td><td>03 ಸ್ವೀಕೃತ
ಬಾಕಿ ಇಲ್ಲ</td><td>01 ಸ್ವೀಕೃತ
ಬಾಕಿ ಇಲ್ಲ</td><td>39 ಸ್ವೀಕೃತ
ಬಾಕಿ ಇಲ್ಲ</td></tr>
</table></td></tr>
</table>

ಈ)	ಮಳೆಯಾಶ್ರಿತ ಬೇಸಾಯವನ್ನೇ ನಂಬಿರುವ ಈ ಭಾಗದ ರೈತರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು ನೀಡಲಾಗುತ್ತಿರುವ ಗುರಿಯನ್ನು ಪರಿಷ್ಕರಿಸಿ ಗುರಿ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ಮಳೆಯಾಶ್ರಿತ ಬೇಸಾಯವನ್ನೇ ನಂಬಿರುವ ಈ ಭಾಗದ ರೈತರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು ನೀಡಲಾಗುತ್ತಿರುವ ಗುರಿಯನ್ನು ಪರಿಷ್ಕರಿಸಿ ಗುರಿ ಹೆಚ್ಚಿಸುವ ಪ್ರಸ್ತಾವನೆ ಇರುವುದಿಲ್ಲ.

ಸಂಖ್ಯೆ: ರೇಷ್ಮೆ 84 ರೇಕೃವಿ 2021

(ಆರ್.ಶಂಕರ್)
ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3620
ಸದಸ್ಯರ ಹೆಸರು	:	ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸುವ ದಿನಾಂಕ	:	24.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಅವು ಯಾವುವು; (ವಿವರ ನೀಡುವುದು)	ಬೆಳಗಾವಿ ಜಿಲ್ಲೆಯಲ್ಲಿ **5294** ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಅಂಗನವಾಡಿ ಕೇಂದ್ರಗಳ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಆ)	ಬೆಳಗಾವಿ ದಕ್ಷಿಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿಗಳನ್ನು ಶಿಶುಪಾಲನಾ ಕೇಂದ್ರಗಳನ್ನಾಗಿ ಉನ್ನತೀಕರಿಸಲು ಉದ್ದೇಶ ಸರ್ಕಾರಕ್ಕಿದೆಯೇ; ಇದ್ದಲ್ಲಿ, ಯಾವ ಯಾವ ಕೇಂದ್ರಗಳನ್ನು ಆಯ್ಕೆ ಮಾಡಲಾಗಿದೆ;	2021-22 ನೇ ಸಾಲಿನ ಆಯವ್ಯಯದಲ್ಲಿ, ಬೆಂಗಳೂರು ನಗರ ಹಾಗೂ ಇತರೆ ಮಹಾನಗರಗಳಲ್ಲಿ ಅಂಗನವಾಡಿಗಳನ್ನು ಹಂತಹಂತವಾಗಿ ಶಿಶುಪಾಲನಾ ಕೇಂದ್ರಗಳನ್ನಾಗಿ ಉನ್ನತೀಕರಿಸುವ ಕುರಿತು ಘೋಷಿಸಲಾಗಿರುತ್ತದೆ.ಆದ್ದರಿಂದ ಬೆಳಗಾವಿ ದಕ್ಷಿಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿಗಳನ್ನು ಶಿಶುಪಾಲನಾ ಕೇಂದ್ರಗಳನ್ನಾಗಿ ಉನ್ನತೀಕರಿಸುವ ವಿಷಯ ಪರಿಶೀಲನಾ ಹಂತದಲ್ಲಿರುತ್ತದೆ.
ಇ)	ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳೆಯರನ್ನು ಪ್ರೋತ್ಸಾಹಿಸಲು ಯೋಜನೆಗಳನ್ನು ರೂಪಿಸಲಾಗಿದೆಯೇ; ಹಾಗಿದ್ದಲ್ಲಿ ಅವುಗಳ ವಿವರ ನೀಡುವುದು; ಹಾಗೂ ಅವುಗಳನ್ನು ಪಡೆಯಲು ಬೇಕಾದ ಅರ್ಹತೆಗಳೇನು; (ಮಾಹಿತಿ ನೀಡುವುದು)	ಮಹಿಳೆಯರನ್ನು ಸ್ತ್ರೀಶಕ್ತಿ ಗುಂಪುಗಳಲ್ಲಿ ಸಂಘಟಿಸುವುದರ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಸಶಕ್ತತೆಯನ್ನು ತರುವ ಉದೇಶದಿಂದ **"ಸ್ತ್ರೀಶಕ್ತಿ ಯೋಜನೆ"** ಯನ್ನು ರಾಜ್ಯದಲ್ಲಿ ಅಕ್ಟೋಬರ್ 2000 ರಿಂದ ಜಾರಿಗೊಳಿಸಲಾಗಿದೆ. ಸ್ತ್ರೀಶಕ್ತಿ ಯೋಜನೆಯಡಿ ಒದಗಿಸಲಾಗುವ ಸೌಲಭ್ಯ ಗಳನ್ನು ಪಡೆಯಲು ಇರಬೇಕಾದ ಅರ್ಹತೆಗಳು/ಮಾನದಂಡಗಳ ವಿವರವನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
ಈ	ಬೆಳಗಾವಿ ಜಿಲ್ಲೆಯಲ್ಲಿರುವ ಸ್ವ-ಸಹಾಯ ಸಂಘಗಳು ಎಷ್ಟು; ಅವು ಯಾವುವು; (ಮತ ಕ್ಷೇತ್ರವಾರು/ಗ್ರಾಮವಾರು ಹೆಸರು ವಿಳಾಸಗಳನ್ನೊಳಗೊಂಡಂತೆ ಮಾಹಿತಿ ನೀಡುವುದು)	ಬೆಳಗಾವಿ ಜಿಲ್ಲೆಯಲ್ಲಿ 16023 ಸ್ತ್ರೀಶಕ್ತಿ ಸ್ವ-ಸಹಾಯ ಸಂಘಗಳು ಇರುತ್ತವೆ ಕ್ಷೇತ್ರವಾರು, ಗ್ರಾಮವಾರು ಸ್ವ-ಸಹಾಯ ಸಂಘಗಳ ವಿವರವನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ

ಉ	ಮಹಿಳೆಯು ಮನೆಯಲ್ಲಿ ಸಿದ್ದಪಡಿಸುವ ಹಪ್ಪಳ/ಉಪ್ಪಿನಕಾಯಿ/ಬಿಸ್ಕತ್ ಗಳು ಮುಂತಾದ ವಿವಿಧ ಬಗೆಯ ಖಾದ್ಯ ಪದಾರ್ಥಗಳ ಮಾರಾಟಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳು ಹಾಗೂ ರೂಪಿಸಿರುವ ಯೋಜನೆಗಳು ಯಾವುವು?(ವಿವರ ನೀಡುವುದು)	ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಪ್ರತಿ ವರ್ಷ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ರಾಜ್ಯ ಮಟ್ಟದಲ್ಲಿ ಏರ್ಪಡಿಸುವ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಉತ್ಪನ್ನಗಳನ್ನು ಸಿದ್ದಪಡಿಸಿರುವಂತಹ ಮಹಿಳೆಯರಿಗೆ ಉತ್ಪನ್ನಗಳ ಮಾರಾಟಕ್ಕಾಗಿ ಮಳಿಗೆಗಳನ್ನು ಒದಗಿಸಿಕೊಡಲಾಗುತ್ತಿದೆ. ಇದಲ್ಲದೆ, ಸ್ತ್ರೀಶಕ್ತಿ ಸ್ವ-ಸಹಾಯ ಗುಂಪುಗಳು ತಯಾರಿಸುವ ಉತ್ಪನ್ನಗಳನ್ನು ಸರ್ಕಾರಿ ಕಛೇರಿಗಳಲ್ಲಿ ಅವುಗಳ ಅವಶ್ಯಕತೆಗನುಸಾರ ಉತ್ತಮ ಗುಣಮಟ್ಟದ ಹಾಗೂ ಸಂಮಜಸ ದರಗಳನ್ನು ಸಂಬಂದಪಟ್ಟ ಸಂಗ್ರಹಣ ಸಂಸ್ಥೆಗಳು/ ಇಲಾಖೆಗಳು/ಕಚೇರಿಗಳು ಧೃಡಪಡಿಸಿಕೊಳ್ಳುವ ಷರತ್ತಿಗೊಳ್ಪಪಟ್ಟು ಖರೀದಿಸುವಂತೆ ಸರ್ಕಾರದ ಆದೇಶ ಸಂಖ್ಯೆ: ಮಮಇ/102/ಮಮಅ/2020, ದಿನಾಂಕ:24.11.2020ರಲ್ಲಿ ಆದೇಶಿಸಲಾಗಿದೆ. ಪ್ರಸ್ತುತ, 2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳು ಹಾಗೂ ಮಹಿಳಾ ಉದ್ಯಮಿಗಳು ತಯಾರಿಸಿದ ಉತ್ಪನ್ನಗಳು ಹಾಗೂ ಮಹಿಳಾ ಸ್ತ್ರೀಶಕ್ತಿ ಗುಂಪುಗಳ ಉತ್ಪನ್ನಗಳಿಗೆ ವ್ಯಾಪಕ ಪ್ರಚಾರ ನೀಡಿ ಜನಪ್ರಿಯಗೊಳಿಸಲು ಹಾಗೂ ಉತ್ತಮ ಬೆಲೆ ಒದಗಿಸಲು ಇ-ಮಾರುಕಟ್ಟೆ ಸೌಲಭ್ಯವನ್ನು ಜಾರಿಗೊಳಿಸಲಾಗುವುದು ಎಂದು ಘೋಷಣೆ ಮಾಡಲಾಗಿದೆ.

ಸಂಖ್ಯೆ: ಮಮಇ 128 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2077
ಸದಸ್ಯರ ಹೆಸರು	:	ಡಾ॥ ಅಂಜಲಿ ಹೇಮಂತ್ ನಿಂಬಾಳ್ಕರ್ (ಖಾನಾಪುರ)
ಉತ್ತರಿಸಬೇಕಾದ ದಿನಾಂಕ	:	24-03-2021.
ಉತ್ತರಿಸುವ ಸಚಿವರು	:	ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರಗಳು
ಅ.	ರಾಜ್ಯಾದ್ಯಂತ ವಕ್ಫ್ ಆಸ್ತಿಗಳನ್ನು ಸಂಬಂಧಿಸಿದ ವಕ್ಫ್ ಸಂಸ್ಥೆಗಳಿಗೆ ಹಸ್ತಾಂತರಿಸುವ ಪ್ರಕ್ರಿಯೆಯಲ್ಲಿ ನಿರೀಕ್ಷಿತ ಪ್ರಗತಿ ಕಾಣದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ.	ಖಾನಾಪೂರ ವಿಧಾನಸಭಾ ಕ್ಷೇತ್ರದಲ್ಲಿ ಈವರೆಗೆ ಗುರುತಿಸಲಾದ ವಕ್ಫ್ ಆಸ್ತಿ ದುರ್ಬಳಕೆ ಪ್ರಕರಣಗಳೆಷ್ಟು;	ಖಾನಾಪೂರ ವಿಧಾನಸಭಾ ಕ್ಷೇತ್ರದಲ್ಲಿರುವ ವಕ್ಫ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಕ್ಫ್ ಕಾಯ್ದೆ 1995 (ತಿದ್ದುಪಡಿ 2013)ರ ಕಲಂ 52 ರಡಿಯಲ್ಲಿ 04 ಪ್ರಕರಣಗಳು ದಾಖಲಾಗಿ ವಿಚಾರಣಾಧಿಕಾರಿಗಳು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಬೆಂಗಳೂರು ಇವರಲ್ಲಿ ಪ್ರಕರಣ ಇತ್ಯರ್ಥಗೊಂಡಿರುತ್ತದೆ.
ಇ.	ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ವಕ್ಫ್ ಆಸ್ತಿಗಳನ್ನು ಆಯಾ ವಕ್ಫ್ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆ;	ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯಲ್ಲಿ ಇತ್ಯರ್ಥವಾಗಿರುವ ಪ್ರಕರಣಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಈ.	ಬಾಕಿ ಉಳಿದ ಪ್ರಕರಣಗಳಲ್ಲಿ ವಕ್ಫ್ ಆಸ್ತಿಗಳನ್ನು ಶೀಘ್ರವಾಗಿ ಆಯಾ ವಕ್ಫ್ ಸಂಸ್ಥೆಗಳಿಗೆ ಹಸ್ತಾಂತರಿಸಲು ಸರ್ಕಾರವು ಯಾವ ಕ್ರಮ ಜರುಗಿಸಲಿದೆ?	ವಕ್ಫ್ ಆಸ್ತಿಗಳನ್ನು ಆಯಾ ವಕ್ಫ್ ಸಂಸ್ಥೆಗಳಿಗೆ ಹಸ್ತಾಂತರಿಸಲು ಈ ಕೆಳಕಂಡ ಕ್ರಮಗಳನ್ನು ಜರುಗಿಸಲಾಗುತ್ತಿದೆ. 1) ರಾಜ್ಯಮಟ್ಟದ ವಕ್ಫ್ ಆಸ್ತಿಗಳ ಕಾರ್ಯಪಡೆ ಸಭೆಯಲ್ಲಿ ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತಿದೆ. 2) ವಿಧಾನ ಮಂಡಲದ ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯಲ್ಲಿಯೂ ಸಹ ಪರಿಶೀಲಿಸಿ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತಿದೆ. 3) ಮಂಡಳಿ ಮತ್ತು ಸರ್ಕಾರದ ಹಿರಿಯ ಅಧಿಕಾರಿಗಳಿಂದ ಪತ್ರ ವ್ಯವಹಾರ ಮಾಡಲಾಗುತ್ತಿದೆ.

ಸಂಖ್ಯೆ: MWD 156 LMQ 2021

(ಆನಂದ್ ಸಿಂಗ್)
ಮೂಲಸೌಲಭ್ಯ ಅಭಿವೃದ್ಧಿ ಹಾಗೂ
ಹಜ್ ಮತ್ತು ವಕ್ಫ್ ಸಚಿವರು

ಪ್ರಶ್ನೆ ಸಂಖ್ಯೆ : 2077

<u>ಅನುಬಂಧ</u>

ಕ್ರ. ಸಂ	ವಕ್ಫ್ ಸಂಸ್ಥೆಯ ಹೆಸರು	ದುರ್ಬಳಕೆಯಾದ ವಕ್ಫ್ ಆಸ್ತಿಯ ವಿವರ		ಪ್ರಕರಣ ಸಂಖ್ಯೆ	ನ್ಯಾಯಾಲಯದ ಹೆಸರು	ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ ವರ್ಷ	ಮಂಡಳಿಯಲ್ಲಿ ಪ್ರಕರಣದ ಪ್ರಸ್ತುತ ಹಂತ	ಷರಾ
		ಆಸ್ತಿ ಸಂಖ್ಯೆ	ವಿಸ್ತೀರ್ಣ					
1	ನ್ಯೂ ರಿಯಾಜ ಉಲ್ ಉಲುಮ ಎಜುಕೇಶನ್ ಸೋಸೈಟಿ (ಸುನ್ನಿ) ಖಾನಾಪೂರ	ಸರ್ವೆ ನಂ 247 & 248	9ಎ-10ಗು ಮತ್ತು 11ಎ-18ಗು	ENQ/146/BGM/2010	ವಿಚಾರಣಾಧಿಕಾರಿಗಳು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕರ್ನಾಟಕ ರಾಜ್ಯ ವಕ್ಫ್ ಮಂಡಳ, ಬೆಂಗಳೂರು	2010	ಇತ್ಯರ್ಥಗೊಂಡಿರುತ್ತದೆ	ಸದರಿ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ವಕ್ಫ್ ಟ್ರಿಬುನಲ್ ಬೆಳಗಾವಿ ವಿಭಾಗ ಬೆಳಗಾವಿಯ ಪ್ರಕರಣ ಸಂಖ್ಯೆ: KWT/BGM/SR/APPEAL-18/2014, ಪ್ರಕರಣ ದಾಖಲಾಗಿ ವಿಚಾರಣಾ ಹಂತದಲ್ಲಿರುತ್ತದೆ.
2	ಸದರಿ	ಸರ್ವೆ ನಂ 245	08ಎ—18ಗು	ENQ/397/BGM/2012	ವಿಚಾರಣಾಧಿಕಾರಿಗಳು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕರ್ನಾಟಕ ರಾಜ್ಯ ವಕ್ಫ್ ಮಂಡಳ, ಬೆಂಗಳೂರು	2012	ಇತ್ಯರ್ಥಗೊಂಡಿರುತ್ತದೆ	ಸದರಿ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ವಕ್ಫ್ ಟ್ರಿಬುನಲ್ ಬೆಳಗಾವಿ ವಿಭಾಗ ಬೆಳಗಾವಿಯ ಪ್ರಕರಣ ಸಂಖ್ಯೆ: KWT/BGM/SR/APPEAL-19/2015, ಪ್ರಕರಣ ದಾಖಲಾಗಿ ವಿಚಾರಣಾ ಹಂತದಲ್ಲಿರುತ್ತದೆ.
3	ಸದರಿ	ಸರ್ವೆ ನಂ 152	14ಎ-30ಗು	ENQ/147/BGM/2010	ವಿಚಾರಣಾಧಿಕಾರಿಗಳು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕರ್ನಾಟಕ ರಾಜ್ಯ ವಕ್ಫ್ ಮಂಡಳ, ಬೆಂಗಳೂರು	2010	ಇತ್ಯರ್ಥಗೊಂಡಿರುತ್ತದೆ	ಸದರಿ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ವಕ್ಫ್ ಟ್ರಿಬುನಲ್ ಬೆಳಗಾವಿ ವಿಭಾಗ ಬೆಳಗಾವಿಯ ಪ್ರಕರಣ ಸಂಖ್ಯೆ: KWT/BGM/SR/APPEAL-07/2017, ಪ್ರಕರಣ ದಾಖಲಾಗಿ ವಿಚಾರಣಾ ಹಂತದಲ್ಲಿರುತ್ತದೆ.

4	ಸದರಿ	ಸರ್ವೆ ನಂ 167	17ಎ-39ಗು	ENQ/24/BGM/2014	ವಿಚಾರಣಾಧಿಕಾರಿಗಳ ು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕರ್ನಾಟಕ ರಾಜ್ಯ ವಕ್ಫ್ ಮಂಡಳ, ಬೆಂಗಳೂರು	2014	ಇತ್ಯರ್ಥಗೊಂಡಿರುತ್ತದೆ	ಸದರಿ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ವಕ್ಫ್ ಟ್ರಿಬುನಲ್ ಬೆಳಗಾವಿ ವಿಭಾಗ ಬೆಳಗಾವಿಯ ಪ್ರಕರಣ ಸಂಖ್ಯೆ: KWT/BGM/SR/APPEAL-19/2017, ಪ್ರಕರಣ ದಾಖಲಾಗಿ ವಿಚಾರಣಾ ಹಂತದಲ್ಲಿರುತ್ತದೆ. ಮತ್ತು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠ, ಧಾರವಾಡದಲ್ಲಿ WP NO-103386/2015 & WP NO-109748/2017

with CD

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 2937

ಸದಸ್ಯರ ಹೆಸರು : ಶ್ರೀ. ನಾಗೇಂದ್ರ ಬಿ. (ಬಳ್ಳಾರಿ)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 24.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ತೋಟಗಾರಿಕೆ ಇಲಾಖೆಯಲ್ಲಿರುವ ವಿವಿಧ ಯೋಜನೆಗಳಾವುವು: (ವಿವರ ನೀಡುವುದು)	ತೋಟಗಾರಿಕೆ ಇಲಾಖೆಯಲ್ಲಿರುವ ವಿವಿಧ ಯೋಜನೆಗಳ ವಿವರವನ್ನು ಅನುಬಂಧ -1 ರಲ್ಲಿ ಒದಗಿಸಲಾಗಿದೆ.
ಆ)	ಕಳೆದ ಮೂರು ವರ್ಷಗಳಿಂದ ಇಲಾಖೆಯ ವಿವಿಧ ಯೋಜನೆಗಳಿಗೆ ಮಂಜೂರು ಮಾಡಿದ ಮತ್ತು ಬಿಡುಗಡೆ ಮಾಡಿದ ಅನುದಾನ ಎಷ್ಟು? (ವರ್ಷವಾರು, ಯೋಜನಾವಾರು, ಮತ ಕ್ಷೇತ್ರವಾರು ಅನುದಾನದೊಂದಿಗೆ ವಿವರ ನೀಡುವುದು).	ಕಳೆದ ಮೂರು ವರ್ಷಗಳಲ್ಲಿ ಅಂದರೆ 2017-18, 2018-19 ಹಾಗೂ 2019-20ನೇ ಸಾಲಿನಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ಮಂಜೂರಾದ ಮತ್ತು ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ;

(ರೂ.ಕೋಟಿಗಳಲ್ಲಿ)

ಕ್ರಸಂ	ವರ್ಷ	ಮಂಜೂರಾದ ಅನುದಾನ	ಬಿಡುಗಡೆ
1	2017-18	1057.01	938.61
2	2018-19	1229.35	1133.48
3	2019-20	924.30	870.39
ಒಟ್ಟು		**3210.66**	**2942.38**

ವರ್ಷವಾರು, ಯೋಜನೆವಾರು ಹಾಗೂ ಮತಕ್ಷೇತ್ರವಾರು ವಿವರವನ್ನು ಅನುಬಂಧ-2 ರಲ್ಲಿ ಸಿ.ಡಿ ಯಲ್ಲಿ ಒದಗಿಸಿದೆ.

ಸಂಖ್ಯೆ: HORTI 206 HGM 2021

(ಆರ್. ಶಂಕರ್)

ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಅನುಬಂಧ-1

LAQ-2937

2020-21ನೇ ಸಾಲಿನ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳ ವಿವರ

ಕ್ರ.ಸಂ.	ಯೋಜನೆಗಳು
I	**ಕೇಂದ್ರ ನೆರವಿನ ಯೋಜನೆಗಳು**
1	ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಬಿಯಾನ ಯೋಜನೆ
2	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ)
3	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ
4	ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ
5	ಪರಂಪರಾಗತ ಕೃಷಿ ವಿಕಾಸ ಯೋಜನೆ
6	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ
II	**ರಾಜ್ಯವಲಯ ಯೋಜನೆಗಳು**
1	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ,
2	ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ,
3	ಸಮಗ್ರ ತೋಟಗಾರಿಕಾ ಅಭಿವೃದ್ಧಿ
4	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ
5	ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ
6	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ
7	ತೋಟಗಾರಿಕೆ ಕಟ್ಟಡಗಳು
10	ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು
11	ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ
12	ತೋಟಗಾರಿಕೆ ಮೂಲ ಸೌಲಭ್ಯ ಅಭಿವೃದ್ಧಿ
13	ಬಾಗಲಕೋಟೆಯಲ್ಲಿ ತೋಟಗಾರಿಕ ವಿಶ್ವ ವಿದ್ಯಾಲಯದ ಬಂಡವಾಳ
III	**ಜಿಲ್ಲಾವಲಯ ಯೋಜನೆಗಳು**
1	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ
2	ತೋಟಗಾರಿಕೆ ಕಟ್ಟಡಗಳು
3	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ
4	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ
5	ಪ್ರಚಾರ ಮತ್ತು ಸಾಹಿತ್ಯ
6	ಶೀಥಲ ಗೃಹಗಳಿಗೆ ಸಹಾಯಧನ ಯೋಜನೆ
7	ರೈತರಿಗೆ ತರಬೇತಿ
8	ಜೇನು ಸಾಕಾಣಿಕೆ

ತೋಟಗಾರಿಕೆ ಜಂಟಿ ನಿರ್ದೇಶಕರು
(ಯೋಜನೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	– 2915
ಉತ್ತರಿಸಬೇಕಾದ ದಿನಾಂಕ	– 24-03-2021
ಸದಸ್ಯರ ಹೆಸರು	– ಡಾ॥ ಅವಿನಾಶ್ ಉಮೇಶ್ ಜಾಧವ್ (ಚಿಂಚೋಳಿ)
ಉತ್ತರಿಸುವ ಸಚಿವರು	– ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯ ಚಿಂಚೋಳಿ ವಿಧಾನಸಭಾ ವ್ಯಾಪ್ತಿಯಲ್ಲಿರುವ ಅಲ್ಪಸಂಖ್ಯಾತರ ಜನವಸತಿ ಕಾಲೋನಿಗಳ ಅಭಿವೃದ್ಧಿಗೆ ಮಂಜೂರು ಮಾಡಲಾದ ಅನುದಾನ ಎಷ್ಟು;</td><td>ಕಳೆದ ಮೂರು ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯ ಚಿಂಚೋಳಿ ವಿಧಾನಸಭಾ ವ್ಯಾಪ್ತಿಯಲ್ಲಿರುವ ಅಲ್ಪಸಂಖ್ಯಾತರ ಜನವಸತಿ ಕಾಲೋನಿಗಳ ಅಭಿವೃದ್ಧಿಗೆ ಮಂಜೂರು ಮಾಡಲಾದ ಅನುದಾನದ ವಿವರಗಳು ಈ ಕೆಳಕಂಡಂತಿರುತ್ತದೆ.
(ರೂ. ಲಕ್ಷಗಳಲ್ಲಿ)
<table>
<tr><th>ಕ್ರ. ಸಂ.</th><th>ವರ್ಷ</th><th>ಮಂಜೂರಾದ ಅನುದಾನ</th></tr>
<tr><td>1</td><td>2017-18</td><td>50.00</td></tr>
<tr><td>2</td><td>2018-19</td><td>125.00</td></tr>
<tr><td>3</td><td>2019-20</td><td>–</td></tr>
<tr><td></td><td>ಒಟ್ಟು</td><td>175.00</td></tr>
</table></td></tr>
<tr><td>ಆ)</td><td>ಈ ಪೈಕಿ ವೆಚ್ಚ ಮಾಡಿರುವ ಅನುದಾನ ಎಷ್ಟು; ಸದರಿ ಮಂಜೂರಾದ ಅನುದಾನಕ್ಕೆ ಯಾವಾಗ ಮತ್ತು ಯಾವ ಯಾವ ಆದೇಶಕ್ಕನುಗುಣವಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;(ವಿವರ ನೀಡುವುದು)</td><td>ಮಾನ್ಯ ಜಿಲ್ಲಾಧಿಕಾರಿಗಳು, ಕಲಬುರಗಿ ಇವರ ಆದೇಶಕ್ಕನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳಲು ರೂ.175.00 ಲಕ್ಷಗಳ ಅನುದಾನವನ್ನು ಏಜೆನ್ಸಿ/ಸಂಸ್ಥೆ ರವರಿಗೆ ಪಾವತಿಸಲಾಗಿದೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ ಇವರು ಹಣ ಬಿಡುಗಡೆ ಮಾಡಿರುವ ಆದೇಶ ಸಂಖ್ಯೆಯ ವಿವರಗಳು ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ ಸಂ.</th><th>ಆದೇಶ ಸಂಖ್ಯೆ</th><th>ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>ಜಿಅಸಂಕಇಕ/ಅಸಂಕಮೂಸೌ/ಸಿಆರ್-450/2016-17 ದಿ:18.06.2018. (1ನೇ ಕಂತು)</td><td>25.00</td></tr>
<tr><td>2</td><td>ಜಿಅಸಂಕಇಕ/ಅಸಂಕಾಮೂಸೌ/ಸಿಆರ್-450/2016-17 ದಿ:30.01.2019 (2ನೇ ಕಂತು)</td><td>25.00</td></tr>
<tr><td>3</td><td>ಜಿಅಸಂಕಇಕ/ಸಿ.ಎಂ.ಎಂ.ಡಿ.ಪಿ/ಸಿಆರ್-/2018-19 ದಿ:12.10.2018. (1ನೇ ಕಂತು)</td><td>50.00</td></tr>
<tr><td>4</td><td>ಜಿಅಸಂಕಇಕ/ಅಸಂಕಮೂಸೌ/ಸಿಆರ್-018-19 ದಿ:30.01.2019. (2ನೇ ಕಂತು)</td><td>50.00</td></tr>
<tr><td>5</td><td>ಜಿಅಸಂಕಇಕ/ಕಾಅ/ಸಿಆರ್-37/2018-19 ದಿ:28.02.20219</td><td>25.00</td></tr>
<tr><td></td><td>ಒಟ್ಟು</td><td>175.00</td></tr>
</table></td></tr>
</table>

ಇ)	ಬಾಕಿ ಕಾಮಗಾರಿಗಳಿಗೆ ಮಂಜೂರು ಮಾಡಬೇಕಾದ ಹಣ ಎಷ್ಟು; ಇಲ್ಲಿಯವರೆಗೆ ಬಿಡುಗಡೆಯಾದ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ? (ವಾರ್ಷಿಕವಾರು ವಿವರವನ್ನು ಆದೇಶದ ಪ್ರತಿಯೊಂದಿಗೆ ಒದಗಿಸುವುದು)	ಬಾಕಿ ಕಾಮಗಾರಿಗಳಿಗೆ ಮಂಜೂರು ಮಾಡಬೇಕಾದ ಅನುದಾನ ಯಾವುದು ಇರುವುದಿಲ್ಲ ಹಾಗೂ ಸದರಿ ಬಿಡುಗಡೆಯಾದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. 1. ರಸ್ತೆ ಮತ್ತು ಚರಂಡಿ/ಒಳ ಚರಂಡಿ ನಿರ್ವಹಣೆ. 2. ಶುದ್ದ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದು. 3. ಅಗತ್ಯವಿದ್ದಲ್ಲಿ ಕೊಳವೆ ಬಾವಿ ಕೊರೆಯುವುದು. 4. ಅಗತ್ಯವಿದ್ದಲ್ಲಿ ಸಾಮೂಹಿಕ ಶೌಚಾಲಯಗಳ ನಿರ್ಮಾಣ (ನಿರ್ಮಾಣದ ನಂತರ ನಿರ್ವಹಣೆ ಸ್ಥಳೀಯ ಸಂಸ್ಥೆಗಳ ಸುರ್ಪದಿಗೆ ನೀಡುವುದು.) (ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ)

ಸಂಖ್ಯೆ:MWD 147 LMQ 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕಾಮಗಾರಿಗಳ ವಿವರಗಳು

ಶ್ರೀ. ಅವಿನಾಶ್ ಉಮೇಶ್ ಜಾಧವ್ (ಚಿಂಚೋಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2915ಕ್ಕೆ ಉತ್ತರ

ರೂ. ಲಕ್ಷಗಳಲ್ಲಿ

ಕ್ರ.ಸಂ.	ಕಾಲೋನಿಗಳ ವಿವರ/ಅನುಮೋದನೆಗೊಂಡ ಕಾಮಗಾರಿಗಳು	ಗ್ರಾಮ/ವಾರ್ಡನ ಹೆಸರು	ಕಾಮಗಾರಿಗಳ ವಿವರ	ನಿಗಧಿಯಾದ ಅನುದಾನ	ಬಿಡುಗಡೆಯಾದ ಅನುದಾನ	ಕಾಮಗಾರಿಯ ಏಜೆನ್ಸಿ	ಪ್ರಗತಿ ಹಂತ ಪೂರ್ಣಗೊಂಡಿದೆ ಅಥವಾ ಇಲ್ಲ	ಷರಾ
	ಚಿಂಚೋಳಿ ವಿಧಾನಸಭಾ ಕ್ಷೇತ್ರ							
1	ಶಮಶೋದ್ದಿನ್ ಮನೆಯಿಂದ ಹಜುಮಾ ಮನೆಯವರೆಗೆ	ಚಿಂಚೋಳಿ	ಸಿ.ಸಿ.ರಸ್ತೆ	5.00	5.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
2	ಪೇಶಮಸಾಬ ಮನೆಯಿಂದ ಜಾನಿಮೋದ್ದೀನ್ ಮನೆಯವರೆಗೆ ನಾಗರ ಬಾಬೂಮಿಯಾ ಮನೆ	ಚಿಮ್ಮನಚೋಡ್	ಸಿ.ಸಿ. ವರ್ಕ & ಡ್ರೇನ್	8.00	8.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
3	ಚಾಮದ ಸಾಬ ಸುತಾರ ಮನೆಯಿಂದ ದವಲಸಾಬ ಸುತಾರ ಮನೆ	ಹೇರೂರ ಕೇರ್	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
4	ಚಂಗುಟಾ ಹಳ್ಳಿಯಿಂದ ಸಿ.ಸಿ. ರೋಡ & ಡ್ರೇನ್ ವರ್ಕ	ಚೀಗುಂಟಾ	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
5	ಮನ್ಸೂರ ಅಲಿ ಮನೆಯಿಂದ ಉಸಮಾನಸಾಬ ಮನೆ	ವಜೀರಗಾಂ	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
6	ರಸೂಲ್ ಪಟೇಲ್ ಮನೆಯಿಂದ ಜುಮ್ಮಾ ಮಸ್ಜಿದ್ ಎಂ.ಡಿ. ಹುಸೇನ್ ಭಗವಾನ ಮನೆಯಿಂದ ರೆಹಮತ ಬಿ ಮನೆ	ಮೀರಿಯಾಣ	ಸಿ.ಸಿ. ವರ್ಕ & ಡ್ರೇನ್	6.00	6.00	ಕೆ.ಆರ್.ಐ.ಡಿ.ಎಲ್	ಪ್ರಗತಿಯಲ್ಲಿದೆ	
7	ಫತ್ರುಸಾಬ ಮನೆ ಯಿಂದ ಪಾಶುಮಿಯ್ಯಾ ಮನೆ	ಎಂಪಳ್ಳಿ	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಪ್ರಗತಿಯಲ್ಲಿದೆ	
8	ಮಗದಮಪೂರ ಹಳ್ಳಿಯಿಂದ ಮೈನಾರಿಟಿ ಕಾಲೋನಿ	ಮಗದಂಪೂರ	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಪ್ರಗತಿಯಲ್ಲಿದೆ	
9	ರಟಕಲ್ ಹಳ್ಳಿಯಿಂದ ಮೈನಾರಿಟಿ ಕಾಲೋನಿ	ರಟಕಲ್	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
10	ನಿಮಹೋಸಳ್ಳಿ ಹಳ್ಳಿಯಿಂದ ಮೈನಾರಿಟಿ ಕಾಲೋನಿ	ನೀಮಹೊಸಳ್ಳಿ	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
11	ನಾಗಯದಿಲ್ಲಾ ಹಳ್ಳಿ ಯಿಂದ ಮೈನಾರಿಟಿ ಕಾಲೋನಿ	ನಾಗಯಿಲಾಯಿ	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
12	ರೆವಗ್ಗಿ ಹಳ್ಳಿಯಿಂದ ಮೈನಾರಿಟಿ ಕಾಲೋನಿ ಅಂಕಲಗಿ ಮೈನಾರಿಟಿ ಕಾಲೋನಿ	ರೇವಗ್ಗಿ ಮತ್ತು ಅಂಕಲ್	ಸಿ.ಸಿ. ವರ್ಕ & ಡ್ರೇನ್	8.00	8.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
13	ಕೋಡಿ ಹಳ್ಳಿಯಿಂದ ಮೈನಾರಿಟಿ ಕಾಲೋನಿ	ಕೊಡ್ಲಿ	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
14	ಕಲ್ಲಹಿಪ್ಪರಗಾ ಹಳ್ಳಿಯಿಂದ ಮೈನಾರಿಟಿ ಕಾಲೋನಿ	ಕಲ್‌ಹಿಪ್ಪರಗಾ	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
15	ಟೆಂಗಳಿ ಹಳ್ಳಿಯಿಂದ ಮೈನಾರಿಟಿ ಕಾಲೋನಿ ಗೌಡನಳ್ಳಿ ಮೈನಾರಿಟಿ ಕಾಲೋನಿ	ಟೆಂಗಳಿ ಗೊದಾನ್ ಹಳ್ಳಿ	ಸಿ.ಸಿ. ವರ್ಕ & ಡ್ರೇನ್	8.00	8.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
16	ಐನೊಳ್ಳಿ ಮೈನಾರಿಟಿ ಕಾಲೋನಿ	ಐನೋಳಿ	ಸಿ.ಸಿ. ವರ್ಕ & ಡ್ರೇನ್	10.00	10.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
17	ಚಂದನಕೇರಾ ಮೈನಾರಿಟಿ ಕಾಲೋನಿ	ಚಂದನಕೇರಾ	ಸಿ.ಸಿ. ವರ್ಕ & ಡ್ರೇನ್	5.00	5.00	ಕೆ.ಆರ್.ಐ.ಡಿ.ಎಲ್	ಮುಕ್ತಾಯ	
			ಒಟ್ಟು	100.00	100.00			
1	ಮೈನಾರಿಟಿ ಕಾಲೋನಿ ಮೋಘಾ	ಮೋಘಾ	ಸಿ.ಸಿ. ರಸ್ತೆ & ಡ್ರೇನ್	5.00	5.00	PWPIWTD	ಪ್ರಾಂಭಿಸಿರುವುದಿಲ್ಲಾ	ಆಡಳಿತಾತ್ಮಕ ಅನುಮೋದನೆಗಾಗಿ ಕಡತ ಚಾಲನೆಯಲ್ಲಿದೆ
2	ಮೈನಾರಿಟಿ ಕಾಲೋನಿ ಕೊಂಚಾವರಂ	ಕೊಂನಚಾವರಂ	ಸಿ.ಸಿ. ರಸ್ತೆ & ಡ್ರೇನ್	5.00	5.00	PWPIWTD	ಪ್ರಾಂಭಿಸಿರುವುದಿಲ್ಲಾ	
3	ಮೈನಾರಿಟಿ ಕಾಲೋನಿ ಕಾಳಗಿ	ಕಾಳಗಿ	ಸಿ.ಸಿ. ರಸ್ತೆ & ಡ್ರೇನ್	10.00	10.00	PWPIWTD	ಪ್ರಾಂಭಿಸಿರುವುದಿಲ್ಲಾ	
4	ಮೈನಾರಿಟಿ ಕಾಲೋನಿ ಕೊಂಚಾವರಂ	ಚಿಂಚೋಳಿ	ಸಿ.ಸಿ. ರಸ್ತೆ & ಡ್ರೇನ್	5.00	5.00	PWPIWTD	ಪ್ರಾಂಭಿಸಿರುವುದಿಲ್ಲಾ	
	ಒಟ್ಟು			25.00	25.00			
	ಎಲ್ಲಾ ಸೇರಿ ಒಟ್ಟು			125.00	125.00			

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 2949
ಉತ್ತರಿಸಬೇಕಾದ ದಿನಾಂಕ – 24–03–2021
ಸದಸ್ಯರ ಹೆಸರು – ಶ್ರೀ. ಪ್ರಿಯಾಂಕ್ ಎಂ. ಖರ್ಗೆ (ಚಿತ್ತಾಪುರ)
ಉತ್ತರಿಸುವ ಸಚಿವರು – ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	2019–20 ಮತ್ತು 2020–21 ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ವತಿಯಿಂದ ಯಾವ ಯಾವ ಯೋಜನೆಗಳು ಜಾರಿಯಲ್ಲಿದ್ದವು; ಈ ಯೋಜನೆಗಳಿಗೆ ಎಷ್ಟು ಅನುದಾನ ಮೀಸಲಿಡಲಾಗಿತ್ತು; (ಯೋಜನೆವಾರು ಮಾಹಿತಿ ಒದಗಿಸುವುದು)	2019–20 ಮತ್ತು 2020–21 ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ವತಿಯಿಂದ ಜಾರಿಗೊಳಿಸಲಾದ ಯೋಜನೆಗಳ ವಿವರ ಹಾಗೂ ಮೀಸಲಿಡಲಾದ ಅನುದಾನದ ವಿವರಗಳನ್ನು **ಅನುಬಂಧ–1 ರಲ್ಲಿ ನೀಡಲಾಗಿದೆ.**
ಆ)	2019–20 ಮತ್ತು 2020–21 ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ವತಿಯಿಂದ ಯಾವ ಯಾವ ಯೋಜನೆಗಳನ್ನು ರದ್ದುಗೊಳಿಸಲಾಗಿದೆ ಮತ್ತು ರದ್ದುಗೊಳಿಸಲು ಕಾರಣವೇನು; ರದ್ದುಗೊಳಿಸಲಾದ ಯೋಜನೆಗಳನ್ನು ಪುನಃ ಪ್ರಾರಂಭಿಸಲಾಗುವುದೇ? (ವಿವರ ನೀಡುವುದು)	• 2020–21 ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ಈ ಕೆಳಕಂಡ ಯೋಜನೆಗಳನ್ನು ರದ್ದುಗೊಳಿಸಲಾಗಿದೆ. 1. ಬಿದಾಯಿ ಯೋಜನೆ 2. ಮಾನ್ಯ ಮುಖ್ಯಮಂತ್ರಿಗಳ ಅಭಿವೃದ್ಧಿ ಯೋಜನೆ 3. ಶಾದಿಮಹಲ್/ಸಮುದಾಯಭವನಗಳ ಕಟ್ಟಡ ನಿರ್ಮಾಣ ಯೋಜನೆ. • ಆರ್ಥಿಕ ಇಲಾಖೆಯಿಂದ ಮೇಲ್ಕಂಡ ಯೋಜನೆಗಳಿಗೆ ಯಾವುದೇ ಅನುದಾನ ನಿಗದಿಪಡಿಸಿರುವುದಿಲ್ಲವಾದ್ದರಿಂದ ರದ್ದುಗೊಳಿಸಲಾಗಿದೆ. • ಆರ್ಥಿಕ ಇಲಾಖೆಯಿಂದ ಅನುದಾನ ನಿಗದಿಪಡಿಸಿದ ನಂತರ ಸದರಿ ಯೋಜನೆಗಳನ್ನು ಪುನಃ ಪ್ರಾರಂಭಿಸಲಾಗುವುದು.

ಸಂಖ್ಯೆ:MWD 145 LMQ 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ. ಪ್ರಿಯಾಂಕ್ ಎಂ. ಖರ್ಗೆ (ಚಿತ್ತಾಪುರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2949ಕ್ಕೆ ಅನುಬಂಧ-1

22019-20 ಮತ್ತು 2020-21 ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯದ ವತಿಯಿಂದ ಜಾರಿಗೊಳಿಸಲಾದ ಯೋಜನೆಗಳ ವಿವರ ಹಾಗೂ ಅನುದಾನ ಮೀಸಲಿಟ್ಟ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆಗಳ ವಿವರ	2019-20ನೇ ಸಾಲಿನ ಮೀಸಲಿಟ್ಟ ಅನುದಾನ	2019-20ನೇ ಸಾಲಿನ ಪರಿಷ್ಕೃತ ಮೀಸಲಿಟ್ಟ ಅನುದಾನ	2020-21ನೇ ಸಾಲಿನ ಮೀಸಲಿಟ್ಟ ಅನುದಾನ	2020-21ನೇ ಸಾಲಿನ ಪರಿಷ್ಕೃತ ಮೀಸಲಿಟ್ಟ ಅನುದಾನ
1	ನಿರ್ದೇಶನ ಮತ್ತು ಆಡಳಿತ 2225-03-001-0-03	1441.00	1444.78	1389.00	1420.06
2	ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ 2225-03-102-0-14(059)	9000.00	6750.00	5500.00	3500.00
3	ಜೈನ್, ಬೌದ್ಧ ಮತ್ತು ಸಿಖ್ ಸಮುದಾಯದ ಅಭಿವೃದ್ಧಿ 2225-03-277-2-82	5500.00	3166.53	3000.00	3000.00
4	ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನಗಳು 2225-03-277-2-59 (051)	800.00	800.00	500.00	300.00
5	ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ 2225-03-277-2-61 (051)	2000.00	1800.00	1000.00	1000.00
6	ಅಲ್ಪಸಂಖ್ಯಾತರಿಗೆ ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ 2225-03-277-2-68 (117)	27500.00	3501.00	10001.00	10001.00
7	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ 2225-03-277-2-91	2000.00	2000.00	1950.00	898.00
8	ಅಲ್ಪಸಂಖ್ಯಾತರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ 2225-03-277-3-05 (059)	700.00	960.90	700.00	500.00
9	ಅಲ್ಪಸಂಖ್ಯಾತರ ಕಲ್ಯಾಣ ಮದರಸಾದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು 2225-03-102-3-10	3000.00	3000.00	1000.00	500.00
10	ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟೆಲ್‌ಗಳ ಪ್ರಾರಂಭ 2225-03-277-2-64	10310.00	7504.79	2249.00	2092.21
11	ಅಲ್ಪಸಂಖ್ಯಾತರ ವಸತಿ ಶಾಲೆಗಳು 2225-03-277-2-80	19098.00	19588.47	18903.00	12268.17
12	11 ಕಾರ್ಪೋರೇಷನ್‌ಗಳಲ್ಲಿ ಅಲ್ಪಸಂಖ್ಯಾತರ ಸ್ಲಮ್/ಕಾಲೋನಿ ಅಭಿವೃದ್ಧಿ ಯೋಜನೆ 4225-03-277-2-10	0.00	0.00	20000.00	0
13	ಅಲ್ಪಸಂಖ್ಯಾತರಿಗಾಗಿ ವಸತಿ ನಿಲಯ ಮತ್ತು ವಸತಿ ಶಾಲೆ ಕಟ್ಟಡಗಳ ನಿರ್ಮಾಣ 4225-03-277-2-03	22000.00	22000.00	20000.00	10000.00

ಕ್ರ.ಸಂ	ಯೋಜನೆಗಳ ವಿವರ	2019-20ನೇ ಸಾಲಿನ ಮೀಸಲಿಟ್ಟ ಅನುದಾನ	2019-20ನೇ ಸಾಲಿನ ಪರಿಷ್ಕೃತ ಮೀಸಲಿಟ್ಟ ಅನುದಾನ	2020-21ನೇ ಸಾಲಿನ ಮೀಸಲಿಟ್ಟ ಅನುದಾನ	2020-21ನೇ ಸಾಲಿನ ಪರಿಷ್ಕೃತ ಮೀಸಲಿಟ್ಟ ಅನುದಾನ
14	ಸಮುದಾಯ ಭವನ/ಶಾದಿಮಹಲ್ ನಿರ್ಮಾಣ 2225-03-277-2-48 (103)	2000.00	1500.00	0	0
15	ಕೌಶಲ್ಯ ಅಭಿವೃದ್ಧಿ ಯೋಜನೆ (ಮಿಷನ್ ಪ್ರೋಗ್ರಾಮ್) ಅಲ್ಪಸಂಖ್ಯಾತರು 2225-03-277-2-58 (101)	800.00	439.10	0	0
16	ಬಿದಾಯಿ 2225-03-800-0-07 (059)	6000.00	12979.00	0	0
17	ಮಾನ್ಯ ಮುಖ್ಯಮಂತ್ರಿಗಳ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆ	40000.00	40000.00	0	10200.00
	ಒಟ್ಟು	152149.00	127434.57	86192.00	55679.44
ಕೇಂದ್ರವಲಯ ಯೋಜನೆ					
18	ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ 2225-03-277-2-67	4000.00	4000.00	9500.00	9500.00
	ಒಟ್ಟು	4000.00	4000.00	9500.00	9500.00
ಜಿಲ್ಲಾವಲಯ ಯೋಜನೆ					
19	ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು 2225-00-103-0-34	8817.41	8817.41	7904.50	7904.50
20	ಅಲ್ಪಸಂಖ್ಯಾತರಗಾಗಿ ಕಾನೂನು ಪದವೀಧರರಿಗೆ ತರಬೇತಿ ಭತ್ಯೆ 2225-00-103-0-44	159.64	159.64	59.00	59.00
21	ಅಲ್ಪಸಂಖ್ಯಾತರಿಗಾಗಿ ಅನಾಥಾಲಯ - ಸಹಾಯಾನುದಾನ 2225-00-103-0-49	250.00	250.00	250.00	250.00
22	ಕಾರ್ಯಕಾರಿ ಸಿಬ್ಬಂದಿ 2225-00-103-0-51	1237.21	1237.21	1296.82	1296.82
	ಒಟ್ಟು	10464.26	10464.26	9510.32	9510.32

ಘೋಷ್ವಾರೆ:-

ಕ್ರ.ಸಂ	ಕಾರ್ಯಕ್ರಮ	2019-20ನೇ ಸಾಲಿನ ಆಯವ್ಯಯ	2019-20ನೇ ಸಾಲಿನ ಪರಿಷ್ಕೃತ ಆಯವ್ಯಯ	2020-21ನೇ ಸಾಲಿನ ಆಯವ್ಯಯ	2020-21ನೇ ಸಾಲಿನ ಪರಿಷ್ಕೃತ ಆಯವ್ಯಯ
1	ರಾಜ್ಯವಲಯ	152149.00	127434.57	86192.00	55679.44
2	ಕೇಂದ್ರವಲಯ	4000.00	4000.00	9500.00	9500.00
3	ಜಿಲ್ಲಾವಲಯ	10464.26	10464.26	9510.32	9510.32
	ಒಟ್ಟು	166613.26	141898.83	105202.32	74689.76

ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3504
ಸದಸ್ಯರ ಹೆಸರು	:	ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	:	24-03-2021.
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ರಾಜ್ಯದಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಎಷ್ಟಿವೆ; ಅವುಗಳಿಗೆ ಒದಗಿಸಿಕೊಡಲಾಗಿರುವ ನಿಗದಿತ ಮೂಲಭೂತ ಸೌಲಭ್ಯಗಳಾವುವು; (ವಿವರ ನೀಡುವುದು)	ರಾಜ್ಯದಲ್ಲಿರುವ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು: 43 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು: 261 ವಿದ್ಯಾರ್ಥಿ ನಿಲಯಗಳಿಗೆ ಒದಗಿಸಲಾದ ಮೂಲಭೂತ ಸೌಲಭ್ಯಗಳು:-ಹಾಸಿಗೆ, ಹೊದಿಕೆ, ಸಮವಸ್ತ್ರ (ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮಾತ್ರ), ಸೋಲಾರ್ ಲೈಟಿಂಗ್, ಸೋಲಾರ್ ವಾಟರ್ ಹೀಟರ್, ಟೇಬಲ್ಸ್, ಚೇರ್ಸ್, ಕಂಪ್ಯೂಟರ್ಸ್, ಪ್ರಿಂಟರ್ಸ್, ಯು.ಪಿ.ಎಸ್. ಸಿಸಿ.ಕ್ಯಾಮರ, ಶುದ್ಧ ಕುಡಿಯುವ ನೀರಿನ ಘಟಕ, ಕ್ರೀಡಾ ಸಾಮಗ್ರಿ, ಗ್ರಂಥಾಲಯ ವ್ಯವಸ್ಥೆ ಹಾಗೂ ಇತರೆ.
ಆ	ಸದರಿ ವಿದ್ಯಾರ್ಥಿನಿಲಯಗಳಲ್ಲಿ ಸೌಲಭ್ಯ ಪಡೆಯುತ್ತಿರುವ ಒಟ್ಟು ವಿದ್ಯಾರ್ಥಿಗಳು ಎಷ್ಟು; (ಬಾಲಕ ಬಾಲಕಿಯರ ಸಂಖ್ಯೆಯನ್ನು ಪ್ರತ್ಯೇಕವಾಗಿ ನೀಡುವುದು)	ಸದರಿ ವಿದ್ಯಾರ್ಥಿನಿಲಯಗಳಲ್ಲಿ ಸೌಲಭ್ಯ ಪಡೆಯುತ್ತಿರುವ ಒಟ್ಟು ವಿದ್ಯಾರ್ಥಿಗಳು ಬಾಲಕರು: 8038 ಬಾಲಕಿಯರು: 6824
ಇ	ವಿಶೇಷತ ಗ್ರಾಮಾಂತರ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯಗಳ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಶೈಕ್ಷಣಿಕ ಅಭಿವೃದ್ಧಿಯತ್ತ ಮುನ್ನಡೆಯಲು ಸರ್ಕಾರವು ಕೈಗೊಂಡ ಅರಿವು ಮೂಡಿಸುವ ಕಾರ್ಯಕ್ರಮಗಳು ಯಾವುವು;	ವಸತಿ ನಿಲಯ ಪ್ರವೇಶಾತಿಗೆ ಸಂಬಂಧಿಸಿದಂತೆ ದಿನಪತ್ರಿಕೆಗಳಲ್ಲಿ ಜಾಹಿರಾತು, ಜಿಲ್ಲಾ ಮಟ್ಟದಲ್ಲಿ ಕರ ಪತ್ರಗಳನ್ನು ಮುದ್ರಿಸಿ ಹಂಚಲಾಗಿರುತ್ತದೆ. ಮಸ್ಜಿದ್, ದರ್ಗಾ, ಚರ್ಚ್ ಮುಂತಾದ ಧಾರ್ಮಿಕ ಕೇಂದ್ರಗಳಲ್ಲಿ ಹಾಗೂ ಅಲ್ಪಸಂಖ್ಯಾತರ ತಾಲ್ಲೂಕು ಮಾಹಿತಿ ಕೇಂದ್ರಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಂಡು ಹೆಚ್ಚಿನ ವಿದ್ಯಾರ್ಥಿಗಳು ವಸತಿ ನಿಲಯಗಳಿಗೆ ಪ್ರವೇಶಪಡೆಯಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗಿದೆ. ಪ್ರತಿ ತಾಲ್ಲೂಕು/ಜಿಲ್ಲಾ ಮಟ್ಟದಲ್ಲಿ ಶಾಲಾ/ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿನಿಲಯದಲ್ಲಿರುವ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಒದಗಿಸಿ, ಸೌಲಭ್ಯಗಳ ಸದುಪಯೋಗಪಡಿಸಿಕೊಳ್ಳಲು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಗುತ್ತಿದೆ.

ಈ	ಮೆಟ್ರಿಕ್ ಪೂರ್ವ/ನಂತರದ ಹಾಸ್ಟೆಲ್‌ಗಳಲ್ಲಿ ಪ್ರವೇಶಾವಕಾಶಗಳನ್ನು ಒದಗಿಸಿಕೊಡಬೇಕೆಂದು ಸಲ್ಲಿಕೆಯಾದ ಅರ್ಜಿಗಳೆಷ್ಟು; ಮತ್ತು ಪ್ರವೇಶಾವಕಾಶವನ್ನು ಪಡೆದುಕೊಂಡ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು.)	ಜಿಲ್ಲಾವಾರು ವಿವರವನ್ನು **"ಅನುಬಂಧ-1"** ರಲ್ಲಿ ನೀಡಲಾಗಿದೆ.

ಸಂಖ್ಯೆ: MWD 139 LMQ 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ, ಜವಳಿ ಹಾಗೂ ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು.

ಅನುಬಂಧ-01

LAQ 504

ಈ) ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ಪ್ರವೇಶಾವಕಾಶಗಳನ್ನು ಒದಗಿಸಿಕೊಡಬೇಕೆಂದು ಸಲ್ಲಿಕೆಯಾದ ಅರ್ಜಿಗಳು ಹಾಗೂ ಪ್ರವೇಶಾವಕಾಶ ಪಡೆದುಕೊಂಡು ವಿದ್ಯಾರ್ಥಿಗಳ ಜಿಲ್ಲಾವಾರು ಮಾಹಿತಿ

ಕ್ರ.ಸಂ	ಜಿಲ್ಲೆ	ಪ್ರವೇಶಾವಕಾಶಕ್ಕೆ ಸಲ್ಲಿಕೆಯಾದ ಅರ್ಜಿಗಳು		ಪ್ರವೇಶಾವಕಾಶ ಪಡೆದುಕೊಂಡ ವಿದ್ಯಾರ್ಥಿಗಳು	
		ಬಾಲಕರು	ಬಾಲಕಿಯರು	ಬಾಲಕರು	ಬಾಲಕಿಯರು
1	ಬೆಂಗಳೂರು ಗ್ರಾಮಾಂತರ ಜಿಲ್ಲೆ	47	13	45	13
2	ಬೆಂಗಳೂರು ನಗರ	482	364	457	358
3	ಬೆಳಗಾವಿ	749	382	517	250
4	ಬೀದರ	513	496	449	452
5	ಬಳ್ಳಾರಿ	487	356	409	320
6	ಬಾಗಲಕೋಟೆ	760	514	444	420
7	ಚಾಮರಾಜನಗರ	58	41	58	41
8	ಚಿಕ್ಕಬಳ್ಳಾಪುರ	211	185	160	188
9	ಚಿಕ್ಕಮಗಳೂರು	78	150	78	150
10	ಚಿತ್ರದುರ್ಗ	193	241	178	223
11	ದ.ಕ	79	103	79	103
12	ದಾವಣಗೆರೆ	309	169	243	156
13	ಧಾರವಾಡ	274	541	208	375
14	ಗದಗ	175	175	175	175
15	ಹಾಸನ	141	124	122	121
16	ಹಾವೇರಿ	339	118	303	118
17	ಕಲಬುರಗಿ	1121	871	1308	1117
18	ಕೊಡಗು	59	46	59	46
19	ಕೋಲಾರ	118	40	118	40
20	ಕೊಪ್ಪಳ	527	241	409	206
21	ಮಂಡ್ಯ	130	110	127	100
22	ಮೈಸೂರು	164	267	145	263
23	ರಾಯಚೂರು	791	315	522	255
24	ರಾಮನಗರ	132	85	125	76
25	ಶಿವಮೊಗ್ಗ	108	560	138	478
26	ತುಮಕೂರು	610	389	540	384
27	ವಿಜಯಪುರ	378	161	142	83
28	ಉತ್ತರಕನ್ನಡ	122	0	95	0
29	ಉಡುಪಿ	14	34	10	13
30	ಯಾದಗಿರಿ	482	375	375	300
	ಒಟ್ಟು	9651	7466	8038	6824

ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ
ಬೆಂಗಳೂರು-01

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ (ಬಂಗಾರಪೇಟೆ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3551

ಉತ್ತರಿಸುವ ದಿನಾಂಕ : 24.03.2021

ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ಎಷ್ಟು ತಾಲ್ಲೂಕು ಪಂಚಾಯಿತಿಗಳಲ್ಲಿ ಅನ್ಯ ಇಲಾಖೆಯ ಅಧಿಕಾರಿಗಳು ಕಾರ್ಯ ನಿರ್ವಹಣಾಧಿಕಾರಿಗಳಾಗಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ; (ತಾಲ್ಲೂಕುವಾರು ವಿವರ ನೀಡುವುದು)	ರಾಜ್ಯದ ವಿವಿಧ ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿಗಳಲ್ಲಿ ವಿವಿಧ ಇಲಾಖೆಗೆ ಸೇರಿದ ಒಟ್ಟು- 19 ಅಧಿಕಾರಿಗಳು ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಲ್ಲಿ ಎರವಲು ಸೇವೆಯ ಮೇಲೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಆ)	ಕಾರ್ಯನಿರ್ವಹಣಾಧಿಕಾರಿಗಳ ಹುದ್ದೆಯಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಸಮರ್ಥವಾಗಿ ಕಾರ್ಯ ನಿರ್ವಹಿಸದೇ ತೊಂದರೆಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಾರ್ಯನಿರ್ವಹಣಾಧಿಕಾರಿಗಳ ಹುದ್ದೆಯಲ್ಲಿ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದ್ದು ಅವರುಗಳಿಂದ ಯಾವುದೇ ತೊಂದರೆಯಾಗಿರುವುದು ಕಂಡುಬಂದಿರುವುದಿಲ್ಲ.
ಇ)	ತಾಲ್ಲೂಕು ಪಂಚಾಯಿತಿಗಳಿಗೆ ಪಂಚಾಯತ್ ರಾಜ್ ಇಲಾಖೆಯ ಮುಖಾಂತರ ಕಾರ್ಯನಿರ್ವಹಣಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಗಳೇನು; ಈ ಬಗ್ಗೆ ಸರ್ಕಾರ ಕ್ರಮವಹಿಸುವುದೇ?	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಒಟ್ಟು 227 ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗಳಿದ್ದು ಸದರಿ ಹುದ್ದೆಗಳ ಪೈಕಿ ನೇರ ನೇಮಕಾತಿ ಕೋಟಾದಡಿ ಮಾತ್ರ 72 ಹುದ್ದೆಗಳು ಖಾಲಿ ಇರುತ್ತವೆ. ಪದೋನ್ನತಿ ಕೋಟಾದಡಿ ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲ.

ಸಂಖ್ಯೆ:ಗ್ರಾಅಪ 73 ಪಿಬಿವಿ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಅನುಬಂಧ

ಕ್ರಮ ಸಂಖ್ಯೆ:	ತಾಲ್ಲೂಕು ಪಂಚಾಯಿತಿ
1.	ಜಮಖಂಡಿ ತಾಲ್ಲೂಕು ಪಂಚಾಯಿತಿ
2.	ಚಿಕ್ಕಮಗಳೂರು ತಾಲ್ಲೂಕು ಪಂಚಾಯಿತಿ
3.	ಮೂಡಿಗೆರೆ ತಾಲ್ಲೂಕು ಪಂಚಾಯಿತಿ
4.	ಅಜ್ಜಂಪುರ ತಾಲ್ಲೂಕು ಪಂಚಾಯಿತಿ
5.	ದಾವಣಗೆರೆ ತಾಲ್ಲೂಕು ಪಂಚಾಯಿತಿ
6.	ಹರಿಹರ ತಾಲ್ಲೂಕು ಪಂಚಾಯಿತಿ
7.	ಜಗಳೂರು ತಾಲ್ಲೂಕು ಪಂಚಾಯಿತಿ
8.	ಅರಸೀಕೆರೆ ತಾಲ್ಲೂಕು ಪಂಚಾಯಿತಿ
9.	ಹೊಳೆನರಸೀಪುರ ತಾಲ್ಲೂಕು ಪಂಚಾಯಿತಿ
10.	ಬೇಲೂರು ತಾಲ್ಲೂಕು ಪಂಚಾಯಿತಿ
11.	ಶ್ರೀನಿವಾಸಪುರ ತಾಲ್ಲೂಕು ಪಂಚಾಯಿತಿ
12.	ಮುಳಬಾಗಿಲು, ತಾಲ್ಲೂಕು ಪಂಚಾಯಿತಿ
13.	ಯಲಬುರ್ಗಾ ತಾಲ್ಲೂಕು ಪಂಚಾಯಿತಿ
14.	ಪಾಂಡವಪುರ ತಾಲ್ಲೂಕು ಪಂಚಾಯಿತಿ
15.	ಮೈಸೂರು ತಾಲ್ಲೂಕು ಪಂಚಾಯಿತಿ
16.	ತುರುವೇಕೆರೆ ತಾಲ್ಲೂಕು ಪಂಚಾಯಿತಿ
17.	ಭದ್ರಾವತಿ ತಾಲ್ಲೂಕು ಪಂಚಾಯಿತಿ
18.	ಉಡುಪಿ ತಾಲ್ಲೂಕು ಪಂಚಾಯಿತಿ
19.	ಕುಮಟಾ ತಾಲ್ಲೂಕು ಪಂಚಾಯಿತಿ

ಸಂಖ್ಯೆ:ಗ್ರಾಅಪ 73 ಪಿಬಿವಿ 2021

(ಟಿ.ಡಿ.ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾ.ಅ.ಪಂ.ರಾಜ್ ಇಲಾಖೆ. (ಸೇ-ಬಿ&ಸಿ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	–	3561
ಉತ್ತರಿಸಬೇಕಾದ ದಿನಾಂಕ	–	24-03-2021
ಸದಸ್ಯರ ಹೆಸರು	–	ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ)
ಉತ್ತರಿಸುವ ಸಚಿವರು	–	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2020-21ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಒದಗಿಸಿರುವ ಅನುದಾನವೆಷ್ಟು; (ವಿವರ ನೀಡುವುದು)</td><td><u>ಅಲ್ಪಸಂಖ್ಯಾತರ ನಿರ್ದೇಶನಾಲಯ:</u>
2020-21ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಒದಗಿಸಿರುವ ಅನುದಾನದ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
<u>ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ:</u>
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 2020-21ನೇ ಸಾಲಿನಲ್ಲಿ ಒದಗಿಸಿರುವ ಪರಿಷ್ಕೃತ ಅನುದಾನದ ವಿವರ ಈ ಕೆಳಕಂಡಂತಿದೆ.
(ರೂ.ಲಕ್ಷಗಳಲ್ಲಿ)
<table><tr><td>ಷೇರು ಬಂಡವಾಳ</td><td>3000.00</td></tr><tr><td>ನಿಗಮದ ಇತರೆ ವೆಚ್ಚ</td><td>4154.00</td></tr></table></td></tr>
<tr><td>ಆ)</td><td>ಅಲ್ಪಸಂಖ್ಯಾತರ ಕಾಲೋನಿಗಳಿಗೆ ಅಭಿವೃದ್ಧಿಗೆ ನಿಗದಿಪಡಿಸಿರುವ ಅನುದಾನ ಎಷ್ಟು;</td><td>2020-21ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ.</td></tr>
<tr><td>ಇ)</td><td>ಬಿಡುಗಡೆಯಾಗಿರುವ ಅನುದಾನ ಎಷ್ಟು;</td><td>ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ.</td></tr>
<tr><td>ಈ)</td><td>ಪಿರಿಯಾಪಟ್ಟಣ ಮತ ಕ್ಷೇತ್ರ ವ್ಯಾಪ್ತಿಯ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ ಪ್ರಸಕ್ತ ವರ್ಷ ಎಷ್ಟು ಅನುದಾನ ಬಿಡುಗಡೆ ಮಾಡಲಾಗುವುದು; ಇಲ್ಲವಾದರೆ ಕಾರಣ ನೀಡುವುದು?</td><td>2020-21ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಯಡಿ ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ. ಆದ್ದರಿಂದ ಪ್ರಸಕ್ತ ಸಾಲಿನಲ್ಲಿ ಅನುದಾನವನ್ನು ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ.</td></tr>
</table>

MWD 143 LMQ 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:3561 ಕ್ಕೆ ಅನುಬಂಧ-1

2020-21ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಒದಗಿಸಿರುವ ಅನುದಾನದ ವಿವರ

(ರೂ. ಲಕ್ಷಗಳಲ್ಲಿ)

ಕ್ರ.ಸಂ	ಯೋಜನೆಗಳ ವಿವರ	2020-21ನೇ ಸಾಲಿನ ಮೀಸಲಿಟ್ಟ ಅನುದಾನ	2020-21ನೇ ಸಾಲಿನ ಪರಿಷ್ಕೃತ ಮೀಸಲಿಟ್ಟ ಅನುದಾನ
1	ನಿರ್ದೇಶನ ಮತ್ತು ಆಡಳಿತ	1389.00	1420.06
2	ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ	5500.00	3500.00
3	ಜೈನ್, ಬೌದ್ಧ ಮತ್ತು ಸಿಖ್ ಸಮುದಾಯದ ಅಭಿವೃದ್ಧಿ	3000.00	3000.00
4	ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನಗಳು	500.00	300.00
5	ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ	1000.00	1000.00
6	ಅಲ್ಪಸಂಖ್ಯಾತರಿಗೆ ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ	10001.00	10001.00
7	ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ	1950.00	898.00
8	ಅಲ್ಪಸಂಖ್ಯಾತರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ	700.00	500.00
9	ಅಲ್ಪಸಂಖ್ಯಾತರ ಕಲ್ಯಾಣ ಮದರಸಾದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು	1000.00	500.00
10	ಅಲ್ಪಸಂಖ್ಯಾತರಿಗಾಗಿ ನೂತನ ಹಾಸ್ಟೆಲ್‌ಗಳ ಪ್ರಾರಂಭ	2249.00	2092.21
11	ಅಲ್ಪಸಂಖ್ಯಾತರ ವಸತಿ ಶಾಲೆಗಳು	18903.00	12268.17
12	ಅಲ್ಪಸಂಖ್ಯಾತರಿಗಾಗಿ ವಸತಿ ನಿಲಯ ಮತ್ತು ವಸತಿ ಶಾಲೆ ಕಟ್ಟಡಗಳ ನಿರ್ಮಾಣ	20000.00	10000.00
13	11 ಕಾರ್ಪೋರೇಷನ್‌ಗಳಲ್ಲಿ ಅಲ್ಪಸಂಖ್ಯಾತರ ಸ್ಲಮ್/ಕಾಲೋನಿ ಅಭಿವೃದ್ಧಿ ಯೋಜನೆ	20000.00	0
	ಮಾನ್ಯ ಮುಖ್ಯಮಂತ್ರಿಗಳ ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆ	0	10200.00
	ಒಟ್ಟು	86192.00	55679.44
ಕೇಂದ್ರವಲಯ ಯೋಜನೆ			
14	ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮ	9500.00	9500.00
	ಒಟ್ಟು	9500.00	9500.00
ಜಿಲ್ಲಾವಲಯ ಯೋಜನೆ			
15	ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು	7904.50	7904.50
16	ಅಲ್ಪಸಂಖ್ಯಾತರಗಾಗಿ ಕಾನೂನು ಪದವೀಧರರಿಗೆ ತರಬೇತಿ ಭತ್ಯೆ	59.00	59.00
17	ಅಲ್ಪಸಂಖ್ಯಾತರಿಗಾಗಿ ಅನಾಥಾಲಯ -ಸಹಾಯಾನುದಾನ	250.00	250.00
18	ಕಾರ್ಯಕಾರಿ ಸಿಬ್ಬಂದಿ	1296.82	1296.82
	ಒಟ್ಟು	9510.32	9510.32

ಘೋಷ್ವಾರೆ:-

ಕ್ರ.ಸಂ	ಕಾರ್ಯಕ್ರಮ	2020-21ನೇ ಸಾಲಿನ ಆಯವ್ಯಯ	2020-21ನೇ ಸಾಲಿನ ಪರಿಷ್ಕೃತ ಆಯವ್ಯಯ
1	ರಾಜ್ಯವಲಯ	86192.00	55679.44
2	ಕೇಂದ್ರವಲಯ	9500.00	9500.00
3	ಜಿಲ್ಲಾವಲಯ	9510.32	9510.32
	ಒಟ್ಟು	105202.32	74689.76

ನಿರ್ದೇಶಕರು,
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**3584**
ಮಾನ್ಯ ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ. (ಉಡುಪಿ)
ಉತ್ತರಿಸುವ ಸಚಿವರು	:	ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
ಉತ್ತರಿಸಬೇಕಾದ ದಿನಾಂಕ	:	**24-03-2021**

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಉಡುಪಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖಾ ಅಧೀನದಲ್ಲಿ ಎಷ್ಟು ತೋಟಗಳಿವೆ; ಎಷ್ಟು ಎಕರೆ ವಿಸ್ತೀರ್ಣವಿದೆ; (ತಾಲ್ಲೂಕುವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)	ಉಡುಪಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖಾ ಅಧೀನದಲ್ಲಿ ಒಟ್ಟು 8 ಕ್ಷೇತ್ರ/ಸಸ್ಯಾಗಾರಗಳಿದ್ದು, 269 ಎಕರೆ 24 ಗುಂಟೆ ವಿಸ್ತೀರ್ಣ ಇರುತ್ತದೆ. ತಾಲ್ಲೂಕುವಾರು ಸಂಪೂರ್ಣ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ	ತಾಲ್ಲೂಕು	ತೋಟಗಾರಿಕೆ ಕ್ಷೇತ್ರದ ಹೆಸರು	ವಿಸ್ತೀರ್ಣ(ಎಕರೆ ಗುಂಟೆಗಳಲ್ಲಿ)
1	ಉಡುಪಿ	ಶಿವಳ್ಳಿ ತೋ.ಕ್ಷೇ.	27.19
2	ಬ್ರಹ್ಮಾವರ	ವಾರಂಬಳ್ಳಿ ತೋ.ಕ್ಷೇ.	2.30
3	ಕುಂದಾಪುರ	ಕೆದೂರು ತೋ.ಕ್ಷೇ.	13.25
4		ಕುಂಭಾಶಿ ತೋ.ಕ್ಷೇ.	22.22
5		ಕಛೇರಿ ಸಸ್ಯಾಗಾರ	0.13
6	ಕಾರ್ಕಳ	ರಾಮಸಮುದ್ರ ತೋ.ಕ್ಷೇ.	186.26
7		ಕುಕ್ಕುಂದೂರು ತೋ.ಕ್ಷೇ.	15.20
8		ಕಛೇರಿ ಸಸ್ಯಾಗಾರ	0.29
	ಒಟ್ಟು		**269.24**

ಕ್ರ. ಸಂ.	ಪ್ರಶ್ನೆ	ಉತ್ತರ
ಆ)	ಈ ತೋಟಗಳಲ್ಲಿ ಯಾವ ಯಾವ ಬಗೆಯ ತಳಿಗಳನ್ನು ನೆಡಲಾಗಿದೆ; ಇದರ ನಿರ್ವಹಣೆ ಮಾಡುತ್ತಿರುವವರು ಯಾರು; (ಸಂಪೂರ್ಣ ವಿವರಗಳನ್ನು ಒದಗಿಸುವುದು)	ಉಡುಪಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ನೆಡಲಾಗಿರುವ ತಳಿಗಳ ವಿವರಗಳು ಈ ಕೆಳಕಂಡಂತಿವೆ.

ಬೆಳೆ	ತಳಿ
ಶಿವಳ್ಳಿ ತೋಟಗಾರಿಕೆ ಕ್ಷೇತ್ರ, ಉಡುಪಿ	
ಮಾವು	ಆಪೂಸ್, ತೋತಾಪುರಿ
ಸಪೋಟ	DHS 1&2
ತೆಂಗು	ಸ್ಥಳೀಯ
ಮ್ಯಾಂಗೋಸ್ಟೀನ್	ಸ್ಥಳೀಯ
ಹಲಸು	ಸಿದ್ದು/ ಶಂಕರ

		ಮಲ್ಲಿಗೆ	ಉಡುಪಿ
		ಗೇರು	ಉಲ್ಲಾಳ-1, ಭಾಸ್ಕರ
		ಸುವರ್ಣಗೆಡ್ಡೆ	ಸ್ಥಳೀಯ
		ವಾರಂಬಳ್ಳಿ ತೋಟಗಾರಿಕೆ ಕ್ಷೇತ್ರ, ಉಡುಪಿ	
		ತೆಂಗು	ಸ್ಥಳೀಯ
		ಬಾಳೆ	G-9
		ಮ್ಯಾಂಗೋಸ್ಟೀನ್	ಸ್ಥಳೀಯ
		ಮಾವು	ಆಪೂಸ್
		ಸಪೋಟ	ಕ್ರಿಕೆಟ್ ಬಾಲ್
		ಗೇರು	ಉಲ್ಲಾಳ
		ಕುಂಭಾಶಿ ತೋಟಗಾರಿಕೆ ಕ್ಷೇತ್ರ, ಕುಂದಾಪುರ	
		ಮಾವು	ಆಪೂಸ್, ಮಲ್ಲಿಕಾ
		ಗೇರು	ಉಳ್ಳಾಲ
		ಸಪೋಟ	ಕ್ರಿಕೆಟ್ ಬಾಲ್
		ತೆಂಗು	ಸ್ಥಳೀಯ
		ರಾಂಬುಟಾನ್	N-18
		ಕೆದೂರು ತೋಟಗಾರಿಕೆ ಕ್ಷೇತ್ರ, ಕುಂದಾಪುರ	
		ಮಾವು	ಮಲ್ಲಿಕಾ, ಆಪೂಸ್
		ತೆಂಗು	ಸ್ಥಳೀಯ
		ನೇರಳೆ	ಸ್ಥಳೀಯ
		ಕಥೇರಿ ಸಸ್ಯಾಗಾರ, ಕುಂದಾಪುರ	
		ತೆಂಗು	ಸ್ಥಳೀಯ
		ರಾಮಸಮುದ್ರ ತೋಟಗಾರಿಕೆ ಕ್ಷೇತ್ರ, ಕಾರ್ಕಳ	
		ಮಾವು	ಆಪೂಸ್, ತೋತಾಪುರಿ
		ಗೇರು	ಉಳ್ಳಾಲ
		ತೆಂಗು	ಸ್ಥಳೀಯ
		ಕೊಕೋ	F-1
		ದಾಲ್ಚಿನ್ನಿ	ಸ್ಥಳೀಯ
		ಹಲಸು	ಗಮ್ ಲೆಸ್
		ಸರ್ವಸಾಂಬಾರು	ಸ್ಥಳೀಯ
		ತಾಳೆ	ಪೆನೆರಾ
		ರಾಂಬುಟಾನ್	N-18
		ಜಾಯಿಕಾಯಿ	ಸ್ಥಳೀಯ
		ಮ್ಯಾಂಗೋಸ್ಟೀನ್	ಸ್ಥಳೀಯ
		ಕುಕ್ಕುಂದೂರು ತೋಟಗಾರಿಕೆ ಕ್ಷೇತ್ರ, ಕಾರ್ಕಳ	

		ತೆಂಗು	ಸ್ಥಳೀಯ
		ಮಾವು	ಆಪೂಸ್, ತೋತಾಪುರಿ
		ಸಪೋಟ	ಕ್ರಿಕೆಟ್ ಬಾಲ್
		ರಾಂಬುಟಾನ್	N-18
		ಮ್ಯಾಂಗೋಸ್ಟೀನ್	ಸ್ಥಳೀಯ
		ಜಾಯಿಕಾಯಿ	ಸ್ಥಳೀಯ
		ಕೊಕೋ	F-1
		ಕಛೇರಿ ಸಸ್ಯಾಗಾರ, ಕಾರ್ಕಳ	
		ತೆಂಗು	ಸ್ಥಳೀಯ
		ಮಾವು	ಆಪೂಸ್, ತೋತಾಪುರಿ
		ಸದರಿ ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳನ್ನು ತೋಟಗಾರಿಕೆ ಇಲಾಖೆಯಿಂದ ನಿರ್ವಹಣೆ ಮಾಡಲಾಗುತ್ತಿದೆ.	
ಇ)	ಈ ತೋಟಗಾರಿಕೆಗಳಿಂದ ಇಲಾಖೆಗೆ ವರ್ಷವಾರು ಬರುವ ಆದಾಯ ಎಷ್ಟು; ಈ ಆದಾಯವನ್ನು	ಈ ಕ್ಷೇತ್ರ ಮತ್ತು ಸಸ್ಯಾಗಾರಗಳಿಂದ ತೋಟಗಾರಿಕೆ ಇಲಾಖೆಗೆ ವರ್ಷವಾರು ಸರಾಸರಿ 53.47 ಲಕ್ಷಗಳ ಆದಾಯ ಬಂದಿರುತ್ತದೆ. ಸದರಿ ಆದಾಯವನ್ನು ಆವರ್ತ ನಿಧಿಯಾಗಿ ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿರುವ ಕ್ಷೇತ್ರ ಮತ್ತು ಸಸ್ಯಾಗಾರಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಸಸ್ಯೋತ್ಪಾದನೆ, ಪ್ರದೇಶ ವಿಸ್ತರಣೆ, ನಿರ್ವಹಣೆ ಹಾಗೂ ಇನ್ನಿತರೆ ತೋಟಗಾರಿಕೆ ಚಟುವಟಿಕೆಗಳಿಗೆ ವಿನಿಯೋಗಿಸಲಾಗುತ್ತದೆ.	

ಸಂಖ್ಯೆ: HORTI 199 HGM 2021

(ಆರ್.ಶಂಕರ್)

ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3601
ಸದಸ್ಯರ ಹೆಸರು	ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)
ಉತ್ತರಿಸುವ ದಿನಾಂಕ	24.03.2021
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಮಣ್ಣು, ನೀರು ಪರೀಕ್ಷೆ ಮತ್ತು ರೈತರಿಗೆ ತಾಂತ್ರಿಕ ನೆರವು ನೀಡಲು ಕಳೆದ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದ್ದ "ಸಂಚಾರಿ ಕೃಷಿ ಹೆಲ್ತ್ ಕ್ಲಿನಿಕ್" ಗಳನ್ನು ಪ್ರಾರಂಭಿಸಲಾಗಿದೆಯೇ;	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೃಷಿ ಬೆಳೆಗಳಲ್ಲಿನ ಕೀಟ, ರೋಗ, ಕಳೆ ಬಾಧೆ ನಿರ್ವಹಣೆ, ಸಸ್ಯ ಪೋಷಕಾಂಶಗಳ ಕೊರತೆ, ಮಣ್ಣು ಆರೋಗ್ಯ ಮತ್ತಿತರ ತಾಂತ್ರಿಕ ಸಹಾಯವನ್ನು ಕ್ಷೇತ್ರ ಮಟ್ಟದಲ್ಲಿ ರೈತರಿಗೆ ಒದಗಿಸುವ ನಿಟ್ಟಿನಲ್ಲಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗಿರುತ್ತದೆ.
ಆ.	ರಾಜ್ಯದಲ್ಲಿ ಎಷ್ಟು ಸಂಚಾರಿ ಕೃಷಿ ಹೆಲ್ತ್ ಕ್ಲಿನಿಕ್‌ಗಳನ್ನು ಪ್ರಾರಂಭಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ 40 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳನ್ನು ಹಾಗೂ ಕೊಪ್ಪಳ ಜಿಲ್ಲಾ ಖನಿಜ ಪ್ರತಿಷ್ಠಾನದಡಿ ಕೊಪ್ಪಳ ಜಿಲ್ಲೆಯ ಹೋಬಳಿ ಮಟ್ಟದಲ್ಲಿ 20 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಸ್ಥಾಪನೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.
ಇ.	ಎಷ್ಟು ರೈತರು ಈ ಕ್ಲಿನಿಕ್‌ಗಳ ಸದುಪಯೋಗವನ್ನು ಪಡೆದುಕೊಂಡಿದ್ದಾರೆ? (ಎನ್. ಆರ್. ಪುರ, ಶೃಂಗೇರಿ ಹಾಗೂ ಕೊಪ್ಪ ತಾಲ್ಲೂಕುವಾರು ಮಾಹಿತಿ ನೀಡುವುದು)	ಕ್ಲಿನಿಕ್‌ಗಳ ಸದುಪಯೋಗ ಪಡೆದ ರೈತರ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ಹಾಗೂ ತರೀಕೆರೆ ತಾಲ್ಲೂಕುಗಳಲ್ಲಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯದ ವಾಹನವು ಸಂಚರಿಸಿ ರೈತರಿಗೆ FRUITS (Farmers Registration and Unified

		Beneficiary Information System) ತಂತ್ರಾಂಶ ಹಾಗೂ ಇಲಾಖೆಯ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ. ಒಟ್ಟು 2550 ರೈತರು ಇದರ ಸದುಪಯೋಗ ಪಡೆದುಕೊಂಡಿರುತ್ತಾರೆ. ಮಲೆನಾಡು ಭಾಗದ ಕೊಪ್ಪ, ಶೃಂಗೇರಿ ಹಾಗೂ ನರಸಿಂಹರಾಜಪುರ ತಾಲ್ಲೂಕುಗಳಲ್ಲಿ ಸಂಚಾರಕ್ಕಾಗಿ ಕ್ರಮ ವಹಿಸಲಾಗಿದೆ.

ಸಂಖ್ಯೆ: AGRI-AML/80/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ

ನುಬಂಧ: ರಾಜ್ಯದಲ್ಲಿ ಜಿಲ್ಲಾವಾರು ಸ್ಥಾಪಿಸಲಾಗಿರುವ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳು ಹಾಗೂ ಯೋಜನೆಯಡಿ ಸದುಪಯೋಗವನ್ನು ಪಡೆದ ರೈತರ ಸಂಖ್ಯೆ:

ಕ್ರ.ಸಂ	ಜಿಲ್ಲೆ	ಸಂಚಾರಿ ಸಸ್ಯ ಚಿಕಿತ್ಸಾಲಯಗಳ ಸಂಖ್ಯೆ	ರೈತರ ಸಂಖ್ಯೆ
1	ಬಾಗಲಕೋಟೆ	1	245
2	ಬೆಂಗಳೂರು	4	438
3	ಬೆಳಗಾವಿ	2	70
4	ಬಳ್ಳಾರಿ	2	106
5	ಬೀದರ	1	80
6	ವಿಜಯಪುರ	1	46
7	ಚಾಮರಾಜನಗರ	1	62
8	ಚಿಕ್ಕಬಳ್ಳಾಪುರ	1	136
9	ಚಿಕ್ಕಮಗಳೂರು	1	2550
10	ಚಿತ್ರದುರ್ಗ	1	16
11	ದಕ್ಷಿಣಕನ್ನಡ	1	6
12	ದಾವಣಗೆರೆ	1	70
13	ಧಾರವಾಡ	1	914
14	ಗದಗ	1	106
15	ಕಲಬುರ್ಗಿ	2	455
16	ಹಾಸನ	2	235
17	ಹಾವೇರಿ	2	58
18	ಕೊಡಗು	1	24
19	ಕೋಲಾರ	1	373
20	ಕೊಪ್ಪಳ *	21	1855
21	ಮಂಡ್ಯ	2	154
22	ಮೈಸೂರು	1	17
23	ರಾಮನಗರ	1	151
24	ರಾಯಚೂರು	1	145
25	ಶಿವಮೊಗ್ಗ	2	762
26	ತುಮಕೂರು	2	154
27	ಉಡುಪಿ	1	76
28	ಉತ್ತರಕನ್ನಡ	1	23
29	ಯಾದಗಿರಿ	1	16
	ಒಟ್ಟು	**60**	**9343**

*-ಕೊಪ್ಪಳ ಜಿಲ್ಲಾ ಖನಿಜ ಪ್ರತಿಷ್ಠಾನದಡಿ ಕೊಪ್ಪಳ ಜಿಲ್ಲೆಯಲ್ಲಿ ಹೋಬಳಿ ಮಟ್ಟದಲ್ಲಿ 20 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಸ್ಥಾಪನೆಯನ್ನು ಮಾಡಲಾಗಿರುತ್ತದೆ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3602
ಮಾನ್ಯ ವಿಧಾನಸಭಾ ಸದಸ್ಯರ ಹೆಸರು	:	ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ	:	24.03.2021
ಉತ್ತರಿಸಬೇಕಾದವರು	:	ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಹಾಪ್ ಕಾಮ್ಸ್ ಗಳಲ್ಲಿ ಸಾವಯವ ಹಣ್ಣು ಮತ್ತು ತರಕಾರಿಗಳನ್ನು ಪ್ರತ್ಯೇಕವಾಗಿ ಮಾರಾಟ ಮಾಡಲು ಅವಕಾಶವಿದೆಯೇ;	ಹಾಪ್ ಕಾಮ್ಸ್ ಗಳಲ್ಲಿ ಸಾವಯವ ಹಣ್ಣು ಮತ್ತು ತರಕಾರಿಗಳನ್ನು ಪ್ರತ್ಯೇಕವಾಗಿ ಮಾರಾಟ ಮಾಡಲು ಪ್ರಸಕ್ತ ಅವಕಾಶ ಇರುವುದಿಲ್ಲ.
(ಆ)	ಇಲ್ಲದಿದ್ದಲ್ಲಿ, ಮುಂದಿನ ದಿನಗಳಲ್ಲಿ ಅವಕಾಶ ಮಾಡಿಕೊಡಲು ಸರ್ಕಾರ ಸಿದ್ಧವಿದೆಯೇ;	ಮುಂದಿನ ದಿನಗಳಲ್ಲಿ ಗ್ರಾಹಕರ ಬೇಡಿಕೆ, ಅನುದಾನ, ಸ್ಥಳದ ಲಭ್ಯತೆಗೆ ಅನುಗುಣವಾಗಿ ಸಾವಯವ ಹಣ್ಣು ಮತ್ತು ತರಕಾರಿಗಳನ್ನು ಪ್ರತ್ಯೇಕವಾಗಿ ಮಾರಾಟ ಮಾಡಲು ಅವಕಾಶ ಮಾಡಿಕೊಡಲು ಸಿದ್ಧವಿದೆ.
(ಇ)	ಸಾವಯವ ಬೆಳೆಗಾರರನ್ನು ಪ್ರೋತ್ಸಾಹಿಸಲು ಸರ್ಕಾರ ಇದುವರೆವಿಗು ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ? (ವಿವರ ನೀಡುವುದು)	**<u>ಸಾವಯವ ಬೆಳೆಗಾರರನ್ನು ಪ್ರೋತ್ಸಾಹಿಸಲು ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳು ಈ ಕೆಳಕಂಡಂತಿವೆ.</u>** **<u>ಎ) ತೋಟಗಾರಿಕೆ ಇಲಾಖೆ</u>** 1. ಕೇಂದ್ರ ಪುರಸ್ಕೃತ ಪರಂಪರಾಗತ ಕೃಷಿ ವಿಕಾಸ ಯೋಜನೆ (PKVY) ಯಡಿ 2022-23 ರವರೆಗೆ ಒಟ್ಟು 10,000 ಹೆಕ್ಟೇರ್ ಪ್ರದೇಶವನ್ನು ಸಾವಯವವಾಗಿ ಪರಿವರ್ತಿಸಲು ಕಾರ್ಯಕ್ರಮ ಹಮ್ಮಿಕೊಳ್ಳ ಲಾಗಿರುತ್ತದೆ. 2. ರಾಜ್ಯದ 18 ಜಿಲ್ಲೆಗಳಲ್ಲಿ ಪ್ರತೀ ಜಿಲ್ಲೆಗೆ ತಲಾ 01 ರಂತೆ 18 ಗುಚ್ಛಗಳನ್ನು ಗುರುತಿಸಿ, ಅನುಷ್ಠಾನ ಪ್ರಕ್ರಿಯೆ ಪ್ರಾರಂಭಿಸಲಾಗಿರುತ್ತದೆ. 3. ಪ್ರತೀ ಹೆಕ್ಟೇರ್ ಗೆ ರೂ.50,000/-, ಅದರಲ್ಲಿ ರೂ.31,000/- ಗಳನ್ನು ರೈತ ಫಲಾನುಭವಿಗಳಿಗೆ ನೀಡಲಾಗುವುದು ಮತ್ತು ಉಳಿದ ರೂ.19,000/- ಸಾಮರ್ಥ್ಯವೃದ್ಧಿ, ಮಾನವ ಸಂಪನ್ಮೂಲ ನಿಯೋಜನೆ, ಪ್ರಮಾಣೀಕರಣ, ಪ್ರಚಾರ, ಮೌಲ್ಯವರ್ಧನೆ, ಬ್ರ್ಯಾಂಡ್ ಅಭಿವೃದ್ಧಿ ಮತ್ತು ಮಾರುಕಟ್ಟೆಗಾಗಿ ಬಳಸಿಕೊಳ್ಳಲಾಗುವುದು. ಪ್ರತೀ ಫಲಾನುಭವಿಯು ಗರಿಷ್ಠ 02 ಹೆಕ್ಟೇರ್ ಗೆ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.

4. ಸಾವಯವ ಬೆಳೆಗಾರರನ್ನು ಪ್ರೋತ್ಸಾಹಿಸಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಸಾವಯವ ಕೃಷಿ ಅಳವಡಿಕೆಗಾಗಿ ಪ್ರತೀ ಹೆಕ್ಟೇರ್ ಗೆ ಘಟಕ ವೆಚ್ಚ ರೂ.20,000/- ದ ಶೇ.50 ರ ಸಹಾಯ ಧನ ರೂ.10,000/- ಗಳನ್ನು ಕೆಳಕಂಡಂತೆ ನೀಡಲಾಗುತ್ತದೆ.

ಮೊದಲನೇ ವರ್ಷ – ರೂ.4,000/-
ಎರಡನೇ ವರ್ಷ – ರೂ.3,000/-
ಮೂರನೇ ವರ್ಷ – ರೂ.3,000/-

ಬಿ. ಕೃಷಿ ಇಲಾಖೆ :

1. ರಾಜ್ಯದಲ್ಲಿ ಸಾವಯವ ಕೃಷಿಗೆ ಉತ್ತೇಜನ ನೀಡುವ ಉದ್ದೇಶದಿಂದ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ 2004ರಲ್ಲಿಯೇ ಸಾವಯವ ಕೃಷಿ ನೀತಿಯನ್ನು ರಾಜ್ಯವು ಜಾರಿಗೆ ತಂದಿರುತ್ತದೆ.
2. ಸಾವಯವ ಗ್ರಾಮ ಯೋಜನೆ ಹೆಸರಿನಲ್ಲಿ ಹಲವಾರು ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳನ್ನು ಪ್ರಾರಂಭಿಸಿ ಜೀವ ವೈವಿಧ್ಯತೆ ಸಂರಕ್ಷಣೆ, ಮಿಶ್ರ ಬೇಸಾಯ, ಮಣ್ಣು ಮತ್ತು ನೀರಿನ ಸಂರಕ್ಷಣೆ, ಸ್ಥಳೀಯವಾಗಿ ಸಾವಯವ ಗೊಬ್ಬರ ಉತ್ಪಾದನೆ, ಸಾವಯವ ಪ್ರಮಾಣೀಕರಣಕ್ಕೆ ನೆರವು ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.
3. ಸಾವಯವ ಕೃಷಿ ಉತ್ತೇಜನ ಕಾರ್ಯಕ್ರಮಗಳನ್ನು ಮತ್ತಷ್ಟು ಉತ್ತೇಜಿಸುವ ಸಲುವಾಗಿ **ಸಾವಯವ ಕೃಷಿ ಮಿಷನ್** ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ಸದರಿ ಮಿಷನ್ ಅಡಿ ಸಾವಯವ ಕೃಷಿಯ ಬಗ್ಗೆ ಅರಿವು / ಒಲವು ಮೂಡಿಸುವಂತಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
4. 2013-14ನೇ ಸಾಲಿನಿಂದ ಈ ಹಿಂದೆ ಚಾಲ್ತಿಯಲ್ಲಿದ್ದ ಸಾವಯವ ಗ್ರಾಮ ಸ್ಥಳ ಯೋಜನೆಯನ್ನು ಮತ್ತಷ್ಟು ಪರಿಷ್ಕರಣೆಗಳೊಂದಿಗೆ ರಾಜ್ಯಾದ್ಯಂತ **ಸಾವಯವ ಭಾಗ್ಯ** ಯೋಜನೆಯಾಗಿ ಹೋಬಳಿ ಮಟ್ಟದಲ್ಲಿ ಪ್ರಾರಂಭಿಸಿ ತಲಾ 100 ಹೆಕ್ಟೇರ್ ಪ್ರದೇಶದ ಹೋಬಳಿ ಮಟ್ಟದ ಗುಚ್ಛಗಳನ್ನು ಸಾವಯವ ಪ್ರಮಾಣೀಕರಣಕ್ಕೆ ಒಳಪಡಿಸಿ ಅಲ್ಲಿನ ಸಾವಯವ ಕೃಷಿಕರ ಸಂಘಗಳನ್ನು ಸೊಸೈಟಿ ಕಾಯ್ದೆಯಡಿ ನೋಂದಾಯಿಸಲಾಗಿದೆ.
5. ರಾಜ್ಯದ ಸಾವಯವ ಬೆಳೆಗಾರರು ತಾವು ಬೆಳೆದ ಉತ್ಪನ್ನಗಳನ್ನು ಮಾರಾಟಕ್ಕೆ ಸೂಕ್ತ ಮಾರುಕಟ್ಟೆ ಹಾಗೂ ಉತ್ತಮ ಧಾರಣೆ ದೊರಕಿಸಿಕೊಡುವ ನಿಟ್ಟಿನಲ್ಲಿ 2016-17ನೇ ಸಾಲಿನಲ್ಲಿ

		ಸಾವಯವ ಕೃಷಿಕರ ಸಂಘಗಳನ್ನು ಒಗ್ಗೂಡಿಸಿ 15 ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳನ್ನು ರಾಜ್ಯಾದ್ಯಂತ ರಚಿಸಲಾಗಿದೆ. ಈ ಒಕ್ಕೂಟಗಳ ಮೂಲಕ ಸದಸ್ಯ ರೈತರು ಉತ್ಪಾದಿಸಿದ ಸಾವಯವ ಉತ್ಪನ್ನಗಳ ಸಂಸ್ಕರಣೆ, ವರ್ಗೀಕರಣ, ಮೌಲ್ಯವರ್ಧನೆ, ಪ್ಯಾಕಿಂಗ್ ಮತ್ತು ಮಾರಾಟ ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ. 2019-20ನೇ ಸಾಲಿನಲ್ಲಿ ರಾಜ್ಯದಲ್ಲಿ ರಚಿಸಲಾಗಿರುವ 15 ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳು ಸೇರಿ ಕರ್ನಾಟಕ ರಾಜ್ಯ ಸಹಕಾರ ಸಾವಯವ ಉತ್ಪನ್ನಗಳ ಮಾರಾಟ ಮಹಾಮಂಡಳಿ ನಿಯಮಿತವನ್ನು ರಚಿಸಲಾಗಿದೆ.

ಸಂಖ್ಯೆ: HORTI 202 HGM 2021

(ಆರ್.ಶಂಕರ್)

ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3606
ಸದಸ್ಯರ ಹೆಸರು	ಡಾ॥ ಭರತ್ ಶೆಟ್ಟಿ ವೈ. (ಮಂಗಳೂರು ನಗರ ಉತ್ತರ)
ಉತ್ತರಿಸುವ ದಿನಾಂಕ	24-03-2021
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ನೀರು ಮತ್ತು ಗೊಬ್ಬರ ಬಳಕೆಯ ದಕ್ಷತೆಯನ್ನು ಹೆಚ್ಚಿಸಲು ಹಾಗೂ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಸಾಮರ್ಥ್ಯ ಅಭಿವೃದ್ಧಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆಯೇ;	ಕೃಷಿ ಇಲಾಖೆಯು ಕೇಂದ್ರ ಪುರಸ್ಕತ ಯೋಜನೆಯಾದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನದಡಿ ದ್ವಿದಳ ಧಾನ್ಯ, ಒರಟು ಧಾನ್ಯ, ನ್ಯೂಟ್ರಿ ಸಿರಿಧಾನ್ಯ, ಎಣ್ಣೆ ಕಾಳು, ವಾಣಿಜ್ಯ ಬೆಳೆಗಳ ಕಾರ್ಯಕ್ರಮಗಳಡಿ ನೀರು ಮತ್ತು ಗೊಬ್ಬರಗಳ ಸದ್ಬಳಕೆ ಮಾಡಿ ಉತ್ತಮ ಬೆಳೆ ಪದ್ಧತಿಗಳನ್ನು ಅಳವಡಿಸಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಬೆಳೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲಾಗುತ್ತಿದೆ. ಅಲ್ಲದೆ ರೈತರಿಗೆ ತರಬೇತಿಗಳನ್ನು ಬೆಳೆ ಪದ್ಧತಿ ತತ್ವದಡಿ ಆಯೋಜಿಸಲಾಗುತ್ತಿದೆ. ಬೆಳೆ ಕಟಾವಿನ ಹಂತದಲ್ಲಿ ಕ್ಷೇತ್ರೋತ್ಸವ ಹಮ್ಮಿಕೊಂಡು ಇತರೆ ರೈತರಿಗೆ ಈ ಪದ್ಧತಿಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಜಲಾನಯನ ಅಭಿವೃದ್ಧಿ ಇಲಾಖೆಯು ವಿಶ್ವಬ್ಯಾಂಕ್ ನೆರವಿನೊಂದಿಗೆ ಸುಜಲ-III (ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II) ಯೋಜನೆಯನ್ನು ರಾಜ್ಯದ 12 ಜಿಲ್ಲೆಗಳಾದ ಚಾಮರಾಜನಗರ, ದಾವಣಗೆರೆ, ತುಮಕೂರು, ಚಿಕ್ಕಮಗಳೂರು, ರಾಯಚೂರು, ಕೊಪ್ಪಳ, ಕಲಬುರಗಿ, ಯಾದಗಿರಿ, ಗದಗ, ಬೀದರ್, ಬಳ್ಳಾರಿ ಮತ್ತು ವಿಜಯಪುರ ಜಿಲ್ಲೆಗಳ 2534 ಕಿರುಜಲಾನಯನಗಳಲ್ಲಿ 2013-14ನೇ ಸಾಲಿನಿಂದ ಡಿಸೆಂಬರ್-2019 ವರೆಗೆ ಅನುಷ್ಠಾನಗೊಳಿಸಲಾಗಿರುತ್ತದೆ. ಈ ಯೋಜನೆಯಡಿ ರಾಷ್ಟ್ರೀಯ ಮಣ್ಣು ಸಮೀಕ್ಷೆ ಮತ್ತು ಭೂ ಬಳಕೆ ನಿಯೋಜನೆ ಸಂಸ್ಥೆ (NBSS&LUP), ಭಾರತೀಯ ವಿಜ್ಞಾನ ಸಂಸ್ಥೆ (IISc) ಹಾಗೂ ರಾಜ್ಯ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ 2534 ಕಿರುಜಲಾನಯನಗಳ 14.07 ಲಕ್ಷ ಹೆ. ಮಳೆಯಾಶ್ರಿತ ಪ್ರದೇಶದಲ್ಲಿ ಭೂ-ಸಂಪನ್ಮೂಲ ಸಮೀಕ್ಷೆ (Land Resource Inventory-LRI) ಕೈಗೊಂಡು ಮಣ್ಣಿನ ಗುಣಧರ್ಮಗಳ ಅಧ್ಯಯನ ಮಾಡಿ

	-	ವೈಜ್ಞಾನಿಕ ತಾಂತ್ರಿಕ ಮಾಹಿತಿಗಳನ್ನು ಸಂಗ್ರಹಿಸಲಾಗಿರುತ್ತದೆ. ಈ ಮಾಹಿತಿ ಆಧರಿಸಿ ಸ್ಥಳ ನಿರ್ದಿಷ್ಟ ತಾಂತ್ರಿಕ ಶಿಫಾರಸ್ಸುಗಳನ್ನು ಒಳಗೊಂಡ ಭೂ-ಸಂಪನ್ಮೂಲ ಚೀಟಿಗಳನ್ನು (LRI card) ತಯಾರಿಸಿ ರೈತರಿಗೆ ವಿತರಿಸಿ, ಮಣ್ಣಿನ ಗುಣಧರ್ಮ ಹಾಗೂ ಫಲವತ್ತತೆ ಆಧಾರದ ಮೇಲೆ ಸಮರ್ಪಕವಾಗಿ ನೀರು ಮತ್ತು ಮಣ್ಣಿನ ಸಂರಕ್ಷಣೆ ಕ್ರಮಗಳನ್ನು ಅಳವಡಿಸಿಕೊಳ್ಳುವ ಬಗ್ಗೆ, ಮತ್ತು ಸೂಕ್ತ ಪೋಷಕಾಂಶಗಳ ಬಳಕೆ ಮಾಡಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ರೈತರಿಗೆ ಅರಿವು ಮೂಡಿಸಲು ಗ್ರಾಮ ಮಟ್ಟದಲ್ಲಿ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸುಜಲ-III ಯೋಜನೆಯಡಿ 2379 ತರಬೇತಿಗಳನ್ನು ಏರ್ಪಡಿಸಿ 376273 ಭೂ-ಸಂಪನ್ಮೂಲ ಚೀಟಿಗಳನ್ನು ವಿತರಿಸಲಾಗಿರುತ್ತದೆ. ಮುಂದುವರೆದು, ಸದರಿ ಜಿಲ್ಲೆಗಳಲ್ಲಿ ಸುಜಲ-III ನಿರ್ಗಮನ ಕಾರ್ಯಕ್ರಮದಡಿ 2020-21ನೇ ಸಾಲಿನಲ್ಲಿ ಫೆಬ್ರುವರಿ-2021 ಅಂತ್ಯದವರೆಗೆ 1927 ತರಬೇತಿಗಳನ್ನು ಏರ್ಪಡಿಸಿ 67168 ಭೂ-ಸಂಪನ್ಮೂಲ ಚೀಟಿಗಳನ್ನು ವಿತರಿಸಲಾಗಿರುತ್ತದೆ.
ಆ	ಈ ಉದ್ದೇಶಕ್ಕಾಗಿ ರಾಜ್ಯದಾದ್ಯಂತ ಅಭಿವೃದ್ಧಿ ಪಡಿಸಲಾದ ಪ್ರಾತ್ಯಕ್ಷಿಕೆಗಳು ಎಷ್ಟು;	ಕೃಷಿ ಇಲಾಖೆಯಲ್ಲಿ 2020-21 ನೇ ಸಾಲಿಗೆ ರಾಜ್ಯದಲ್ಲಿ ಒಟ್ಟು 106320 ಲಕ್ಷ ಹೆಕ್ಟೇರ್ ಗಳಲ್ಲಿ ಪ್ರಾತ್ಯಕ್ಷಿಕೆ ಗುರಿಯನ್ನು ಹೊಂದಿದ್ದು, ಪ್ರಸ್ತುತ 95403 ಸಾವಿರ ಹೆಕ್ಟೇರ್ ಪ್ರಗತಿ ಸಾಧಿಸಲಾಗಿರುತ್ತದೆ. ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಈ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡಿರುವುದಿಲ್ಲ.
ಇ	ಈ ಯೋಜನೆಗೆ ಎಷ್ಟು ಹುದ್ದೆಗಳನ್ನು ಮೀಸಲು ಇರಿಸಲಾಗಿದೆ ಮತ್ತು ಯೋಜನೆಯ ಮಾನದಂಡಗಳೇನು?	ಈ ಯೋಜನೆಗೆ ಪ್ರತ್ಯೇಕವಾಗಿ ಹುದ್ದೆಗಳನ್ನು ಮೀಸಲು ಇರಿಸಲಾಗಿರುವುದಿಲ್ಲ. ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಸುಜಲ-III_ಸದರಿ ಯೋಜನೆಯನ್ನು ಅನುಷ್ಠಾನ ಮಾಡಲು ಸರ್ಕಾರದ ಆದೇಶ ಸಂಖ್ಯೆ (ಸಂ: AD/164/AML/2011, ದಿನಾಂಕ: 05.07.2012) ಅನುಸಾರ ರಾಜ್ಯದ 07 ಹಿಂದುಳಿದ ಜಿಲ್ಲೆಗಳಾದ ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ, ಗದಗ, ದಾವಣಗೆರೆ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ 28 ತಾಲ್ಲೂಕುಗಳಲ್ಲಿ ಹಿಂದಿನ IWMP (ಸಮಗ್ರ ಜಲಾನಯನ ನಿರ್ವಹಣೆ ಯೋಜನೆ) ಯೋಜನೆಯಡಿ ಬಡತನದ ಸೂಚ್ಯಂಕ, ಮಳೆಯಾಶ್ರಿತ ಕೃಷಿಗೆ ಒಳಪಟ್ಟ ಪ್ರದೇಶ, ಕುಡಿಯುವ ನೀರಿನ ಲಭ್ಯತೆ, ಬಂಜರು ಪ್ರದೇಶದ ಭೂಮಿ, ಅಂತರ್ಜಲದ ಸ್ಥಿತಿ, ಭೂಮಿಯ ಉತ್ಪಾದನಾ ಸಾಮರ್ಥ್ಯ, ತೇವಾಂಶ ಸೂಚಕ, ಶೇಕಡಾವಾರು ಸಣ್ಣ/ಅತಿಸಣ್ಣ ರೈತರ ಪ್ರಮಾಣ ಇತ್ಯಾದಿ ಮಾನದಂಡಗಳ ಅನುಸಾರ ಗುರುತಿಸಲಾದ IWMP ಯೋಜನಾ ವ್ಯಾಪ್ತಿಯ 935 ಮಳೆಯಾಶ್ರಿತ ಕಿರುಜಲಾನಯನಗಳ 4.56 ಲಕ್ಷ ಹೆಕ್ಟೇರ್ ಪ್ರದೇಶವನ್ನು ಭೂ-ಸಂಪನ್ಮೂಲ ಸಮೀಕ್ಷೆ ಮಾಡಲು ಆಯ್ಕೆ ಮಾಡಲಾಗಿರುತ್ತದೆ.

		ದಿನಾಂಕ: 31.05.2014 ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ 2ನೇ Project Empowered Committee (PEC) ಸಭೆಯಲ್ಲಿ ತುಮಕೂರು, ವಿಜಯಪುರ, ಚಿಕ್ಕಮಗಳೂರು ಮತ್ತು ರಾಯಚೂರು ಜಿಲ್ಲೆಗಳನ್ನು ಸಹ ಯೋಜನೆ ಅನುಷ್ಠಾನಕ್ಕೆ ಆಯ್ಕೆ ಮಾಡಲಾಗಿದ್ದು, ಒಟ್ಟಾರೆ 2534 ಕಿರು ಜಲಾನಯನಗಳಲ್ಲಿ 14.07 ಲಕ್ಷ ಹೆಕ್ಟೇರ್ ಮಳೆಯಾಶ್ರಿತ ಪ್ರದೇಶದಲ್ಲಿ ಭೂ-ಸಂಪನ್ಮೂಲ ಸಮೀಕ್ಷೆ ಕೈಗೊಂಡು ವಿಶ್ವಬ್ಯಾಂಕ್ ನೆರವಿನೊಂದಿಗೆ ವಿಶ್ವಬ್ಯಾಂಕ್ ನಿಯಮಗಳ ಅನುಸಾರ ಈ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗಿರುತ್ತದೆ.

ಸಂಖ್ಯೆ: AGRI-ACT/61/ 2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3612

ಸದಸ್ಯರ ಹೆಸರು : ಶ್ರೀ ಅನಿಲ್ ಚಿಕ್ಕಮಾದು

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸುವ ದಿನಾಂಕ : 24-03-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ರಾಜ್ಯಾದ್ಯಂತ ನಮ್ಮ ಕಾರ್ಗೋ ಸೇವೆ ಪ್ರಾರಂಭ ಮಾಡಲಾಗಿದೆಯೇ; ಹಾಗಿದ್ದಲ್ಲಿ, ಸದರಿ ಸೇವೆಗೆ ನಿಗಧಿಪಡಿಸಿದ ಅನುದಾನವೆಷ್ಟು; (ವಿವರ ನೀಡುವುದು)	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ವತಿಯಿಂದ ನಮ್ಮ ಕಾರ್ಗೋ ಸೇವೆಗಳನ್ನು ದಿನಾಂಕ: 01-03-2021ರಿಂದ ಪ್ರಾರಂಭ ಮಾಡಲಾಗಿದೆ. ಸದರಿ ಸೇವೆಗೆ ಸರ್ಕಾರದಿಂದ ಅನುದಾನ ನಿಗದಿಪಡಿಸಿರುವುದಿಲ್ಲ.
ಆ)	ರಾಜ್ಯದಲ್ಲಿ ಯಾವ ಯಾವ ಸ್ಥಳಗಳಲ್ಲಿ (ಬಸ್ ನಿಲ್ದಾಣಗಳಲ್ಲಿ) ಈ ಸೇವೆಯನ್ನು ಆರಂಭಿಸಲಾಗಿದೆ, ಸದರಿ ನಿಲ್ದಾಣಗಳಿಗೆ ಸೇವೆ ಕೈಗೊಳ್ಳಲು ಅನುದಾನ ಬಿಡುಗಡೆಗೊಳಿಸಲಾಗಿದೆಯೇ; ಹಾಗೂ ಇನ್ನೂ ಹೆಚ್ಚಿನ ಸ್ಥಳಗಳಿಗೆ ವಿಸ್ತರಿಸುವಲ್ಲಿ ಸರ್ಕಾರದ ಕ್ರಮಗಳೇನು; (ಜಿಲ್ಲಾವಾರು ವಿವರ ನೀಡುವುದು)	ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಈ.ಕ.ರ.ಸಾ.ಸಂಸ್ಥೆಗಳ ವ್ಯಾಪ್ತಿಯ 88 ಬಸ್ ನಿಲ್ದಾಣಗಳಲ್ಲಿ ಹಾಗೂ ಅಂತರ ರಾಜ್ಯದ 21 ಬಸ್ ನಿಲ್ದಾಣಗಳಲ್ಲಿ ಒಟ್ಟಾರೆ 109 ಸ್ಥಳಗಳಲ್ಲಿ ಪಾರ್ಸಲ್ ಕೌಂಟರ್ ತೆರೆಯುವ ವ್ಯವಸ್ಥೆಯನ್ನು ಮೊದಲ ಹಂತದಲ್ಲಿ ಮಾಡಲಾಗಿದೆ. ಸದರಿ ನಿಲ್ದಾಣಗಳಿಗೆ ಸೇವೆ ಕೈಗೊಳ್ಳಲು ಸರ್ಕಾರದಿಂದ ಅನುದಾನ ಬಿಡಗಡೆಗೊಳಿಸಿರುವುದಿಲ್ಲ. ಮುಂದಿನ ಹಂತದಲ್ಲಿ ಬೇಡಿಕೆಗನುಗುಣವಾಗಿ ಎಲ್ಲಾ ಜಿಲ್ಲಾ /ತಾಲ್ಲೂಕು / ಪ್ರಮುಖ ಸ್ಥಳಗಳಿಗೆ ವಿಸ್ತರಿಸಲಾಗುವುದು. ಪ್ರಸ್ತುತ ಜಾರಿಯಲ್ಲಿರುವ ಜಿಲ್ಲಾವಾರು ಬಸ್ ನಿಲ್ದಾಣಗಳಲ್ಲಿನ ಕೌಂಟರ್‌ಗಳ ವಿವರಗಳನ್ನು ಅನುಬಂಧ-ಅರಲ್ಲಿ ನೀಡಲಾಗಿದೆ.
ಇ)	ಈ ಸೇವೆಯನ್ನು ಕೈಗೊಳ್ಳಲು ಸಿಬ್ಬಂದಿ ನೇಮಕ ಮಾಡಲಾಗಿದೆಯೇ; ಸಿಬ್ಬಂದಿಗಳನ್ನು ಪೂರೈಸಲಾಗುವುದೇ; ಅಥವಾ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲಾಗುವುದೇ? (ಸಿಬ್ಬಂದಿಗಳ ನೇಮಕಾತಿಯ ಸಂಪೂರ್ಣ ವಿವರ ಹಾಗೂ ವೇತನದ ವಿವರ ನೀಡುವುದು)	ಪಾರ್ಸಲ್ ಸೇವೆಗಳನ್ನು ನಿರ್ವಹಿಸಲು ಸಾರಿಗೆ ಸಂಸ್ಥೆಗಳಿಂದ ಸಿಬ್ಬಂದಿಗಳನ್ನು ನೇಮಕಗೊಳಿಸಿರುವುದಿಲ್ಲ. ಯೋಜನೆಯನ್ನು ಅನುಷ್ಠಾನಗೊಳಿಸಲು ಅಂದರೆ, ಕೌಂಟರ್‌ಗಳ ನಿರ್ವಹಣೆ ಮಾಡಲು ಬಿಸಿನೆಸ್ ಫೆಸಿಲಿಟೇಟರ್ ಹಾಗೂ ಅಗತ್ಯ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಕೊಡಲು ಸಾಫ್ಟ್‌ವೇರ್ ಸಲ್ಯೂಶನ್ ಪ್ರೊವೈಡರ್, ಇವರುಗಳನ್ನು ಎರಡು ಪ್ರತ್ಯೇಕ ಟೆಂಡರ್‌ಗಳಲ್ಲಿ ಆಯ್ಕೆಗೊಳಿಸಲಾಗಿರುತ್ತದೆ. ಕರಾರಿನಂತೆ ಕೌಂಟರುಗಳಿಗೆ ಸಂಸ್ಥೆಯ ನಿಲ್ದಾಣಗಳಲ್ಲಿ ಸ್ಥಳಾವಕಾಶ ನೀಡಲಾಗಿದ್ದು, ಉಳಿದಂತೆ ಎಲ್ಲಾ ಕೆಲಸಗಳನ್ನು ಸದರಿಯವರೇ ನಿರ್ವಹಿಸುತ್ತಾರೆ.

ಸಂಖ್ಯೆ: ಟಿಡಿ 158 ಟಿಸಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

ಅನುಬಂಧ - ಅ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಪಾರ್ಸೆಲ್ ಸೇವಾ ಕೇಂದ್ರಗಳು

ಕ್ರ ಸಂ	ಜಿಲ್ಲೆ	ಬಸ್ ನಿಲ್ದಾಣ
1	ಬೆಂಗಳೂರು ನಗರ	ಕೆಂಪೇಗೌಡ ಬಸ್ ನಿಲ್ದಾಣ: ಟರ್ಮಿನಲ್-01, ಟರ್ಮಿನಲ್-2, ಟರ್ಮಿನಲ್-2ಎ
2		ಮೈಸೂರು ರಸ್ತೆ ಬಸ್ ನಿಲ್ದಾಣ
3		ಶಾಂತಿನಗರ
4	ರಾಮನಗರ	ರಾಮನಗರ
5		ಚನ್ನಪಟ್ಟಣ
6		ಕನಕಪುರ
7		ಮಾಗಡಿ
8	ತುಮಕೂರು	ತುಮಕೂರು
9		ತಿಪಟೂರು
10		ಶಿರಾ
11	ಕೋಲಾರ	ಕೋಲಾರ
12		ಮುಳಬಾಗಿಲು
13	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ
14		ಚಿಂತಾಮಣಿ
15		ದೊಡ್ಡಬಳ್ಳಾಪುರ
16		ಶಿಡ್ಲಘಟ್ಟ
17	ಚಾಮರಾಜನಗರ	ಚಾಮರಾಜನಗರ
18	ಮೈಸೂರು	ನಂಜನಗೂಡು
19		ಮೈಸೂರು ಗ್ರಾ ಬಸ್ ನಿಲ್ದಾಣ
20	ಮಂಡ್ಯ	ಮಂಡ್ಯ
21	ಹಾಸನ	ಹಾಸನ
22		ಚನ್ನರಾಯಪಟ್ಟಣ
23	ಚಿಕ್ಕಮಗಳೂರು	ಚಿಕ್ಕಮಗಳೂರು
24		ಅರಸೀಕೆರೆ
25	ದಕ್ಷಿಣ ಕನ್ನಡ	ಮಂಗಳೂರು
26		ಕುಂದಾಪುರ
27		ಪುತ್ತೂರು
28	ಉಡುಪಿ	ಉಡುಪಿ
29	ಮಡಿಕೇರಿ	ಮಡಿಕೇರಿ
30		ವೀರಾಜ್ ಪೇಟೆ
31	ದಾವಣಗೆರೆ	ದಾವಣಗೆರೆ
32	ಚಿತ್ರದುರ್ಗ	ಚಿತ್ರದುರ್ಗ
33		ಹಿರಿಯೂರು
34	ಶಿವಮೊಗ್ಗ	ಶಿವಮೊಗ್ಗ
35		ಭದ್ರಾವತಿ
36	ಕಲ್ಬುರ್ಗಿ	ಸೇಡಂ
37		ಚಿಂಚೋಳಿ
38		ಕೇಂದ್ರ ಬಸ್ ನಿಲ್ದಾಣ (ಕಲ್ಬುರ್ಗಿ)
39		ಆಳಂದ
40		ಅಫ್‌ಜಲ್‌ಪುರ
41	ಬೀದರ್	ಕೇಂದ್ರ ಬಸ್ ನಿಲ್ದಾಣ, ಬೀದರ್
42		ಬಸವಕಲ್ಯಾಣ
43		ಹುಮ್ನಾಬಾದ್
44	ಯಾದಗಿರಿ	ಕೇಂದ್ರ ಬಸ್ ನಿಲ್ದಾಣ , ಯಾದಗಿರಿ
45		ಶಹಾಪುರ
46		ಸುರಪುರ
47	ರಾಯಚೂರು	ಕೇಂದ್ರ ಬಸ್ ನಿಲ್ದಾಣ, ರಾಯಚೂರು
48		ಲಿಂಗಸೂರು
49		ಸಿಂಧನೂರು
50		ದೇವದುರ್ಗ
51	ಕೊಪ್ಪಳ	ಕೇಂದ್ರ ಬಸ್ ನಿಲ್ದಾಣ, ಕೊಪ್ಪಳ
52		ಕುಷ್ಟಗಿ
53		ಗಂಗಾವತಿ
54	ಬಳ್ಳಾರಿ	ಕೇಂದ್ರ ಬಸ್ ನಿಲ್ದಾಣ, ಬಳ್ಳಾರಿ
55		ನಗರ ಬಸ್ ನಿಲ್ದಾಣ, ಬಳ್ಳಾರಿ
56		ಶಿರಗುಪ್ಪ
57		ಕೇಂದ್ರ ಬಸ್ ನಿಲ್ದಾಣ, ಹೊಸಪೇಟೆ

59	ವಿಜಯಪುರ	ಕೇಂದ್ರ ಬಸ್ ನಿಲ್ದಾಣ, ವಿಜಯಪುರ
60		ಮುದ್ದೇಬಿಹಾಳ
61		ಸಿಂಧಗಿ
62		ಇಂಡಿ
63	ಧಾರವಾಡ	ಹುಬ್ಬಳ್ಳಿ ಹಳೇ ಬಸ್ ನಿಲ್ದಾಣ / ಹೊಸ ಬಸ್ ನಿಲ್ದಾಣ
64		ಧಾರವಾಡ ಬಸ್ ನಿಲ್ದಾಣ
65		ಸವದತ್ತಿ
66	ಹಾವೇರಿ	ಹಾವೇರಿ
67		ರಾಣೆಬೆನ್ನೂರು
68		ಹಾನಗಲ್
69	ಗದಗ	ಗದಗ ಬಸ್ ನಿಲ್ದಾಣ
70		ಲಕ್ಷ್ಮೇಶ್ವರ
71		ನರಗುಂದ
72	ಉತ್ತರ ಕನ್ನಡ	ಸಿರ್ಸಿ ಹೊಸ ಬಸ್ ನಿಲ್ದಾಣ
73		ಭಟ್ಕಳ್
74		ಕುಮಟಾ
75		ಕಾರವಾರ
76	ಬೆಳಗಾಂ	ಬೆಳಗಾವಿ ಕೇಂದ್ರ ಬಸ್ ನಿಲ್ದಾಣ
77		ಬೈಲಹೊಂಗಲ
78		ರಾಮದುರ್ಗ
79	ಬೆಳಗಾಂ	ಚಿಕ್ಕೋಡಿ
80		ಗೋಕಾಕ
81		ನಿಪ್ಪಾಣಿ
82		ಅಥಣಿ
83		ಸಂಕೇಶ್ವರ
84	ಬಾಗಲಕೋಟೆ	ಬಾಗಲಕೋಟೆ
85		ಜಮಖಂಡಿ
86		ಬಾದಾಮಿ
87		ಇಳಕಲ್
88		ಮುಧೋಳ
89	ಅಂತರರಾಜ್ಯ ಬಸ್ ನಿಲ್ದಾಣಗಳು	ಮುಂಬೈ
90		ಪುಣೆ
91		ಪಣಜಿ
92		ಮಾರ್ಗೋವಾ
93		ಕೊಲ್ಹಾಪುರ
94		ಹೈದರಾಬಾದ್
95		ತಿರುಪತಿ
96		ವಿಜಯವಾಡ
97		ಅನಂತಪುರ
98		ಚೆನ್ನೈ
99		ಊಟಿ
100		ಕೊಯಮತ್ತೂರು
101		ಹೊಸೂರು
102		ಎರ್ನಾಕುಲಂ
103		ಕೋಝಿಕೋಡ್
104		ಮಂತ್ರಾಲಯ
105		ಸೋಲ್ಹಾಪುರ
106		ಶಿರಡಿ
107		ಇಂಚಲಕಾರಂಜಿ
108		ಮೀರಜ್
109		ಸಾಂಗ್ಲಿ

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **3614**

ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 24-03-2021

ಕ್ರ ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಸಾರಿಗೆ ಇಲಾಖೆಯಲ್ಲಿ ಮಂಜೂರಾದ ವಿವಿಧ ವೃಂದದ ಹಾಗೂ ಶ್ರೇಣಿಯ ಹುದ್ದೆಗಳ ಸಂಖ್ಯೆ ಎಷ್ಟು;	ಸಾರಿಗೆ ಇಲಾಖೆಯಲ್ಲಿ ಮಂಜೂರಾದ, ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳ ವಿವರಗಳನ್ನು ದಿನಾಂಕ:01-02-2021 ರಲ್ಲಿರುವಂತೆ ಅನುಬಂಧದಲ್ಲಿ ಒದಗಿಸಲಾಗಿದೆ.
(ಆ)	ವಿವಿಧ ವೃಂದದ ಹಾಗೂ ಶ್ರೇಣಿಯ ಹುದ್ದೆಗಳಲ್ಲಿ ಎಷ್ಟು ಜನ ಕಾರ್ಯ ನಿರ್ವಹಿಸುತ್ತಿದ್ದಾರೆ; ಎಷ್ಟು ಹುದ್ದೆಗಳು ಖಾಲಿ ಇರುತ್ತವೆ; (ಶ್ರೇಣಿವಾರು ಹುದ್ದೆಗಳ ಸಂಪೂರ್ಣ ಮಾಹಿತಿ ನೀಡುವುದು)	
(ಇ)	ವಿವಿಧ ವೃಂದದ ಹಾಗೂ ಶ್ರೇಣಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಇದುವರೆಗೆ ಜರುಗಿಸಿರುವ ಕ್ರಮಗಳೇನು;	ಸರ್ಕಾರವು ಈಗಾಗಲೇ ಅನುಮತಿ ನೀಡಿರುವ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಆ ಸಂಬಂಧ ಆಯ್ಕೆ / ನೇಮಕಾತಿ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ. ಇನ್ನುಳಿದ ಖಾಲಿ ಹುದ್ದೆಗಳ ಪೈಕಿ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವ ಬಗ್ಗೆ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ: 06-07-2020 ರಲ್ಲಿ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುತ್ತದೆ. ಅಲ್ಲದೆ, ಮುಂಬಡ್ತಿಗೆ ಮೀಸಲಿರುವ ಖಾಲಿ ಹುದ್ದೆಗಳನ್ನು ಹಂತಹಂತವಾಗಿ ಬಡ್ತಿ ನೀಡುವ ಮೂಲಕ ತುಂಬಲಾಗುತ್ತಿದೆ.

(ಈ)	ವಿವಿಧ ವೃಂದ ಹಾಗೂ ಶ್ರೇಣಿಯ ಹುದ್ದೆಗಳಿಗೆ ಬೇರೆ ಇಲಾಖೆಯಿಂದ ಅಧಿಕಾರಿ ನೌಕರರನ್ನು ನಿಯೋಜನೆ ಆಧಾರದ ಮೇಲೆ ನೇಮಿಸಿ, ತದನಂತರ ಈ ಅಧಿಕಾರಿ / ನೌಕರರನ್ನು ಸಾರಿಗೆ ಇಲಾಖೆಯಲ್ಲಿಯೇ ವಿಲೀನಗೊಳಿಸಲಾಗಿದೆಯೇ;	ಹೌದು, ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳು 1977 ರ ನಿಯಮ-16(ಎ)(ii) ರ ಪ್ರಕಾರ ಸರ್ಕಾರದ ವತಿಯಿಂದ ಸಾರಿಗೆ ಇಲಾಖೆಯಲ್ಲಿ ವಿವಿಧ ವೃಂದದ ಹುದ್ದೆಗಳಿಗೆ ಬೇರೆ ಇಲಾಖೆಯಿಂದ ನೌಕರರುಗಳನ್ನು ಸಾರಿಗೆ ಇಲಾಖೆಯಲ್ಲಿ ಖಾಯಂ ವರ್ಗಾವಣೆಯ ಮುಖಾಂತರ ನೇಮಿಸಲಾಗಿದೆ. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳು 1977 ರ ನಿಯಮ-16(ಎ)(ii) ರನ್ವಯ ಒಂದು ಘಟಕದಲ್ಲಿನ ಹುದ್ದೆಯಿಂದ ಜೇಷ್ಟತೆಯ ಮತ್ತೊಂದು ಘಟಕದಲ್ಲಿನ ಅದೇ ಕೇಡರ್‌ನಲ್ಲಿನ ಸಮಾನ ಹುದ್ದೆಗೆ ವರ್ಗಾವಣೆ ಮೂಲಕ ಸೇವಾವಧಿಯಲ್ಲಿ ಒಂದು ಬಾರಿ ಮಾತ್ರ ಖಾಯಂ ವರ್ಗಾವಣೆಯ ಮೂಲಕ ವಿಲೀನಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಮೇಲ್ಕಂಡ ನಿಯಮಗಳನ್ವಯ ಕಲ್ಪಿಸಿರುವ ಅವಕಾಶದನ್ವಯ ಸಾರಿಗೆ ಇಲಾಖೆಗೆ ಬೇರೆ ಇಲಾಖೆಯ ನೌಕರರುಗಳನ್ನು ಖಾಯಂ ವರ್ಗಾವಣೆಯ ಮೂಲಕ ನೇಮಕ ಮಾಡಿ ಕೊಳ್ಳಲಾಗಿರುವುದರಿಂದ, ಸದರಿ ನೇಮಕಾತಿಯನ್ನು ರದ್ದುಪಡಿಸಿ ಅವರುಗಳ ಮಾತೃ ಇಲಾಖೆಗೆ ಹಿಂದಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.
ಉ)	ಈ ರೀತಿ ವಿಲೀನಗೊಳಿಸಲು ಸರ್ಕಾರದಿಂದ ಹೊರಡಿಸಿರುವ ಮಾರ್ಗಸೂಚಿಗಳೇನು;	
ಊ)	ಸರ್ಕಾರದಿಂದ ಅನುಮೋದನೆಗೊಂಡ ಮಾರ್ಗಸೂಚಿಗಳಿಲ್ಲದಿದ್ದಲ್ಲಿ ಅಥವಾ ಈ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಕಾನೂನು ಬಾಹಿರವಾಗಿ ಕೆಲವು ಅಧಿಕಾರಿಗಳನ್ನು ಸಾರಿಗೆ ಇಲಾಖೆಯಲ್ಲಿ ವಿಲೀನಗೊಳಿಸಿದ್ದಲ್ಲಿ, ಅಂತಹ ಅಧಿಕಾರಿಗಳ ವಿಲೀನವನ್ನು ಸರ್ಕಾರ ರದ್ದುಗೊಳಿಸಿ, ಅವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದುರುಗಿಸಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)	

ಟಿಡಿ 65 ಟಿಡಿಕ್ಯೂ 2021

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3614 ಕ್ಕೆ ಅನುಬಂಧ.

ದಿನಾಂಕ: 01-02-2021 ರಂತೆ ಸಾರಿಗೆ ಇಲಾಖೆಯ ಹುದ್ದೆಗಳ ವಿವರ

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳ ವಿವರ		
		ಮಂಜೂರಾತಿ	ಕಾರ್ಯನಿರತ	ಖಾಲಿ
1	ಸಾರಿಗೆ ಆಯುಕ್ತರು	1	1	0
2	ಅಧ್ಯಕ್ಷಾಧಿಕಾರಿಗಳು	1	1	0
3	ಅಪರ ಸಾರಿಗೆ ಆಯುಕ್ತರು	6	6	0
4	ಜಂಟಿ ಸಾರಿಗೆ ಆಯುಕ್ತರು **(1 ಹುದ್ದೆ – ದೇವರಾಜ್ ಅರಸ್ ಟ್ರಕ್ ಟರ್ಮಿನಲ್)**	7	7	0
5	ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು	3	2	1
6	ಪ್ರಾದೇಶಿಕ ಸಾರಿಗೆ ಅಧಿಕಾರಿ	47	42	5
7	ಎ-ಗ್ರೂಪ್ ಅಧಿಕಾರಿ (ಯೋಜನೆ)	1	0	1
8	ಎ-ಗ್ರೂಪ್ ಅಧಿಕಾರಿ (ಶಿಕ್ಷಣ)	1	1	0
9	ಎ-ಗ್ರೂಪ್ ಅಧಿಕಾರಿ (ಆರ್ಥಿಕ)	1	0	1
10	ಎ-ಗ್ರೂಪ್ ಅಧಿಕಾರಿ (ಲೋಕೋಪಯೋಗಿ)	1	1	0
11	ಎ-ಗ್ರೂಪ್ ಅಧಿಕಾರಿ (ಪೋಲೀಸ್)	1	1	0
12	ಎ-ಗ್ರೂಪ್ ಅಧಿಕಾರಿ (ಆರೋಗ್ಯ)	1	1	0
13	ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ	103	27	76
14	ಕಾನೂನು ಅಧಿಕಾರಿ	1	1	0
15	ಸಹಾಯಕ ಕಾನೂನು ಅಧಿಕಾರಿ	2	1	1
16	ಸಾಂಖ್ಯಿಕ ಸಹಾಯಕ ನಿರ್ದೇಶಕರು (ನಿಯೋಜನೆ ಹುದ್ದೆ)	1	1	0
17	ಆರ್ಥಿಕ ಸಲಹೆಗಾರರು (ನಿಯೋಜನೆ ಹುದ್ದೆ)	2	1	1
18	ಲೆಕ್ಕಾಧಿಕಾರಿಗಳು (ನಿಯೋಜನೆ ಹುದ್ದೆ)	6	0	6
19	ಸಿಸ್ಟಮ್ ಮ್ಯಾನೇಜರ್ (ನಿಯೋಜನೆ ಹುದ್ದೆ)	1	0	1
20	ಸಿಸ್ಟಮ್ ಆನಲಿಸ್ಟ್ (ನಿಯೋಜನೆ ಹುದ್ದೆ)	2	0	2
21	ಹಿರಿಯ ಪ್ರೋಗ್ರಾಮರ್ (ನಿಯೋಜನೆ ಹುದ್ದೆ)	2	0	2
22	ಕಿರಿಯ ಪ್ರೋಗ್ರಾಮರ್ (ನಿಯೋಜನೆ ಹುದ್ದೆ)	7	0	7
23	ಕನ್ಸೋಲ್ ಆಪರೇಟರ್	2	1	1
24	ಕೇ.ಸ್ಥಾ.ಸ/ತೆ.ಖ.ಅ/ಸಹಾಯಕ ಕಾರ್ಯದರ್ಶಿ	15	12	3
25	ಹಿರಿಯ ಮೋಟಾರು ವಾಹನ ನಿರೀಕ್ಷಕರು	214	93	121
26	ಮೋಟಾರು ವಾಹನ ನಿರೀಕ್ಷಕರು	430	123	307
27	ಅಧೀಕ್ಷಕರು	160	147	13
28	ಲೆಕ್ಕಾಧೀಕ್ಷಕರು (ನಿಯೋಜನೆ ಹುದ್ದೆ)	26	22	4
29	ಸಹಾಯಕ ಸಾಂಖ್ಯಿಕ ಅಧಿಕಾರಿ (ನಿಯೋಜನೆ ಹುದ್ದೆ)	3	3	0
30	ಲೆಕ್ಕ ಸಹಾಯಕರು (ನಿಯೋಜನೆ ಹುದ್ದೆ)	36	18	18
31	ಶೀಘ್ರಲಿಪಿಗಾರರು	49	25	24
32	ಪ್ರಥಮ ದರ್ಜೆ ಸಹಾಯಕರು	436	281	155
33	ದ್ವಿತೀಯ ದರ್ಜೆ ಸಹಾಯಕರು	546	192	354
34	ಬೆರಳಚ್ಚುಗಾರರು	116	35	81
35	ಚಾಲಕರು	165	91	74
36	ಅಟೆಂಡರ್/ಪ್ರೊಸೆಸ್ ಸರ್ವರ್/ದಫೇದಾರ್	31	7	24
37	ಖಜಾನೆ ರಕ್ಷಕ	40	9	31
38	ದಲಾಯತ್/ಕಾವಲುಗಾರ/ಜವಾನ ಕಮ್ ರಕ್ಷಕ/ಸ್ವೀಪರ್	345	151	194
	ಒಟ್ಟು	**2812**	**1304**	**1508**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3617

ಸದಸ್ಯರ ಹೆಸರು : ಶ್ರೀ. ರೇವಣ್ಣ ಹೆಚ್.ಡಿ (ಹೊಳೇನರಸೀಪುರ)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 24.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಯಾಂತ್ರೀಕರಣ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನವೆಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು).	ರಾಜ್ಯದಲ್ಲಿ ಕಳೆದ 03 ವರ್ಷಗಳಿಂದ ತೋಟಗಾರಿಕಾ ಯಂತ್ರೋಪಕರಣಗಳಿಗಾಗಿ ಬಿಡುಗಡೆಯಾಗಿರುವ ಅನುದಾನದ ವಿವರ ಕೆಳಕಂಡಂತಿದೆ;

ವರ್ಷ	ಬಿಡುಗಡೆಯಾಗಿರುವ ಅನುದಾನ (ರೂ.ಲಕ್ಷಗಳು)
2017-18	593.67
2018-19	3511.15
2019-20	4589.30

ಜಿಲ್ಲಾವಾರು ಸಂಪೂರ್ಣ ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.

ಕ್ರ.ಸಂ	ಪ್ರಶ್ನೆ	ಉತ್ತರ
ಆ)	ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಯಾಂತ್ರೀಕರಣ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನವೆಷ್ಟು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು).	ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಯಾಂತ್ರೀಕರಣ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನದ ತಾಲ್ಲೂಕುವಾರು ಸಂಪೂರ್ಣ ವಿವರ ಕೆಳಕಂಡಂತಿದೆ;

ತಾಲ್ಲೂಕು	ಬಿಡುಗಡೆಯಾಗಿರುವ ಅನುದಾನ (ರೂ.ಲಕ್ಷಗಳು)		
	2017-18	2018-19	2019-20
ಆಲೂರು	2.50	11.59	60.75
ಅರಕಲಗೂಡು	1.75	17.00	67.50
ಅರಸೀಕೆರೆ	2.00	3.00	63.25
ಬೇಲೂರು	2.75	8.10	50.25
ಚನ್ನರಾಯಪಟ್ಟಣ	2.75	8.90	81.75
ಹಾಸನ	1.75	21.41	69.25
ಹೊಳೆನರಸೀಪುರ	1.75	8.50	12.75
ಸಕಲೇಶಪುರ	0.00	0.00	47.75
ಒಟ್ಟು	15.25	78.50	453.25

೩)	ಯಾಂತ್ರೀಕರಣ ಯೋಜನೆಯಡಿ ಅನುದಾನವನ್ನು ಬಿಡುಗಡೆಗೊಳಿಸಲು ಅನುಸರಿಸಲಾಗುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಯಾಂತ್ರೀಕರಣ ಯೋಜನೆಯಡಿ ಅನುದಾನವನ್ನು ಬಿಡುಗಡೆಗೊಳಿಸಲು ಅನುಸರಿಸಲಾಗುವ ಮಾನದಂಡಗಳು ಕೆಳಗಿನಂತಿವೆ; • ಜಿಲ್ಲೆಗಳ ಬೇಡಿಕೆಯನುಸಾರ • ಜಿಲ್ಲೆಯ ತೋಟಗಾರಿಕೆ ಬೆಳೆಗಳ ಪ್ರದೇಶಕ್ಕನುಗುಣವಾಗಿ • ಅನುದಾನ ಲಭ್ಯತೆಯನುಸಾರ

ಸಂಖ್ಯೆ; HORTI 203 HGM 2021

(ಆರ್.ಶಂಕರ್)

ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಅನುಬಂಧ (LAQ-3617)
ಕಳೆದ 3 ವರ್ಷಗಳಲ್ಲಿ ಯಾಂತ್ರೀಕರಣ ಯೋಜನೆಯಡಿ ಬಿಡುಗಡೆಯಾಗಿರುವ ಜಿಲ್ಲಾವಾರು
ಅನುದಾನದ ವಿವರ

ಕ್ರ.ಸಂ	ಜಿಲ್ಲೆ	ಬಿಡುಗಡೆಯಾಗಿರುವ ಅನುದಾನ (ರೂ.ಲಕ್ಷಗಳು)			
		2017-18	2018-19	2019-20	ಒಟ್ಟು
1	ಬೆಂಗಳೂರು ನಗರ	3.53	17.55	16.50	37.58
2	ಬೆಂಗಳೂರು (ಗ್ರಾ)	11.00	43.25	60.34	114.59
3	ಬಾಗಲಕೋಟೆ	25.25	67.85	75.57	168.67
4	ಬೆಳಗಾಂ	10.25	98.44	124.50	233.19
5	ಬಳ್ಳಾರಿ	9.50	34.39	102.98	146.87
6	ಬೀದರ್	14.00	88.70	48.75	151.45
7	ವಿಜಯಪುರ	147.29	325.60	221.44	694.33
8	ಚಾಮರಾಜನಗರ	8.75	56.35	49.69	114.79
9	ಚಿಕ್ಕಬಳ್ಳಾಪುರ	18.51	57.90	126.14	202.55
10	ಚಿಕ್ಕಮಗಳೂರು	24.50	224.45	320.92	569.87
11	ಚಿತ್ರದುರ್ಗಾ	18.19	194.30	285.44	497.93
12	ದಕ್ಷಿಣ ಕನ್ನಡ	0.00	162.50	80.00	242.50
13	ದಾವಣಗೆರೆ	29.75	174.46	458.56	662.77
14	ಧಾರವಾಡ	19.02	96.79	162.01	277.82
15	ಗದಗ	7.90	57.44	93.51	158.85
18	ಕಲಬುರಗಿ	11.75	150.35	71.83	233.93
16	ಹಾಸನ	15.25	78.50	453.25	547.00
17	ಹಾವೇರಿ	0.00	70.88	93.54	164.42
19	ಕೊಡಗು	0.00	48.00	45.82	93.82
20	ಕೋಲಾರ	3.60	79.90	54.71	138.21
21	ಕೊಪ್ಪಳ	58.26	56.70	79.01	193.97
22	ಮಂಡ್ಯ	13.89	73.00	139.75	226.64
23	ಮೈಸೂರು	25.50	194.20	238.00	457.70
24	ರಾಯಚೂರು	14.75	61.85	74.84	151.44
25	ರಾಮನಗರ	10.25	142.07	169.45	321.77
26	ಶಿವಮೊಗ್ಗ	33.70	274.00	393.75	701.45
27	ತುಮಕೂರು	19.63	352.93	252.52	625.08
29	ಉಡುಪಿ	12.50	128.75	50.75	192.00
28	ಉತ್ತರ ಕನ್ನಡ	14.25	64.75	203.00	282.00
30	ಯಾದಗಿರಿ	12.90	35.31	42.75	90.96
ಒಟ್ಟು		593.67	3511.15	4589.30	8694.12

ತೋಟಗಾರಿಕೆ ಅಪರ ನಿರ್ದೇಶಕರು
(ಹಣ್ಣುಗಳು)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 3619

ಸದಸ್ಯರ ಹೆಸರು : ಶ್ರೀ. ಅಭಯ್ ಪಾಟೀಲ್ (ಬೆಳಗಾವಿ ದಕ್ಷಿಣ ಮತ ಕ್ಷೇತ್ರ)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಉತ್ತರಿಸಬೇಕಾದ ದಿನಾಂಕ : 24.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕಡಿಮೆ ಜಮೀನನ್ನು ಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ, ತೋಟಗಾರಿಕೆ ಮತ್ತು ಇತರೆ ಚಟುವಟಿಕೆಗಳನ್ನು ಕೈಗೊಳ್ಳಲು ಸರ್ಕಾರವು ಕೈಗೊಂಡಿರುವ ಮಾರ್ಗೋಪಾಯಗಳಾವುವು;	ಕಡಿಮೆ ಜಮೀನನ್ನು ಹೊಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರುಗಳು ತೋಟಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಇಲಾಖೆಯಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಗಳ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.
ಆ)	ಬೆಳಗಾವಿ ಜಿಲ್ಲೆಯಲ್ಲಿ ಕೈಗೊಳ್ಳಲಿರುವ ಕಾರ್ಯಕ್ರಮಗಳ ಕುರಿತು ವಿವರ ನೀಡುವುದು;	
ಇ)	ರಾಜ್ಯದಲ್ಲಿರುವ ತೋಟಗಾರಿಕೆ ವಿಶ್ವವಿದ್ಯಾಲಯಗಳು ಎಷ್ಟು; ಅವು ಯಾವುವು; (ವಿವರ ನೀಡುವುದು)	1)ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ 2)ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಶಿವಮೊಗ್ಗ
ಈ)	ಇನ್ನೂ ಹೆಚ್ಚಿನ ತೋಟಗಾರಿಕೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಯೋಜನೆಯು ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವಾಗ ಮಾಡಲಾಗುವುದು;	ಹೆಚ್ಚಿನ ತೋಟಗಾರಿಕೆ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಯೋಜನೆಯು ಸರ್ಕಾರದ ಮುಂದೆ ಇರುವುದಿಲ್ಲ.
ಉ)	ಬೆಳಗಾವಿ ದಕ್ಷಿಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ತೋಟಗಾರಿಕೆ ವಿಶ್ವ ವಿದ್ಯಾಲಯವನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ? (ಮಾಹಿತಿ ನೀಡುವುದು)	ಇರುವುದಿಲ್ಲ.

ಸಂಖ್ಯೆ: HORTI 204 HGM 2021

(ಆರ್. ಶಂಕರ್)

ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

LAQ-3619

ಅನುಬಂಧ

ಸಣ್ಣ ಮತ್ತು ಅತಿ ಸಣ್ಣ ರೈತರುಗಳು ತೋಟಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಇಲಾಖೆಯಿಂದ ಕೈಗೊಳ್ಳುತ್ತಿರುವ ವಿವಿಧ ಯೋಜನೆಗಳು

ಕ್ರ.ಸಂ.	ಯೋಜನೆಗಳು
I	**ಕೇಂದ್ರ ನೆರವಿನ ಯೋಜನೆಗಳು**
1	ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಬಿಯಾನ ಯೋಜನೆ
2	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ)
3	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ
4	ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ
5	ಪರಂಪರಾಗತ ಕೃಷಿ ವಿಕಾಸ ಯೋಜನೆ
II	**ರಾಜ್ಯವಲಯ ಯೋಜನೆಗಳು**
1	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ ಯೋಜನೆ
2	ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ ಯೋಜನೆ
3	ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ
4	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ
5	ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ
6	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ
7	ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ
III	**ಜಿಲ್ಲಾವಲಯ ಯೋಜನೆಗಳು**
1	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ
2	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ
3	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ
4	ರೈತರಿಗೆ ತರಬೇತಿ
5	ಜೇನು ಸಾಕಾಣಿಕೆ

ತೋಟಗಾರಿಕೆ ಜಂಟಿ ನಿರ್ದೇಶಕರು
(ಯೋಜನೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3621
ಸದಸ್ಯರ ಹೆಸರು : ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ)
ಉತ್ತರಿಸುವ ದಿನಾಂಕ : 24-03-2021
ಉತ್ತರಿಸುವ ಮಾನ್ಯ ಸಚಿವರು : ಕೃಷಿ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ	"ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್" ಯೋಜನೆಯಲ್ಲಿ ರಾಜ್ಯ ಸರ್ಕಾರ ಬೆಳಗಾವಿ ಜಿಲ್ಲೆಗೆ ಹೆಚ್ಚುವರಿ ಸಹಾಯ ಧನ ನೀಡಿದೆಯೇ; ಹಾಗಿದ್ದಲ್ಲಿ, ಸಹಾಯ ಧನ ಪಡೆದ ಫಲಾನುಭವಿಗಳ ವಿವರಗಳನ್ನು ನೀಡುವುದು; (ಮತಕ್ಷೇತ್ರವಾರು / ಗ್ರಾಮವಾರು / ಹೆಸರು ಮತ್ತು ವಿಳಾಸಗಳ ಮಾಹಿತಿ ನೀಡುವುದು)	"ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್" ಯೋಜನೆಯಲ್ಲಿ ರಾಜ್ಯ ಸರ್ಕಾರದಿಂದ ಬೆಳಗಾವಿ ಜಿಲ್ಲೆಗೆ ಹೆಚ್ಚುವರಿ ಸಹಾಯ ಧನ ನೀಡಲಾಗಿರುತ್ತದೆ. ಬೆಳಗಾವಿ ಜಿಲ್ಲೆಯಲ್ಲಿ ಗ್ರಾಮವಾರು ಸಹಾಯ ಧನ ಪಡೆದ ರೈತ ಫಲಾನುಭವಿಗಳ ಮಾಹಿತಿಯನ್ನು ಅನುಬಂಧ-1 ರಲ್ಲಿ soft copy ಯಲ್ಲಿ ಗಣಕೀಕರಿಸಿ CD ಯಲ್ಲಿ ನೀಡಲಾಗಿದೆ.
ಆ	"ಪ್ರಧಾನ ಮಂತ್ರಿ ಫಸಲ್ ಭೀಮ" & "ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ" ಯೋಜನೆಯಡಿ ರಾಜ್ಯ ಸರ್ಕಾರ ಬೆಳಗಾವಿ ಜಿಲ್ಲೆಗೆ ಸಹಾಯ ಧನ ನೀಡಿದೆಯೇ; ಹಾಗಿದ್ದಲ್ಲಿ, ಸಹಾಯ ಧನ ಪಡೆದ ಫಲಾನುಭವಿಗಳ ವಿವರಗಳನ್ನು ನೀಡುವುದು; (ಮತಕ್ಷೇತ್ರವಾರು / ಗ್ರಾಮವಾರು / ಹೆಸರು ಮತ್ತು ವಿಳಾಸ ಗಳೊಂದಿಗೆ ಮಾಹಿತಿ ನೀಡುವುದು)	ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಹಾಗೂ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ರಾಜ್ಯ ಸರ್ಕಾರದಿಂದ ಬೆಳಗಾವಿ ಜಿಲ್ಲೆಗೆ ಸಹಾಯಧನ ನೀಡಲಾಗಿರುತ್ತದೆ. ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಭೀಮ ಯೋಜನೆಯಡಿ ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದಂತೆ 2019-20ನೇ ಸಾಲಿನಲ್ಲಿ ವಿಮಾ ಸಂಸ್ಥೆಯವರಿಂದ ಬೆಳೆ ವಿಮೆ ಪರಿಹಾರ ಪಡೆದ ರೈತ ಫಲಾನುಭವಿಗಳ ಸಂಖ್ಯೆ ಮತ್ತು ಮೊತ್ತದ ವಿವರ ಈ ಕೆಳಕಂಡಂತಿದೆ: ರೂ. ಲಕ್ಷಗಳಲ್ಲಿ ವರ್ಷ / ಹಂಗಾಮು | ರೈತ ಫಲಾನುಭವಿಗಳ ಸಂಖ್ಯೆ | ಬೆಳೆ ವಿಮೆ ಪರಿಹಾರ ಮೊತ್ತ ಮುಂಗಾರು 2019 | 11904 | 1056.05 2019-20 ಹಿಂಗಾರು ಮತ್ತು ಬೇಸಿಗೆ | 7839 | 824.61 **ಒಟ್ಟು** | **19743** | **1880.66** ಮುಂಗಾರು 2020ರ ಹಂಗಾಮಿಗೆ ಸಂಬಂಧಿಸಿದಂತೆ, ಬೆಳೆ ಸಮೀಕ್ಷೆಯ ದತ್ತಾಂಶವನ್ನು ನೋಂದಣಿಯಾದ ರೈತರ

		ಪ್ರಸ್ತಾವನೆಗಳ ದತ್ತಾಂಶದೊಂದಿಗೆ ಸಂರಕ್ಷಣೆ ತಂತ್ರಾಂಶದಲ್ಲಿ ಸಂಯೋಜಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ಬೆಳಗಾವಿ ಜಿಲ್ಲೆಯ ಮತ ಕ್ಷೇತ್ರವಾರು, ಗ್ರಾಮವಾರು ಬೆಳೆ ವಿಮೆ ಪರಿಹಾರ ಪಡೆದ ರೈತರ ಫಲಾನುಭವಿಗಳ ವಿವರಗಳನ್ನು **ಅನುಬಂಧ–2 ಮತ್ತು ಅನುಬಂಧ–3** ರಲ್ಲಿ soft copy ಯಲ್ಲಿ ಗಣಕೀಕರಿಸಿ CD ಯಲ್ಲಿ ನೀಡಲಾಗಿದೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ರಾಜ್ಯ ಸರ್ಕಾರದಿಂದ ಬೆಳಗಾವಿ ಜಿಲ್ಲೆಗೆ ಸಹಾಯಧನ ನೀಡಲಾಗಿದೆ. ಸಹಾಯ ಧನ ಪಡೆದ ಫಲಾನುಭವಿಗಳ ಮತಕ್ಷೇತ್ರವಾರು / ಗ್ರಾಮವಾರು ವಿವರಗಳನ್ನು ಅನುಬಂಧ–4 ರಲ್ಲಿ soft copyಯಲ್ಲಿ ಗಣಕೀಕರಿಸಿ CDಯಲ್ಲಿ ನೀಡಲಾಗಿದೆ.
ಇ	ಬೆಳಗಾವಿಯಲ್ಲಿ "ಆತ್ಮನಿರ್ಭರ ಭಾರತ ಅಭಿಯಾನ" ಯೋಜನೆಯಡಿಯಲ್ಲಿ ಆಹಾರಪಾರ್ಕ್‌ನ್ನು ಸ್ಥಾಪಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ; ಹೊಂದಿದ್ದಲ್ಲಿ, ಯಾವಾಗ ಸ್ಥಾಪನೆ ಮಾಡಲಾಗುವುದು; ಇಲ್ಲವಾದಲ್ಲಿ, ಎಲ್ಲಿ ಮಾಡಲಾಗುವುದು; ಅದರ ವೈಶಿಷ್ಟ್ಯತೆಗಳೇನು? (ವಿವರ ನೀಡುವುದು)	ಬೆಳಗಾವಿಯಲ್ಲಿ "ಆತ್ಮನಿರ್ಭರ ಭಾರತ ಅಭಿಯಾನ" ಯೋಜನೆಯಡಿಯಲ್ಲಿ ಆಹಾರ ಪಾರ್ಕನ್ನು ಸ್ಥಾಪಿಸುವ ಯಾವುದೇ ಉದ್ದೇಶವನ್ನು ಸರ್ಕಾರ ಹೊಂದಿರುವುದಿಲ್ಲ. ಆಹಾರ ಪಾರ್ಕ್ ಅಭಿವೃದ್ಧಿಪಡಿಸಲು 2021-22ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವುದರಿಂದ ವಿಜಯಪುರ ಜಿಲ್ಲೆಯ ಇಟ್ಟಂಗಿಹಾಳದಲ್ಲಿ 75 ಎಕರೆ ಪ್ರದೇಶದಲ್ಲಿ ಆಹಾರ ಪಾರ್ಕ್ ಅಭಿವೃದ್ಧಿ ಪಡಿಸಲು ಕ್ರಮವಹಿಸಲಾಗುವುದು. **ವೈಶಿಷ್ಟ್ಯತೆಗಳು:** 1. ರಾಜ್ಯದ ಗ್ರಾಮೀಣ ಭಾಗದಲ್ಲಿ ರೈತರ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಆಹಾರ ಸಂಸ್ಕರಣ ಉದ್ದಿಮೆಗಳ ಸ್ಥಾಪನೆಗೆ ಅವಶ್ಯಕವಿರುವ ಸಾಮೂದಾಯಿಕ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ (PPP Model) ಸ್ಥಾಪಿಸಿ, ಉದ್ಯೋಗ ಸೃಷ್ಟಿಸುವುದರ ಜೊತೆಗೆ ರೈತರ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಕಟಾವು ನಂತರದ ನಷ್ಟವನ್ನು ತಗ್ಗಿಸಿ, ರೈತರ ಆದಾಯವನ್ನು ವೃದ್ಧಿಸುವುದು. 2. ಆಹಾರ ಸಂಸ್ಕರಣ ಉದ್ದಿಮೆಗಳ ಸ್ಥಾಪನೆಗೆ ಅವಶ್ಯಕವಿರುವ ಸಾಮೂದಾಯಿಕ ಮೂಲಭೂತ

1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 34 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ.ರಾಜ್ಯ ಸರ್ಕಾರದಿಂದ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

(ಅ) ವಿಕಲಚೇತನರಿಗೆ ವೃತ್ತಿ ತರಬೇತಿ ಕೇಂದ್ರಗಳು:

ಈ ಯೋಜನೆಯಡಿ ವಿವಿಧ ರೀತಿಯ ವಿಕಲಚೇತನರಿಗೆ ವೃತ್ತಿ ತರಬೇತಿಯನ್ನು ನೀಡುವುದಾಗಿದೆ.1982ರ ರಾಜ್ಯ ಅನುದಾನ ಸಂಹಿತೆಯಡಿ 5 ವೃತ್ತಿ ತರಬೇತಿ ಕೇಂದ್ರಗಳನ್ನು ರಾಜ್ಯ ಸಹಾಯಾನುದಾನದಡಿ ಬೆಂಗಳೂರಿನಲ್ಲಿ 03 ಮತ್ತು ಮೈಸೂರಿನಲ್ಲಿ 02 ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ವಾಕ್ ಶ್ರವಣ ಕೇಂದ್ರವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ವೃತ್ತಿ ತರಬೇತಿ ಕೇಂದ್ರಗಳಲ್ಲಿ ವಿವಿಧ ರೀತಿಯ ವಿಕಲಚೇತನರಿಗೆ ಫಿಟ್ಟರ್, ಟರ್ನರ್, ಸರಳ ಇಂಜಿನಿಯರಿಂಗ್, ಬೆತ್ತ, ಹಗ್ಗ, ಚಾಪೆ ಹೆಣೆಯುವುದು ಹಾಗೂ ಪ್ಲಾಸ್ಟಿಕ್ ಮೌಲ್ಡಿಂಗ್ ತರಬೇತಿಯನ್ನು ನೀಡಲಾಗುತ್ತಿದೆ.ಪ್ರತಿ ತರಬೇತಿ ಕೇಂದ್ರದಲ್ಲಿ ವಾರ್ಷಿಕ 25 ಫಲಾನುಭವಿಗಳು ತರಬೇತಿ ಪಡೆಯಲು ಅವಕಾಶವಿರುತ್ತದೆ.

(ಆ)ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ:

ಈ ಯೋಜನೆಯಡಿ ಬುದ್ಧಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 138 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶ್ರವಣದೋಷವುಳ್ಳ ಹಾಗೂ ದೃಷ್ಟಿದೋಷವುಳ್ಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6200/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.5200/- ರಂತೆ ಹಾಗೂ ಬುದ್ಧಿಮಾಂದ್ಯ ಮಕ್ಕಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6800/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ. 6000/- ರಂತೆ ವರ್ಷದಲ್ಲಿ 10 ತಿಂಗಳ ಅವಧಿಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ.ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.

(ಇ) ಕೇಂದ್ರ ಸರ್ಕಾರದ ದೀನ್‌ದಯಾಳ್ ಪುನರ್ವಸತಿ ಯೋಜನೆಯಡಿ 8 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷ ಶಾಲೆ /ವೃತ್ತಿ ತರಬೇತಿ ಕೇಂದ್ರಗಳು ನಡೆಯುತ್ತಿದ್ದು, ಸದರಿ ಶಾಲೆ ಹಾಗೂ ತರಬೇತಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಶೇ.90ರಷ್ಟು ಅನುದಾನವನ್ನು ಮಂಜೂರು ಮಾಡಲಾಗುತ್ತಿದ್ದು, ಉಳಿದ ಶೇ.10ರಷ್ಟು ವೆಚ್ಚವನ್ನು ಸಂಸ್ಥೆಯವರು ಭರಿಸಬೇಕಾಗಿರುತ್ತದೆ.

4) ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹಧನ:
ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ. 2001-02ನೇ ಸಾಲಿನಿಂದ ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

5) ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:
ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ.ಈ ಯೋಜನೆಯನ್ನು 2001-02ನೇ ಸಾಲಿನಿಂದ ಬಿ.ಎಡ್, ಎಂ.ಎಡ್. ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

6) ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು 2013-14ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ. ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ

7) ಬ್ರೈಲ್ ಮುದ್ರಣಾಲಯ:

ದೃಷ್ಟಿದೋಷವುಳ್ಳ ಮಕ್ಕಳಿಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಿಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.

8) ವಿಶೇಷ ಶಿಕ್ಷಣ ತರಬೇತಿ ಕೇಂದ್ರ ಯೋಜನೆ:
ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ತಲಾ ಒಂದರಂತೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ನಡೆಸುತ್ತಿದ್ದು, ಪ್ರತಿ ವರ್ಷ ಪ್ರತಿ ಕೇಂದ್ರದಲ್ಲಿ 25 ಪ್ರಶಿಕ್ಷಣಾರ್ಥಿಗಳು ತರಬೇತಿ ಪಡೆಯಲು ಅವಕಾಶವಿರುತ್ತದೆ.

9) ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು: ಸೆರಬ್ರಲ್ ಪಾಲ್ಸಿ, ಆಟಿಸಂ, ಮಾನಸಿಕ ಅಸ್ವಸ್ಥ ಹಾಗೂ ತೀವ್ರತರದ ಅಂಗವೈಕಲ್ಯತೆ ಹೊಂದಿರುವ ಮೂರರಿಂದ 25 ವರ್ಷದ ಒಳಗಿನ ಮಕ್ಕಳಿಗಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಕ್ಕಳನ್ನು ದಾಖಲಿಸಲು ಅವಕಾಶವಿದ್ದು, ಪ್ರತಿ ಮಗುವಿಗೆ ಮಾಸಿಕ ರೂ.10,000/-ಗಳಂತೆ ವಾರ್ಷಿಕ 25.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.

(ಬಿ) ಉದ್ಯೋಗ ಮತ್ತು ತರಬೇತಿ:

1) ಅಂಗವಿಕಲ ಪುರುಷ ಹಾಗೂ ಮಹಿಳೆಯರ ವಸತಿನಿಲಯ:

ಬೆಂಗಳೂರಿನ ಕೆಂಗೇರಿಯಲ್ಲಿ ವಿಕಲಚೇತನ ಮಹಿಳೆ ಮತ್ತು ವಿಕಲಚೇತನ ಪುರುಷರಿಗಾಗಿ ಅಂಗವಿಕಲ ಉದ್ಯೋಗಸ್ಥ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗಾಗಿ ಮಹಿಳೆಯರು ಹಾಗೂ ಪುರುಷರಿಗಾಗಿ ಪ್ರತ್ಯೇಕವಾದ ವಸತಿ ನಿಲಯವನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ನಡೆಸಲಾಗುತ್ತಿದೆ. ಪ್ರಸ್ತುತ ಈ ಎರಡೂ ವಸತಿ ನಿಲಯಗಳು ಬೆಂಗಳೂರಿನ ಕೆಂಗೇರಿಯಲ್ಲಿ ನಡೆಯುತ್ತಿವೆ. ಪ್ರತಿ ವಸತಿ ನಿಲಯದಲ್ಲಿ 50 ನಿವಾಸಿಗಳನ್ನು ದಾಖಲಿಸಲು ಅವಕಾಶವಿರುತ್ತದೆ.

2) ಆಧಾರ ಯೋಜನೆ :

ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಎಂಬ ಸಾಲ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಜಾರಿಗೊಳಿಸಲಾಗುತ್ತಿದೆ.ಈ ಯೋಜನೆಯಡಿ ರೂ.1.00 ಲಕ್ಷ ರೂ.ಗಳ ಸಹಾಯಧನವನ್ನು ನೀಡಲು ಅವಕಾಶವಿದ್ದು, ಇದರಲ್ಲಿ ಶೇ.50ರಷ್ಟು ಬಡ್ಡಿ ಸಹಿತವಾಗಿ ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನ ಒದಗಿಸಲಾಗುವುದು.

3) ಗ್ರಾಮೀಣ ಪುನರ್ವಸತಿ ಯೋಜನೆ:

ಈ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ.ಪ್ರತಿ ಗ್ರಾಮ ಪಂಚಾಯತಿ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರೆಂದು ಮತ್ತು ನಿರ್ದೇಶನಾಲಯದಲ್ಲಿ ರಾಜ್ಯ ಸಂಯೋಜಕರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ವಿಕಲಚೇತನರ ಮೂಲಕವೇ ತಲುಪಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ:ಮಮಇ/241/ಪಿಹೆಚ್‌ಪಿ/2019, ದಿನಾಂಕ: 07-02-2020ರಂತೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ನಗರ ಪುನರ್ವಸತಿ ಕಾರ್ಯಕರ್ತರುಗಳ ಗೌರವಧನವನ್ನು ರೂ.3000/-ಗಳಿಂದ ರೂ.6000/-ಗಳಿಗೆ ಹಾಗೂ ವಿವಿದ್ದೋದ್ದೇಶ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ರೂ.6000/-ಗಳಿಂದ ರೂ.12,000/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

4) ಮರಣ ಪರಿಹಾರ ನಿಧಿ ಯೋಜನೆ: ಗ್ರಾಮೀಣ ಪುನರ್ವಸತಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರು ನಿಧನ ಹೊಂದಿದ್ದಲ್ಲಿ ರೂ.50,000/-ಗಳ ಪರಿಹಾರ ಧನ ನೀಡಲು ಅವಕಾಶವಿರುತ್ತದೆ.

5) ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ವಸತಿ ನಿಲಯಗಳು:

ಅಂಗವಿಕಲ ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಗೂ ವಿದ್ಯಾರ್ಥಿನಿ/ತರಬೇತಾರ್ಥಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 25 ಜಿಲ್ಲೆಗಳಲ್ಲಿ ಮಹಿಳಾ ವಸತಿ ನಿಲಯಗಳು (ಬೆಂಗಳೂರು ನಗರ ಜಿಲ್ಲೆಯಲ್ಲಿ 4 ವಸತಿ ನಿಲಯಗಳು) ನಡೆಯುತ್ತಿವೆ. ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಹಾಗೂ ತರಬೇತಿದಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸದರಿ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಉಚಿತ ಊಟದ ವ್ಯವಸ್ಥೆಯಿದ್ದು, ಉದ್ಯೋಗಸ್ಥ ಮಹಿಳೆಯರು ಮಾಸಿಕ 800/-ಗಳನ್ನು ಪಾವತಿಸಬೇಕಾಗಿರುತ್ತದೆ. ರಾಮನಗರ, ದಾವಣಗೆರೆ, ರಾಯಚೂರು, ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು ಈ ಜಿಲ್ಲೆಗಳಲ್ಲಿ ಆಡಳಿತಾತ್ಮಕ ಕಾರಣಗಳಿಂದ ವಸತಿ ನಿಲಯಗಳನ್ನು ನಡೆಯುತ್ತಿಲ್ಲ.

ಸಿ. ಸಾಮಾಜಿಕ ಭದ್ರತಾ ಯೋಜನೆಗಳು:

1) ಸಮಾಜ ಸೇವಾ ಸಂಕೀರ್ಣ:

ನಿರ್ಗತಿಕ ಬುದ್ಧಿಮಾಂದ್ಯ ಪುರುಷರಿಗಾಗಿ ಸಮಾಜ ಸೇವಾ ಸಂಕೀರ್ಣ ಸಂಸ್ಥೆಯು ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ, ಸಂರಕ್ಷಣೆ ಒದಗಿಸಲಾಗುತ್ತಿದೆ. ಪ್ರಸ್ತುತ ಸಂಸ್ಥೆಯಲ್ಲಿ 85 ನಿವಾಸಿಗಳು ದಾಖಲಾಗಿರುತ್ತಾರೆ.

2) ಮಂದಮತಿ ಮಹಿಳೆಯರ ಅನುಪಾಲನಾ ಗೃಹ:

18 ವರ್ಷ ಮೇಲ್ಪಟ್ಟ ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದೆ. ಪ್ರಸ್ತುತ ಬೆಂಗಳೂರು ಅನುಪಾಲನಾ ಕೇಂದ್ರದಲ್ಲಿ 100 ಮಂದಿ ಹಾಗೂ ಹುಬ್ಬಳ್ಳಿ ಅನುಪಾಲನ ಕೇಂದ್ರದಲ್ಲಿ 70 ನಿವಾಸಿಗಳು ದಾಖಲಾಗಿರುತ್ತಾರೆ.

3) ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:

ಮಾನಸಿಕ ಅಸ್ವಸ್ಥರಿಗಾಗಿ ಮಾನಸ ಕೇಂದ್ರಗಳನ್ನು ಬೆಂಗಳೂರು ನಗರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ನಡೆಸುತ್ತಿದ್ದು, ರಾಜ್ಯ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಿಂದ ಆದೇಶಿಸಲ್ಪಡುವ ಮಾನಸಿಕ ಅಸ್ವಸ್ಥರನ್ನು ಹಾಗೂ ರಸ್ತೆಗಳಲ್ಲಿ ಓಡಾಡುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ನಿರ್ದಿಷ್ಟ ವೈದ್ಯಕೀಯ ಪ್ರಾಧಿಕಾರದ ಆದೇಶದ ಮೇರೆಗೆ ದಾಖಲಿಸಲು ಅವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉಚಿತ ಊಟ, ವಸತಿ, ವೈದ್ಯಕೀಯ ಶುಶ್ರೂಷೆ, ವೈದ್ಯಕೀಯ ಸಲಹೆ(ಕೌನ್ಸಲಿಂಗ್) ಸೌಲಭ್ಯವನ್ನು ನೀಡಲಾಗುತ್ತಿದ್ದು, ಇವು ಅಲ್ಪಾವಧಿ ಕೇಂದ್ರಗಳಾಗಿರುತ್ತವೆ.

4) ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ:

ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ: ತಾಯಿ: ಪೋಷಕರ ವಿಮಾ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ:ತಾಯಿ: ಪೋಷಕರು ಮರಣ ಹೊಂದಿದ ನಂತರ ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ರೂ.20,000/-ಗಳ ಪರಿಹಾರ ಧನವನ್ನು ಕುಟುಂಬದ ನಾಮ ನಿರ್ದೇಶಿತ ಸದಸ್ಯರಿಗೆ ಪಾವತಿಸಲಾಗುತ್ತಿದೆ.

5) ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನರ ಜಂಟಿ ಹೆಸರಿನಲ್ಲಿ 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಉಪಯೋಗಿಸುವುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಅವಕಾಶವಿರುತ್ತದೆ.

6) ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :

ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ.ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಟಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/-ದಂತೆ **5 ವರ್ಷಗಳ** ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ.ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

(ಡಿ) ಪುನರ್ವಸತಿ ಯೋಜನೆಗಳು:

1) ಅಂಗವಿಕಲರಿಗೆ ಸಾಧನ ಸಲಕರಣೆಗಳು :

ಈ ಯೋಜನೆಯಡಿಯಲ್ಲಿ ಅಂಗವಿಕಲರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ರೂ.11,500/- ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.24,000/- ನಿಗದಿಗೂಳಿಸಲಾಗಿದೆ. ಈ ಯೋಜನೆಯಡಿ ರೂ.15,000/-ಗಳ ಮಿತಿಯೊಳಗೆ ವಿಕಲಚೇತನರಿಗೆ ಅವಶ್ಯವಿರುವ ಕ್ಯಾಲಿಪರ್ಸ್, ಕ್ರಚರ್ಸ್, ಶ್ರವಣ ಸಾಧನ, ವೈಟ್ ಕೇನ್, ಬ್ರೈಲ್ ವಾಚ್ ಇನ್ನಿತರ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

ಅ. ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

ಆ. ತೀವ್ರತೆರೆನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ :

20 ರಿಂದ 60 ವರ್ಷದ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರಿಗೆ ಓಡಾಡಲು ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಮಂಜೂರು ಮಾಡಲಾಗುತ್ತದೆ. ಈ ಯೋಜನೆಯಡಿ ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರಬೇಕಾಗಿರುತ್ತದೆ.

2) ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ:-

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ.ಈ ಯೋಜನೆಯಡಿ ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು. ಪ್ರಸ್ತುತ 16 ಜಿಲ್ಲೆಗಳಲ್ಲಿ ಜಿಲ್ಲಾ ಪುನರ್ವಸತಿ ಕೇಂದ್ರಗಳು ನಡೆಯುತ್ತಿವೆ. (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಬೀದರ್, ಚಿತ್ರದುರ್ಗ, ದಕ್ಷಿಣ ಕನ್ನಡ, ಮೈಸೂರು, ಉಡುಪಿ, ಹಾಸನ, ವಿಜಯಪುರ, ರಾಯಚೂರು, ಚಿಕ್ಕಮಗಳೂರು, ಬಳ್ಳಾರಿ, ಹಾವೇರಿ, ಚಾಮರಾಜನಗರ, ಗದಗ)

3) ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-

ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ, ಸಂಜಯಗಾಂಧಿ ಆಸ್ಪತ್ರೆಗಳಲ್ಲಿ ಹಾಗೂ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ ಶಸ್ತ್ರ ಚಿಕಿತ್ಸೆಗಾಗಿ ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.

4) ಸಾಧನೆ ಮತ್ತು ಪ್ರತಿಭೆ ಯೋಜನೆ:

ವಿಕಲಚೇತನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು "ಸಾಧನೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ರೂ.50,000/-ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ "ಪ್ರತಿಭೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ವೈಯಕ್ತಿಕ ಸಾಂಸ್ಕೃತಿಕ ರೂ.2,000/-ಗಳು ಹಾಗೂ ಸಮೂಹ ಕಾರ್ಯಕ್ರಮಕ್ಕೆ ರೂ.10,000/-ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

5) ನಿರಾಮಯ ಆರೋಗ್ಯ ವಿಮಾ ಯೋಜನೆ :

ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆ ಹೊಂದಿರುವ ಪ್ರತಿ ವ್ಯಕ್ತಿ ಹಾಗೂ ಮಗುವಿಗೆ ವರ್ಷಕ್ಕೆ ಒಂದು ಬಾರಿ ಪ್ರೀಮಿಯಂ ಮೊತ್ತ ರೂ.250/-ಗಳನ್ನು ಭಾರತ ಸರ್ಕಾರದಿಂದ ಗುರುತಿಸಲ್ಪಟ್ಟ ಅಧಿಕೃತ ಸಂಸ್ಥೆಯಾದ ಅಂಗವಿಕಲರ ಪುನಶ್ಚೇತನ ಸಂಸ್ಥೆ (ರಿ) (ಎ.ಪಿ.ಡಿ) ಬೆಂಗಳೂರು ರವರಿಗೆ ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ. ಈ ಮೊತ್ತದಲ್ಲಿ ರೂ.60,000/-ಗಳವರೆಗೆ ಸರ್ಜರಿ ವೆಚ್ಚ ಉಳಿದ ರೂ.40,000/-ಗಳಲ್ಲಿ ವೈದ್ಯಕೀಯ ಖರ್ಚು ಥೆರಪಿ, ಪ್ರಯಾಣ ವೆಚ್ಚಗಳನ್ನು ಒಳಗೊಂಡಿರುತ್ತದೆ.

6) ಸ್ಪರ್ಧಾ ಚೇತನ:-

ಈ ಯೋಜನೆಯಡಿ ವಿಶೇಷ ಸಾಮರ್ಥ್ಯ/ಭಿನ್ನ ಸಾಮರ್ಥ್ಯದ ವಿದ್ಯಾವಂತ ವ್ಯಕ್ತಿಗೆಗಳಿಗೆ ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು ಹಾಗೂ ಈ ಇಲಾಖೆಯಿಂದ ಗುರುತಿಸಲ್ಪಟ್ಟ ತರಬೇತಿ ಕೇಂದ್ರಗಳ ಮೂಲಕ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

7) ನಿರುದ್ಯೋಗ ಭತ್ಯೆ:- ಎಸ್.ಎಸ್.ಎಲ್.ಸಿ ಹಾಗೂ ನಂತರ ವ್ಯಾಸಂಗ ಮಾಡಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ರೂ.1000/-ಗಳ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ.

(ಇ) ಸಾರ್ವಜನಿಕ ಅರಿವು ಮೂಡಿಸುವ ಯೋಜನೆಗಳು:

1. ವಿಕಲಚೇತನರ ಮಾಹಿತಿ ಸಲಹಾ ಕೇಂದ್ರ :

ಅಂಗವಿಕಲರಿಗೆ ಲಭ್ಯವಿರುವ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಹಾಗೂ ವಿಶೇಷ ಶಾಲೆಗಳು ಹಾಗೂ ವೃತ್ತಿ ತರಬೇತಿ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ನಿರ್ದೇಶನಾಲಯದಲ್ಲಿ ಹಾಗೂ ರಾಜ್ಯದ 30 ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ / ಮಾಹಿತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.ಈ ಕೇಂದ್ರಗಳಲ್ಲಿ ಒಳ್ಳೆಯ ಗುಣ ಮಟ್ಟದ ಕೃತಕಾಂಗಗಳು ದೊರೆಯುವ ಮಾಹಿತಿ ಹಾಗೂ ಅಂಗವಿಕಲರಿಗೆ ಬೇಕಾಗಿರುವ ಮಾಹಿತಿಗಳನ್ನು ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸಾರ್ವಜನಿಕ ಉದ್ಯಮ ಹಾಗೂ ಖಾಸಗಿ ಉದ್ಯಮಗಳಲ್ಲಿ ಅಂಗವಿಕಲರಿಗೆ ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಲಾಗುವುದು.

2) ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ:-

ಈ ಯೋಜನೆಯಡಿಯಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ.ಈ ಗುರುತಿನ ಚೀಟಿಯನ್ನು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸಿಕೊಳ್ಳಬಹುದಾಗಿದೆ. ವಿಕಲಚೇತನರಿಗೆ ವಿಶಿಷ್ಠ ಗುರುತಿನ ಚೀಟಿ (UNIQUE DISABILITY ID)ನೀಡುವ ಯೋಜನೆಯು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ. ರಾಜ್ಯ ಸರ್ಕಾರದಿಂದ ನೇಮಿಸಲಾಗುವ ವೈದ್ಯಕೀಯ ಪ್ರಾಧಿಕಾರಗಳಿಂದ ದೃಢೀಕರಿಸಲಾಗುವ ವೈದ್ಯಕೀಯ ಪ್ರಮಾಣ ಪತ್ರದ ಸಮಗ್ರ ಮಾಹಿತಿಯುಳ್ಳ ಗಣಕೀಕೃತ ಗುರುತಿನ ಚೀಟಿಯನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡುವ ವ್ಯವಸ್ಥೆಯಾಗಿದ್ದು, ಇದರಲ್ಲಿ ವಿಕಲಚೇತನ ವ್ಯಕ್ತಿಯ ವಿವರಗಳು ಹಾಗೂ ಅವರಲ್ಲಿರುವ ವಿಕಲತೆಯ ವಿವರ ಮತ್ತು ಪ್ರಮಾಣವನ್ನು ನಮೂದಿಸಲಾಗಿರುತ್ತದೆ.

3).ವಿಕಲಚೇತನರಿಗೆ ರಿಯಾಯಿತಿ ದರದ ಬಸ್ ಪಾಸ್:

ಈ ಯೋಜನೆಯಡಿ ವಿಕಲಚೇತನರಿಗೆ 100 ಕಿ.ಮೀ. ವ್ಯಾಪ್ತಿಯೊಳಗೆ ಸಂಚರಿಸಲು ವಾರ್ಷಿಕ ರೂ.660/- ರಿಯಾಯಿತಿ ದರದಲ್ಲಿ ಬಸ್ ಪಾಸ್‌ಗಳನ್ನು ಕೆ.ಎಸ್.ಆರ್.ಟಿ.ಸಿ ಹಾಗೂ ಬಿ.ಎಂ.ಟಿ.ಸಿ ವತಿಯಿಂದ ವಿತರಿಸಲಾಗುತ್ತಿದೆ ಪೂರ್ಣ ಅಂಧರು ಉಚಿತವಾಗಿ ರಾಜ್ಯದಲ್ಲಿ ಸಂಚರಿಸಲು ಅವಕಾಶವಿರುತ್ತದೆ.

ಹಿರಿಯ ನಾಗರಿಕರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು

1. **ಹಗಲು ಯೋಗಕ್ಷೇಮ ಕೇಂದ್ರಗಳು:**

ರಾಜ್ಯದ 30 ಜಿಲ್ಲೆಗಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಮಂಜೂರಾತಿ ದೊರೆತಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು 50–150 ಫಲಾನುಭವಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದ್ದು, ಸದರಿ ಯೋಜನೆಗೆ ಸರ್ಕಾರದಿಂದ ವಾರ್ಷಿಕ ರೂ.11.20 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

2. **ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು:**

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ.

3. **ಹಿರಿಯ ನಾಗರಿಕರ ವೃದ್ಧಾಶ್ರಮ:**

ರಾಜ್ಯದ 30 ಜಿಲ್ಲೆಗಳಲ್ಲಿ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದ್ದು, ಈ ವೃದ್ಧಾಶ್ರಮದಲ್ಲಿ 25 ನಿರ್ಗತಿಕ ಹಿರಿಯ ನಾಗರಿಕರನ್ನು ದಾಖಲಿಸಿಕೊಳ್ಳಲು ಅವಕಾಶವಿದ್ದು, ಒಂದು ವೃದ್ಧಾಶ್ರಮದ ನಿರ್ವಹಣೆಗಾಗಿ ವಾರ್ಷಿಕ ರೂ.8.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಇದರಲ್ಲಿ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ಯೋಜನಾ ವೆಚ್ಚದ ಶೇ.90ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುತ್ತಿದ್ದು ಉಳಿದ ಶೇ.10ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ. ಅನುದಾನವನ್ನು ಜಿಲ್ಲಾ ಪಂಚಾಯತ್, ಮೂಲಕ ಮಂಜೂರು ಮಾಡಲಾಗುತ್ತಿದೆ.

ರಾಜ್ಯದ ಪ್ರತಿ ಕಂದಾಯ ಉಪ ವಿಭಾಗದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಅವಕಾಶವಿದ್ದು, ಪ್ರಸ್ತುತ 8 ಕಂದಾಯ ಉಪ ವಿಭಾಗಕ್ಕೆ ವೃದ್ಧಾಶ್ರಮ ನಡೆಸಲು ಆಡಳಿತಾತ್ಮಕ ಮಂಜೂರಾತಿ ದೊರೆತಿರುತ್ತದೆ.

4. **ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು:**

60 ವರ್ಷ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರ ಗುರುತಿನ ಚೀಟಿ ಪಡೆಯಲು ಸೇವಾ ಸಿಂಧು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು, ದಿ:01.10.2018ರಿಂದ ಹಿರಿಯ ನಾಗರಿಕರು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

***

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3558
ಸದಸ್ಯರ ಹೆಸರು	ಶ್ರೀ ದೇವಾನಂದ್ ಫುಲಸಿಂಗ್ ಚವಾಣ್ (ನಾಗಠಾಣ)
ಉತ್ತರಿಸುವ ದಿನಾಂಕ	24-03-2021
ಉತ್ತರಿಸುವ ಸಚಿವರು	ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ಕಳೆದ ಮೂರು ವರ್ಷಗಳಲ್ಲಿ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಕೃಷಿ ಇಲಾಖೆಯಿಂದ ಯಾವ ಯಾವ ಯೋಜನೆಗಳಲ್ಲಿ ಎಷ್ಟು ರೈತರಿಗೆ ಸಹಾಯಧನ ಬಿಡುಗಡೆಗೊಳಿಸಿದೆ;	ಕೃಷಿ ಇಲಾಖೆಯ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಯೋಜನೆಗಳಡಿ ಸಹಾಯಧನ ಬಿಡುಗಡೆಗೊಳಿಸಿರುವ ರೈತ ಫಲಾನುಭವಿಗಳ ವಿವರಗಳನ್ನು ಅನುಬಂಧ-1(ಅ), 1 (ಆ) ಮತ್ತು 1 (ಇ) ರಲ್ಲಿ ನೀಡಿದೆ. ಜಲಾನಯನ ಅಭಿವೃದ್ಧಿ ಇಲಾಖೆಯ ವತಿಯಿಂದ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಕೇಂದ್ರ ಪುರಸ್ಕೃತ "ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ-ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ ಯೋಜನೆಯನ್ನು 2018-19ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಈ ಯೋಜನೆಯಡಿ ಒಟ್ಟು 56 ಫಲಾನುಭವಿಗಳಿಗೆ (ತೋಟಗಾರಿಕೆ ಆಧಾರಿತ ಕೃಷಿ ಪದ್ಧತಿ ಯಡಿ-42 ಫಲಾನುಭವಿಗಳಿಗೆ ಮತ್ತು water application & distribution ಘಟಕದಡಿ 14 ಫಲಾನುಭವಿಗಳಿಗೆ) ಸಹಾಯಧನವನ್ನು ಒದಗಿಸಲಾಗಿದೆ.
ಆ.	ಸಹಾಯಧನ ಯೋಜನೆಗಳಲ್ಲಿ ಗುರಿಗಳನ್ನು ನಿಗದಿಪಡಿಸಿದ್ದು, ಶಾಸಕರಿಗೆ ಇನ್ನೂ ಹೆಚ್ಚಿನ ಗುರಿಗಳನ್ನು ನೀಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ಕೃಷಿ ಇಲಾಖೆಯ ವಿವಿಧ ಯೋಜನೆಗಳಡಿ ಪ್ರತಿ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನವನ್ನು ಕ್ರಿಯಾ ಯೋಜನೆ ಹಾಗೂ ಮಾರ್ಗಸೂಚಿ ಅನ್ವಯ ಅನುಷ್ಠಾನಗೊಳಿಸಲಾಗುತ್ತಿದ್ದು, ಹೆಚ್ಚುವರಿ ಅನುದಾನದ ಲಭ್ಯತೆ ಹಾಗೂ ಬೇಡಿಕೆಗೆ ಅನುಗುಣವಾಗಿ ಗುರಿಯನ್ನು ಮಾರ್ಪಡಿಸಲಾಗುತ್ತದೆ.
ಇ.	ಕಳೆದ ಮೂರು ವರ್ಷಗಳಿಂದ ಸಹಾಯಧನಕ್ಕಾಗಿ ಈ ಕ್ಷೇತ್ರದಲ್ಲಿ ಎಷ್ಟು ಅರ್ಜಿಗಳು ಸ್ವೀಕೃತಗೊಂಡಿದೆ;	ಕಳೆದ ಮೂರು ವರ್ಷಗಳಿಂದ ಸಹಾಯಧನಕ್ಕಾಗಿ ನಾಗಠಾಣ ಕ್ಷೇತ್ರದಲ್ಲಿ 46961 ಅರ್ಜಿಗಳು ಸ್ವೀಕೃತಗೊಂಡಿದೆ.

ಈ.	ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ; ಬಾಕಿ ಉಳಿದ ಅರ್ಜಿಗಳೆಷ್ಟು? (ಫಲಾನುಭವಿಗಳ ಸಹಿತ ವಿವರ ನೀಡುವುದು)	46961 ಅರ್ಜಿಗಳು ವಿಲೇವಾರಿ ಮಾಡಲಾಗಿದ್ದು, ಬಾಕಿ ಅರ್ಜಿಗಳು ಇರುವುದಿಲ್ಲ.

ಸಂಖ್ಯೆ: AGRI-AML/97/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

23-03-2021 19:58

LAQ - 3558 ಅನುಬಂಧ 1ಅ

2017-18ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಕೃಷಿ ಇಲಾಖೆಯಿಂದ ವಿವಿಧ ಯೋಜನೆಗಳಡಿ ಸಹಾಯಧನ ಬಿಡುಗಡೆಗೊಳಿಸಿರುವ ರೈತ ಫಲಾನುಭವಿಗಳ ಸಂಖ್ಯೆಯ ವಿವರ

ಕ್ರ. ಸಂ.	ಯೋಜನೆಯ ಹೆಸರು	ಬಿಡುಗಡೆಯಾದ ಅನುದಾನ (ರೂ.ಗಳಲ್ಲಿ)	ಫಲಾನುಭವಿಗಳ ಸಂಖ್ಯೆ
1	ವಿಶೇಷ ಘಟಕ ಯೋಜನೆ ತಾ.ಪಂ.	121400.00	71
2	ಗಿರಿಜನ ಉಪ ಯೋಜನೆ ತಾ.ಪಂ.	23930.00	14
3	ಸಸ್ಯ ಸಂರಕ್ಷಣಾ ತಾ.ಪಂ. ರೈತರಿಗೆ ಸಹಾಯ ಯೋಜನೆ (ಸಾಮಾನ್ಯ)	93243.00	189
4	ಸಾವಯವ ಗೊಬ್ಬರ ಜಿಲ್ಲಾ ವಲಯ	133000.00	41
5	ಕೃಷಿ ಯಾಂತ್ರೀಕರಣ ಯೋಜನೆ ಜಿಲ್ಲಾ ವಲಯ (ಸಾಮಾನ್ಯ)	122935.00	190
6	ಎನ್.ಎಂ.ಓ.ಪಿ. ಜಿಲ್ಲಾ ವಲಯ	703800.00	1380
7	ಕೃಷಿ ಯಾಂತ್ರೀಕರಣ ರಾಜ್ಯ ವಲಯ (ಸಾಮಾನ್ಯ)	16362678.10	722
8	ಕೃಷಿ ಯಾಂತ್ರೀಕರಣ ರಾಜ್ಯ ವಲಯ (ಎಸ್.ಸಿ.ಪಿ)	5099980.58	204
9	ಕೃಷಿ ಯಾಂತ್ರೀಕರಣ ರಾಜ್ಯ ವಲಯ (ಟಿ.ಎಸ್.ಪಿ.)	88000.00	4
10	ಕೃಷಿ ಯಾಂತ್ರೀಕರಣ ಪರಿಶಿಷ್ಟ ಜಾತಿ ಯೋಜನೆ (ರಾ.ವ)	4281976.60	42
11	ಕೃಷಿ ಯಾಂತ್ರೀಕರಣ ಗಿರಿಜನ ಉಪ ಯೋಜನೆ (ರಾ.ವ)	206250.75	9
12	ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ-ಸಾಮಾನ್ಯ (ರಾ.ವ)	4185747.00	72
13	ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ-ಎಸ್.ಸಿ.ಪಿ (ರಾ.ವ)	1450900.00	25
14	ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ-ಟಿ.ಎಸ್.ಪಿ (ರಾ.ವ)	76950.00	3
15	ಕೃಷಿ ಯಂತ್ರಧಾರೆ ಯೋಜನೆ (ರಾ.ವ)	482710.00	2
16	ಎಸ್.ಎಂ.ಎ.ಎಂ. ಯೋಜನೆ (ಸಾಮಾನ್ಯ) (ಕೇ.ವ)	7766158.43	268
17	ಎಸ್.ಎಂ.ಎ.ಎಂ. ಯೋಜನೆ (ಎಸ್.ಸಿ.ಪಿ) (ಕೇ.ವ)	1852567.16	137
18	ಎಸ್.ಎಂ.ಎ.ಎಂ. ಯೋಜನೆ (ಟಿ.ಎಸ್.ಪಿ) (ಕೇ.ವ)	493637.66	14
19	ಬೀಜ ವಿತರಣೆ (ಸಾಮಾನ್ಯ) (ರಾ.ವ)	15000000.00	3850
20	ಬೀಜ ವಿತರಣೆ (ಎಸ್.ಸಿ.ಪಿ) (ರಾ.ವ)	10033330.00	1174
21	ಬೀಜ ವಿತರಣೆ (ಟಿ.ಎಸ್.ಪಿ) (ರಾ.ವ)	716666.00	128
22	ರಾಷ್ಟ್ರೀಯ ಎಣ್ಣೆ ಕಾಳು ಅಭಿವೃದ್ಧಿ ಎನ್.ಎಂ.ಓ.ಓ.ಪಿ (ಸಾಮಾನ್ಯ)	550565.21	83
23	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ (ಸಾಮಾನ್ಯ) (ರಾ.ವ)	2261659.07	3153
24	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ (ಎಸ್.ಸಿ.ಪಿ) (ರಾ.ವ)	672337.23	442
25	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ- ಸೂಕ್ಷ್ಮ ನೀರಾವರಿ ಯೋಜನ (ಸಾಮಾನ್ಯ)	13150017.00	667
26	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ- ಸೂಕ್ಷ್ಮ ನೀರಾವರಿ ಯೋಜನೆ (ಎಸ್.ಸಿ.ಪಿ)	3899076.60	198
27	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ- ಸೂಕ್ಷ್ಮ ನೀರಾವರಿ ಯೋಜನೆ (ಟಿ.ಎಸ್.ಪಿ.)	220642.70	12
28	ಸೂಕ್ಷ್ಮ ನೀರಾವರಿ (ಆರ್.ಐ.ಡಿ.ಎಫ್)	2636989.78	142
29	ಕೃಷಿ ಭಾಗ್ಯ ಯೋಜನೆ (ಸಾಮಾನ್ಯ) (ರಾ.ವ)	76116662.00	891
	ಒಟ್ಟು	**168803809.87**	**14127**

LAQ - 3558 ಅನುಬಂಧ 1ಆ

2018-19ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಕೃಷಿ ಇಲಾಖೆಯಿಂದ ವಿವಿಧ ಯೋಜನೆಗಳಡಿ ಸಹಾಯಧನ ಬಿಡುಗಡೆಗೊಳಿಸಿರುವ ರೈತ ಫಲಾನುಭವಿಗಳ ಸಂಖ್ಯೆಯ ವಿವರ

ಕ್ರ. ಸಂ.	ಯೋಜನೆಯ ಹೆಸರು	ಬಿಡುಗಡೆಯಾದ ಅನುದಾನ (ರೂ. ಗಳಲ್ಲಿ)	ಫಲಾನುಭವಿಗಳ ಸಂಖ್ಯೆ
1	ವಿಶೇಷ ಘಟಕ ಯೋಜನೆ ತಾ.ಪಂ.	120813.00	68
2	ಗಿರಿಜನ ಉಪ ಯೋಜನೆ ತಾ.ಪಂ.	27000.00	15
3	ಸಸ್ಯ ಸಂರಕ್ಷಣಾ ತಾ.ಪಂ. ರೈತರಿಗೆ ಸಹಾಯ ಯೋಜನೆ (ಸಾಮಾನ್ಯ)	63051.72	69
4	ಸಾವಯವ ಗೊಬ್ಬರ ಜಿಲ್ಲಾ ವಲಯ	157729.00	13
5	ಕೃಷಿ ಯಾಂತ್ರೀಕರಣ ಯೋಜನೆ ಜಿಲ್ಲಾ ವಲಯ (ಸಾಮಾನ್ಯ)	735075.00	18
6	ಕೃಷಿ ಯಾಂತ್ರೀಕರಣ ರಾಜ್ಯ ವಲಯ (ಸಾಮಾನ್ಯ)	14197172.90	611
7	ಕೃಷಿ ಯಾಂತ್ರೀಕರಣ ರಾಜ್ಯ ವಲಯ (ಎಸ್.ಸಿ.ಪಿ)	4766520.00	165
8	ಕೃಷಿ ಯಾಂತ್ರೀಕರಣ ರಾಜ್ಯ ವಲಯ (ಟಿ.ಎಸ್.ಪಿ.)	76626.00	4
9	ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ-ಸಾಮಾನ್ಯ (ರಾ.ವ)	3303834.32	3195
10	ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ-ಎಸ್.ಸಿ.ಪಿ (ರಾ.ವ)	785203.57	121
11	ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ-ಟಿ.ಎಸ್.ಪಿ (ರಾ.ವ)	51300.00	2
12	ಎಸ್.ಎಂ.ಎ.ಎಂ. ಯೋಜನೆ (ಸಾಮಾನ್ಯ) (ಕೇ.ವ)	18415855.58	173
13	ಎಸ್.ಎಂ.ಎ.ಎಂ. ಯೋಜನೆ (ಎಸ್.ಸಿ.ಪಿ) (ಕೇ.ವ)	4361827.24	133
14	ಎಸ್.ಎಂ.ಎ.ಎಂ. ಯೋಜನೆ (ಟಿ.ಎಸ್.ಪಿ) (ಕೇ.ವ)	71050.00	2
15	ಬೀಜ ವಿತರಣೆ (ಸಾಮಾನ್ಯ) (ರಾ.ವ)	7307644.55	1780
16	ಬೀಜ ವಿತರಣೆ (ಎಸ್.ಸಿ.ಪಿ) (ರಾ.ವ)	4516642.96	1137
17	ಬೀಜ ವಿತರಣೆ (ಟಿ.ಎಸ್.ಪಿ) (ರಾ.ವ)	65684.21	78
18	ರಾಷ್ಟ್ರೀಯ ಎಣ್ಣೆ ಕಾಳು ಅಭಿವೃದ್ಧಿ ಎನ್.ಎಂ.ಓ.ಓ.ಪಿ (ಸಾಮಾನ್ಯ)	194727.69	62
19	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ (ಸಾಮಾನ್ಯ) (ರಾ.ವ)	369712.86	300
20	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ (ಎಸ್.ಸಿ.ಪಿ) (ರಾ.ವ)	121724.47	85
21	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ (ಟಿ.ಎಸ್.ಪಿ) (ರಾ.ವ)	3000.00	2
22	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ- ಸೂಕ್ಷ್ಮ ನೀರಾವರಿ ಯೋಜನೆ (ಸಾಮಾನ್ಯ)	51338654.00	2775
23	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ- ಸೂಕ್ಷ್ಮ ನೀರಾವರಿ ಯೋಜನೆ (ಎಸ್.ಸಿ.ಪಿ)	10382750.00	552
24	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ- ಸೂಕ್ಷ್ಮ ನೀರಾವರಿ ಯೋಜನೆ (ಟಿ.ಎಸ್.ಪಿ.)	194952.00	10
25	ಸೂಕ್ಷ್ಮ ನೀರಾವರಿ (ಆರ್.ಐ.ಡಿ.ಎಫ್)	2899197.00	55
26	ಆರ್.ಕೆ.ವಿ.ವಾಯ್ ಭೂ ಚೇತನ ಯೋಜನೆ (ಸಾಮಾನ್ಯ)	399304.00	228
27	ಆರ್.ಕೆ.ವಿ.ವಾಯ್ ಭೂ ಚೇತನ ಯೋಜನೆ (ಎಸ್.ಸಿ.ಪಿ.)	1368314.47	1369
28	ಆರ್.ಕೆ.ವಿ.ವಾಯ್ ಭೂ ಚೇತನ ಯೋಜನೆ (ಟಿ.ಎಸ್.ಪಿ)	30556.66	30
29	ಕೃಷಿ ಭಾಗ್ಯ ಯೋಜನೆ (ಸಾಮಾನ್ಯ) (ರಾ.ವ)	45106000.00	501
	ಒಟ್ಟು	**171431923.20**	**13553**

LAQ - 3558 ಅನುಬಂಧ 1ಇ

2019-20ನೇ ಸಾಲಿನಲ್ಲಿ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಕೃಷಿ ಇಲಾಖೆಯಿಂದ ವಿವಿಧ ಯೋಜನೆಗಳಡಿ ಸಹಾಯಧನ ಬಿಡುಗಡೆಗೊಳಿಸಿರುವ ರೈತ ಫಲಾನುಭವಿಗಳ ಸಂಖ್ಯೆಯ ವಿವರ

ಕ್ರ. ಸಂ.	ಯೋಜನೆಯ ಹೆಸರು	ಬಿಡುಗಡೆಯಾದ ಅನುದಾನ (ರೂ. ಗಳಲ್ಲಿ)	ಫಲಾನುಭವಿಗಳ ಸಂಖ್ಯೆ
1	ವಿಶೇಷ ಘಟಕ ಯೋಜನೆ ತಾ.ಪಂ.	110565.00	63
2	ಗಿರಿಜನ ಉಪ ಯೋಜನೆ ತಾ.ಪಂ.	15795.00	9
3	ಸಾವಯವ ಗೊಬ್ಬರ ಜಿಲ್ಲಾ ವಲಯ	120000.00	60
4	ಕೃಷಿ ಯಾಂತ್ರೀಕರಣ ಯೋಜನೆ ಜಿಲ್ಲಾ ವಲಯ (ಸಾಮಾನ್ಯ)	635570.67	719
5	ಕೃಷಿ ಯಾಂತ್ರೀಕರಣ ಯೋಜನೆ ಜಿಲ್ಲಾ ವಲಯ (ಎಸ್.ಸಿ.ಪಿ)	14260.00	20
6	ಕೃಷಿ ಯಾಂತ್ರೀಕರಣ ರಾಜ್ಯ ವಲಯ (ಸಾಮಾನ್ಯ)	4971015.92	245
7	ಕೃಷಿ ಯಾಂತ್ರೀಕರಣ ರಾಜ್ಯ ವಲಯ (ಎಸ್.ಸಿ.ಪಿ)	3679535.70	242
8	ಕೃಷಿ ಯಾಂತ್ರೀಕರಣ ರಾಜ್ಯ ವಲಯ (ಟಿ.ಎಸ್.ಪಿ.)	31446.00	2
9	ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ-ಸಾಮಾನ್ಯ (ರಾ.ವ)	2119179.00	1996
10	ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ-ಎಸ್.ಸಿ.ಪಿ (ರಾ.ವ)	1927299.00	1370
11	ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ-ಟಿ.ಎಸ್.ಪಿ (ರಾ.ವ)	32198.00	28
12	ಕೃಷಿ ಯಂತ್ರಧಾರೆ ಯೋಜನೆ (ರಾ.ವ)	0.00	0
13	ಎಸ್.ಎಂ.ಎ.ಎಂ. ಯೋಜನೆ (ಸಾಮಾನ್ಯ) (ಕೇ.ವ)	35168571.20	697
14	ಎಸ್.ಎಂ.ಎ.ಎಂ. ಯೋಜನೆ (ಎಸ್.ಸಿ.ಪಿ) (ಕೇ.ವ)	4507387.00	236
15	ಎಸ್.ಎಂ.ಎ.ಎಂ. ಯೋಜನೆ (ಟಿ.ಎಸ್.ಪಿ) (ಕೇ.ವ)	82594.00	7
16	ಬೀಜ ವಿತರಣೆ (ಸಾಮಾನ್ಯ) (ರಾ.ವ)	5348115.87	734
17	ಬೀಜ ವಿತರಣೆ (ಎಸ್.ಸಿ.ಪಿ) (ರಾ.ವ)	1328006.49	408
18	ಬೀಜ ವಿತರಣೆ (ಟಿ.ಎಸ್.ಪಿ) (ರಾ.ವ)	10550.00	104
19	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ (ಸಾಮಾನ್ಯ) (ರಾ.ವ)	1194372.83	8030
20	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ (ಎಸ್.ಸಿ.ಪಿ) (ರಾ.ವ)	293576.12	1572
21	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ (ಟಿ.ಎಸ್.ಪಿ) (ರಾ.ವ)	21185.66	65
22	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ- ಸೂಕ್ಷ್ಮ ನೀರಾವರಿ ಯೋಜನೆ (ಸಾಮಾನ್ಯ)	24262385.00	1225
23	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ- ಸೂಕ್ಷ್ಮ ನೀರಾವರಿ ಯೋಜನೆ (ಎಸ್.ಸಿ.ಪಿ)	6715530.00	345
24	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ- ಸೂಕ್ಷ್ಮ ನೀರಾವರಿ ಯೋಜನೆ (ಟಿ.ಎಸ್.ಪಿ.)	437694.00	24
25	ಆರ್.ಕೆ.ವಿ.ವಾಯ್ ಭೂ ಚೇತನ ಯೋಜನೆ (ಸಾಮಾನ್ಯ)	573283.00	619
26	ಆರ್.ಕೆ.ವಿ.ವಾಯ್ ಭೂ ಚೇತನ ಯೋಜನೆ (ಎಸ್.ಸಿ.ಪಿ.)	293052.00	317
27	ಆರ್.ಕೆ.ವಿ.ವಾಯ್ ಭೂ ಚೇತನ ಯೋಜನೆ (ಟಿ.ಎಸ್.ಪಿ)	8233.00	8
29	ಕೃಷಿ ಭಾಗ್ಯ ಯೋಜನ (ರಾ.ವ)	37842000.00	592
	ಒಟ್ಟು	**131743400.46**	**19737**

ಕರ್ನಾಟಕ ವಿಧಾನ ಸಭೆ

15ನೇ ವಿಧಾನಸಭೆ

9ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3578
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್.(ದೇವನಹಳ್ಳಿ)
ಉತ್ತರಿಸುವ ದಿನಾಂಕ	:	24-03-2021
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರ
(ಅ)	ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳಡಿಯಲ್ಲಿ ಗ್ರಾಮ ಪಂಚಾಯತಿಗಳಿಗೆ ಬಂದಿರುವ ಅನುದಾನವೆಷ್ಟು; (ಕ್ಷೇತ್ರವಾರು, ಗ್ರಾಮ ಪಂಚಾಯತಿವಾರು ಮಾಹಿತಿ ನೀಡುವುದು)	ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ 2017-18ನೇ ಸಾಲಿನಿಂದ 2019-20ನೇ ಸಾಲಿನವರೆಗೆ ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳಡಿಯಲ್ಲಿ ಗ್ರಾಮ ಪಂಚಾಯತಿಗಳಿಗೆ ಬಂದಿರುವ ಅನುದಾನದ ವಿವರ ಹಾಗೂ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.
(ಆ)	ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನದಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; (ವಿಧಾನ ಸಭಾ ಕ್ಷೇತ್ರವಾರು, ಗ್ರಾಮ ಪಂಚಾಯತಿ ಮಾಹಿತಿ ನೀಡುವುದು)	
(ಇ)	ಕೆಲವೊಂದು ಗ್ರಾಮ ಪಂಚಾಯತಿಗಳಲ್ಲಿ ಅನುದಾನ ಸರಿಯಾಗಿ ಬಳಕೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹ ಗ್ರಾಮ ಪಂಚಾಯತಿಗಳ ಪೂರ್ಣ ಮಾಹಿತಿ ನೀಡುವುದು;	ಇಲ್ಲ.
(ಈ)	ಹಾಗಿದ್ದಲ್ಲಿ, ಅಂತಹ ಗ್ರಾಮ ಪಂಚಾಯತಿ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ? (ಮಾಹಿತಿ ನೀಡುವುದು)	ಉದ್ಭವಿಸುವುದಿಲ್ಲ.

ಸಂಖ್ಯೆ: ಗ್ರಾಅಪಂರಾ 162 ಜಿಪಸ 2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಅನುಬಂಧ

ಯೋಜನೆ: 14ನೇ ಹಣಕಾಸು ಆಯೋಗ ಅನುದಾನ

(ರೂ. ಗಳಲ್ಲಿ)

ಕ್ರ.ಸಂ	ಜಿಲ್ಲೆ	ತಾಲ್ಲೂಕು	ಗ್ರಾಮ ಪಂಚಾಯತಿ	2017-18		2018-19		2019-20	
				ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ	ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು	ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ	ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು	ಕೇಂದ್ರ ಸರ್ಕಾರದಿಂದ ಬಂದಿರುವ ಅನುದಾನ	ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು
1	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಆಲೂರು ದುದ್ದನಹಳ್ಳಿ	1966051	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ 'ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್. ಚರಂಡಿ ನಿರ್ಮಾಣ ಮತ್ತು ನಿರ್ವಹಣೆ, ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.	2288667	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ 'ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ. ಕುಡಿಯುವ ನೀರಿನ ಪೈಪ್‌ಲೈನ್. ಚರಂಡಿ ನಿರ್ಮಾಣ ಮತ್ತು ನಿರ್ವಹಣೆ. ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.	3088116	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ 'ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್. ಚರಂಡಿ ನಿರ್ಮಾಣ ಮತ್ತು ನಿರ್ವಹಣೆ. ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.
2	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಅಣ್ಣೇಶ್ವರ	2924283		3402958		4592907	
3	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಆವತಿ	2566247		2986519		4030219	
4	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಬೆಟ್ಟಕೋಟೆ	1997351		1639784		2211604	
5	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಬಿದಲೂರು	3884584		3189982		4304920	
6	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಬಿಜ್ಜವಾರ	2628222		2156914		2910118	
7	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಬೂದಿಗೆರೆ	3017876		3511610		4739055	
8	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಚನ್ನಹಳ್ಳಿ	2327010		1910878		2577619	
9	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಚನ್ನರಾಯಪಟ್ಟಣ	2770594		2275093		3069434	
10	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಗಂಗವಾರಚೌಡಪ್ಪನಹಳ್ಳಿ	3717816		3051797		4118523	
11	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಗೊಡ್ಡುಮುದ್ದೇನಹಳ್ಳಿ	4661279		3826643		5164842	
12	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಹಾರೋಹಳ್ಳಿ	2488907		2044757		2758214	
13	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಐ.ಬಸಾಪುರ	1667326		1941189		2618541	
14	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಜಾಲಿಗೆ	3679457		4281201		5779142	
15	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಕನ್ನಮಂಗಲ	4084704		4752261		6414760	
16	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಕಾರಹಳ್ಳಿ	4183500		3431416		4631701	
17	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಕೊಯಿರಾ	4066944		3337671		4504704	
18	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಕೋರಮಂಗಲ	2124749		1744623		2353125	
19	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಕುಂದಾಣ	2227363		2592567		3498558	
20	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಮಂಡಿಬೆಲೆ	2015927		2346528		3165802	
21	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ನಲ್ಲೂರು	3833574		3147027		4247078	
22	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ವೆಂಕಟಗಿರಿಕೋಟೆ	3354112		2753526		3715685	
23	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ವಿಶ್ವನಾಥಪುರ	4531890		3718559		5019223	
24	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ಯಲಿಯೂರು	2865357		3334414		4500230	
25	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಅರಳುಮಲ್ಲಿಗೆ	3989866	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ 'ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್, ಚರಂಡಿ ನಿರ್ಮಾಣ ಮತ್ತು ನಿರ್ವಹಣೆ, ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.	3275594	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ 'ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್, ಚರಂಡಿ ನಿರ್ಮಾಣ ಮತ್ತು ನಿರ್ವಹಣೆ, ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.	4420702	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ 'ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್, ಚರಂಡಿ ನಿರ್ಮಾಣ ಮತ್ತು ನಿರ್ವಹಣೆ, ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.
26	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಆರೂಢಿ	4270560		3499725		4724507	
27	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಬಾಶೆಟ್ಟಿಹಳ್ಳಿ	10239481		8409978		11353669	
28	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಭಕ್ತರಹಳ್ಳಿ	2629998		3061102		4132315	
29	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಚನ್ನಾದೇವಿ ಅಗ್ರಹಾರ	2834905		2324715		3137075	
30	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ದಗಾಜಿಜೋಗಹಳ್ಳಿ	4965864		4081399		5508015	
31	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ದೊಡ್ಡಬೆಳವಂಗಲ	3968428		3258451		4397411	
32	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ದೊಡ್ಡ ತುಮಕೂರು	2597646		2131585		2875923	
33	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಹಾಡೋನಹಳ್ಳಿ	3407434		2796206		3773523	
34	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಹಾದ್ರಿಪುರ	3173134		2603947		3513856	

				2017-18		2018-19		2019-20	
35	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಹಣಬೆ	4483112		3677519		4964019	
36	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಹೆಗ್ಗಡಿಹಳ್ಳಿ	3052682		2505474		3380799	
37	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಹೊನ್ನಾವರ	3880832		3181957		4295018	
38	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಹೊಸಹಳ್ಳಿ	5878565		4815872		6502633	
39	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಹುಲಿಕುಂಟೆ	2559758		2979286		4021416	
40	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಕಾಡನೂರು	1877657		1540018		2077158	
41	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಕನಸವಾಡಿ	4273200		3506298		4732562	
42	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಕಂಟನಕುಂಟೆ	4216718		3461989		4672364	
43	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಕೆಸ್ತೂರು	3908797		3206351		4327657	
44	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಕೋಡಿಗೆಹಳ್ಳಿ	7325671		6016469		8121601	
45	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಕೂನಘಟ್ಟ	4891334		4015002		5419291	
46	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಮಜರಾಹೊಸಹಳ್ಳಿ	3847893		3160117		4264493	
47	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಮೆಳೇಕೋಟೆ	4550186		3734667		5040775	
48	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಮೇಲಿನಜೂಗಾನಹಳ್ಳಿ(ಎಸ್.	3081675		3586277		4841384	
49	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ರಾಜಘಟ್ಟ	3781011		3104146		4189132	
50	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಸಕ್ಕರೆಗೊಲ್ಲಹಳ್ಳಿ	3012074		3505373		4732181	
51	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ಸಾಸಲು	3909808		3202123		4322908	
52	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ತೂಬಗೆರೆ	5049149		4140040		5589041	
53	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ	ತಿಪ್ಪೂರು	4370255		3581188		4834592	
54	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಅನುಗೊಂಡಹಳ್ಳಿ	2543878	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ 'ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್, ಚರಂಡಿ ನಿರ್ಮಾಣ ಮತ್ತು ನಿರ್ವಹಣೆ, ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.	2960426	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ 'ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್, ಚರಂಡಿ ನಿರ್ಮಾಣ ಮತ್ತು ನಿರ್ವಹಣೆ, ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.	3994719	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ 'ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್, ಚರಂಡಿ ನಿರ್ಮಾಣ ಮತ್ತು ನಿರ್ವಹಣೆ, ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.
55	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಬೈಲನರಸಾಪುರ	3553716		2919458		3939342	
56	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಚೊಕ್ಕಹಳ್ಳಿ	5206700		4275887		5771257	
57	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ದೇವನಗುಂದಿ	5023807		4124100		5566561	
58	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ದೊಡ್ಡಗಟ್ಟಿಗನಬ್ಬೆ	3708270		4314592		5823912	
59	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ದೊಡ್ಡಹುಲ್ಲೂರು	1781060		2073401		2796964	
60	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ದೊಡ್ಡನಲ್ಲಾಲ	4150930		3405785		4596872	
61	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ದೊಡ್ಡಅರಳಗೆರೆ	4463300		3659200		4939664	
62	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಗಣಗಲೂರು	3330288		2733147		3688284	
63	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಗಿಡ್ಡಪ್ಪನಹಳ್ಳಿ	4441982		3646997		4922165	
64	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಹೆತ್ತಕ್ಕಿ	2542594		2087204		2815884	
65	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಇಟ್ಟಸಂದ್ರ	4702590		3859659		5209582	
66	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಜಡಿಗೇನಹಳ್ಳಿ	3419064		2805187		3785764	
67	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಕಲ್ಕುಂಟೆಅಗ್ರಹಾರ	2847899		2337294		3153666	
68	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಕಂಬಳಿಪುರ	4246340		3484297		4702875	
69	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಖಾಜಿಹೊಸಹಳ್ಳಿ	4210868		3456107		4664622	
70	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಕುಂಬಳಹಳ್ಳಿ	5064527		4159603		5614147	
71	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಲಕ್ಕೊಂಡಹಳ್ಳಿ	2776358		3230860		4360211	
72	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಮುಗಬಾಳ	4651635		3817957		5153256	
73	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಮುತ್ಸಂದ್ರ	5055166		4149970		5601478	

				2017-18		2018-19		2019-20	
74	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ನಂದಗುಡಿ	5098772		4184784		5648670	
75	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ನೆಲವಾಗಿಲು	4179706		3431608		4631358	
76	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಒರೋಹಳ್ಳಿ	3594364		2950365		3981552	
77	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಸಮೇತನಹಳ್ಳಿ	6805731		5589649		7545195	
78	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಶಿವನಾಪುರ	5118805		4201035		5670692	
79	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ಸೂಲಿಬೆಲೆ	3841915		4469743		6032667	
80	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ತಾವರಕೆರೆ	3519217		2889801		3899554	
81	ಬೆಂಗಳೂರು ಗ್ರಾಮಾಂತರ	ಹೊಸಕೋಟೆ	ವಾಗಟ	5055443		4145355		5596176	
82	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಅಗಳಕುಪ್ಪೆ	3068954	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್, ಚರಂಡಿ ನಿರ್ಮಾಣ ಮತ್ತು ನಿರ್ವಹಣೆ, ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.	3571251	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್, ಚರಂಡಿ ನಿರ್ಮಾಣ ಮತ್ತು ನಿರ್ವಹಣೆ, ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.	4820366	ಎಲ್ಲಾ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಮಾರ್ಗಸೂಚಿಗಳನ್ವಯ ಕುಡಿಯುವ ನೀರು, ಗ್ರಾಮೀಣ ರಸ್ತೆಗಳ ನಿರ್ವಹಣೆ, ಕೊಳವೆ ಬಾವಿಗಳ ಪಂಪು ಮೋಟಾರ್ ಅಳವಡಿಕೆ ಮತ್ತು ನಿರ್ವಹಣೆ, ಕುಡಿಯುವ ನೀರಿನ ಪೈಪ್‌ಲೈನ್, ಚರಂಡಿ ನಿರ್ಮಾಣ ಮತ್ತು ನಿರ್ವಹಣೆ, ರ್‍ಯಾಂಪ್ ನಿರ್ಮಾಣ, ಸೋಲಾರ್ ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಇತ್ಯಾದಿ ಕಾಮಗಾರಿಗಳನ್ನು ತೆಗದುಕೊಳ್ಳಲಾಗಿದೆ.
83	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಅರೇಬೊಮ್ಮನಹಳ್ಳಿ	3397329		2786600		3760800	
84	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಅರಿಸಿನ ಕುಂಟೆ	2536050		5917387		7987180	
85	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಬಸವನಹಳ್ಳಿ	1229654		2870300		3872756	
86	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಬೂದಿಹಾಲ್	3415368		3973995		5363963	
87	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ದೊಡ್ಡಬೆಲೆ	3090534		2536180		3422353	
88	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಗೊಲ್ಲಹಳ್ಳಿ	4342080		3564195		4810519	
89	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಹಸಿರುವಳ್ಳಿ	3377048		2770436		3738846	
90	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಹೊನ್ನೇನಹಳ್ಳಿ	3327909		2728541		3682591	
91	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಕಳಲುಘಟ್ಟ	3535309		2902412		3916697	
92	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಕೊಡಿಗೇಹಳ್ಳಿ	3154692		2584671		3488585	
93	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಕುಲುವನಹಳ್ಳಿ	4229160		3472257		4686190	
94	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಮಣ್ಣೆ	2356337		2742553		3701170	
95	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಮರಳಕುಂಟೆ	3155918		2587255		3491826	
96	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ನರಸೀಪುರ	3710677		3044299		4108680	
97	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಶಿವಗಂಗೆ	3826032		3138629		4236199	
98	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಶ್ರೀನಿವಾಸಪುರ	3108159		2550120		3441273	
99	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಸೋಲದೇವನಹಳ್ಳಿ	3914948		3208122		4330685	
100	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಸೋಂಪುರ	5402745		4435686		5987282	
101	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಟಿ. ಬೇಗೂರು	4099386		3365623		4542232	
102	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ತ್ಯಾಮಗೊಂಡ್ಲು	4448446		3655217		4932751	
103	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ವಾಜರಹಳ್ಳಿ	4122388		2655361		3582576	
104	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ವಿಶ್ವೇಶ್ವರ ಪುರ	4508745		5732640		7738317	
105	ಬೆಂಗಳೂರು ಗ್ರಾಮಾಂತರ	ನೆಲಮಂಗಲ	ಯಂಟಗಾನಹಳ್ಳಿ	2024173		4723321		6376616	
		ಒಟ್ಟು		391929783		352909974		476307682	

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್ (ದೇವನಹಳ್ಳಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3579
ಉತ್ತರಿಸುವ ಸಚಿವರು	:	ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು
ಉತ್ತರಿಸಬೇಕಾದ ದಿನಾಂಕ	:	24.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ವಿವಿಧ ಯೋಜನೆಗಳಡಿಯಲ್ಲಿ ಬಿಡುಗಡೆಯಾದ ಅನುದಾನವೆಷ್ಟು; ಅನುಷ್ಠಾನಗೊಳಿಸಿದ ಯೋಜನೆಗಳಾವುವು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ಅನುಬಂಧ-1 ರಲ್ಲಿ ಒದಗಿಸಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನದಲ್ಲಿ ವರ್ಷವಾರು ಖರ್ಚು ಮಾಡಿದ ಅನುದಾನವೆಷ್ಟು; ಉಳಿಕೆ ಅನುದಾನವೆಷ್ಟು (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)	ಅನುಬಂಧ-2 ರಲ್ಲಿ ಒದಗಿಸಿದೆ.
ಇ)	ಸರ್ಕಾರವು ವಿವಿಧ ಯೋಜನೆಗಳಿಗೆ ನೀಡುತ್ತಿರುವ ಸಹಾಯಧನವೆಷ್ಟು; ಪರಿಶಿಷ್ಟ ಜಾತಿ/ ಪಂಗಡದವರಿಗೆ ನೀಡುತ್ತಿರುವ ವಿಶೇಷ ರಿಯಾಯಿತಿಗಳೇನು? (ಪೂರ್ಣ ಮಾಹಿತಿ ನೀಡುವುದು)	ಅನುಬಂಧ-3 ಮತ್ತು ಅನುಬಂಧ-4 ರಲ್ಲಿ ಒದಗಿಸಿದೆ.

ಸಂ: CI 87 JAKE 2021

(ಶ್ರೀಮಂತ ಬಾಳಾಸಾಹೇಬ ಪಾಟೀಲ)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಅನುಬಂಧ-1

ಕೈಮಗ್ಗ ಮತ್ತು ಜವಳಿ ಇಲಾಖೆ ಅನುದಾನದಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನದ ವಿವರ (2018-19 ರಿಂದ 2020-21)

[illegible]	ಜಿಲ್ಲೆ	ವಿಧಾನಸಭಾ ಕ್ಷೇತ್ರ	ಯೋಜನೆ (ಕೈಮಗ್ಗ, ವಿದ್ಯುತ್ ಮಗ್ಗ, ನೂತನ ಜವಳಿ ನೀತಿ (ಬಂಡವಾಳ & ತರಬೇತಿ), ಸಹಕಾರ ವಿಭಾಗ)	ಭೌತಿಕ	ಆರ್ಥಿಕ
2018-19	ಬೆಂಗಳೂರು ಗ್ರಾಮಾಂತರ ಜಿಲ್ಲೆ	ದೊಡ್ಡಬಳ್ಳಾಪುರ	ನೂಜನಿ[ತರಬೇತಿ]	1	9.50
			ಕೈಮಗ್ಗ	2	5.00
			ನೂಜನಿ[ಬಂಡವಾಳ]	4	191.70
		ದೇವನಹಳ್ಳಿ	ನೂಜನಿ[ತರಬೇತಿ]	2	23.74
			ಕೈಮಗ್ಗ	1	5.00
		ಹೊಸಕೋಟೆ	ನೂಜನಿ[ತರಬೇತಿ]	1	13.75
			ಕೈಮಗ್ಗ	1	5.00
		ನೆಲಮಂಗಲ	ನೂಜನಿ[ತರಬೇತಿ]	4	44.52
			ನೂಜನಿ[ಬಂಡವಾಳ]	1	13.45
			ಕೈಮಗ್ಗ	2	9.00
			ರಿಬೇಟ್	1	2.344
			ಒಟ್ಟು	**20**	**320.66**
2019-20	ಬೆಂಗಳೂರು ಗ್ರಾಮಾಂತರ ಜಿಲ್ಲೆ	ದೊಡ್ಡಬಳ್ಳಾಪುರ	ನೂಜನಿ[ತರಬೇತಿ]	1	0.00
			ಕೈಮಗ್ಗ	2	5.00
			ವಿದ್ಯುತ್ ಮಗ್ಗ	34	68.10
			ನೂಜನಿ[ಬಂಡವಾಳ]	2	16.36
			ಎಸ್ ಎಮ್ ಇ	1	45.75
		ದೇವನಹಳ್ಳಿ	ನೂಜನಿ[ತರಬೇತಿ]	2	14.25
			ಕೈಮಗ್ಗ	1	5.00
			ವಿದ್ಯುತ್ ಮಗ್ಗ	2	4.20
		ಹೊಸಕೋಟೆ	ನೂಜನಿ[ತರಬೇತಿ]	1	2.25
			ಕೈಮಗ್ಗ	1	5.00
		ನೆಲಮಂಗಲ	ನೂಜನಿ[ತರಬೇತಿ]	4	6.75
			ಕೈಮಗ್ಗ	2	10.00
			ರಿಬೇಟ್	1	0
			ವಿದ್ಯುತ್ ಮಗ್ಗ	1	1.5
			ಒಟ್ಟು	**55**	**186.50**
		ದೊಡ್ಡಬಳ್ಳಾಪುರ	ಕೈಮಗ್ಗ ಉದ್ದಿಮೆಗಳಿಗೆ ಸಹಾಯ	2	5
			ವಿದ್ಯುತ್ ಮಗ್ಗ	16	37.2
		ದೇವನಹಳ್ಳಿ	ನೂಜನಿ[ತರಬೇತಿ]	2	4.75
			ಕೈಮಗ್ಗ	1	4.00
			ವಿದ್ಯುತ್ ಮಗ್ಗ	3	5.70
		ಹೊಸಕೋಟೆ	ನೂಜನಿ[ತರಬೇತಿ]	1	2.75
			ಕೈಮಗ್ಗ	1	6.50
2020-21	ಬೆಂಗಳೂರು ಗ್ರಾಮಾಂತರ ಜಿಲ್ಲೆ	ನೆಲಮಂಗಲ	ನೂಜನಿ[ತರಬೇತಿ]	1	2.75
			ವಿದ್ಯುತ್ ಮಗ್ಗ	1	1.50
			ಎಲೆಕ್ಟ್ರಾನಿಕ್ ಜಕಾರ್ಡ್	2	4.50
			ಕೈಮಗ್ಗ	3	9.50
			ರಿಬೇಟ್	1	1.64
			ಒಟ್ಟು	**40**	**85.79**

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

ಅನುಬಂಧ–2

ಕೈಮಗ್ಗ ಮತ್ತು ಜವಳಿ ಇಲಾಖೆಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬಿಡುಗಡೆಯಾಗಿ ಖರ್ಚು ಮಾಡಿದ ಮತ್ತು ಉಳಿಕೆಯಾದ ಅನುದಾನದ ವಿವರಗಳು.

ಸಂ	ಕ್ಷೇತ್ರ	ವರ್ಷ								
		2018–19			2019–20			2020–21		
		ಬಿಡುಗಡೆ–ಯಾದ ಅನುದಾನ	ಖರ್ಚು ಮಾಡಿದ ಅನುದಾನ	ಉಳಿಕೆ ಅನುದಾನ	ಬಿಡುಗಡೆ–ಯಾದ ಅನುದಾನ	ಖರ್ಚು ಮಾಡಿದ ಅನುದಾನ	ಉಳಿಕೆ ಅನುದಾನ	ಬಿಡುಗಡೆ–ಯಾದ ಅನುದಾನ	ಖರ್ಚು ಮಾಡಿದ ಅನುದಾನ	ಉಳಿಕೆ ಅನುದಾನ
1	ದೊಡ್ಡಬಳ್ಳಾಪುರ	14.50	14.50	–	202.6	202.6	–	42.20	42.20	–
2	ದೇವನಹಳ್ಳಿ	28.74	28.74		21.93	21.93	–	14.45	14.45	–
3	ನೆಲಮಂಗಲ	69.31	69.31	–	55.25	45.25	10.00	19.89	19.89	–
4	ಹೊಸಕೋಟೆ	18.75	18.75	–	16.00	16.00	–	9.25	9.25	–
	ಒಟ್ಟು	**131.3**	**131.3**	–	**166.895**	**156.895**	**10.00**	**85.79**	**85.79**	–

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

ಅನುಬಂಧ-3

ಸಾಮಾನ್ಯ

ಕ್ರ.ಸಂ	ಯೋಜನೆ ಹಾಗೂ ಲೆಕ್ಕಶೀರ್ಷಿಕೆ	ಆಯವ್ಯಯ ಹಂಚಿಕೆ
1	ನೇಕಾರರ ವಿಶೇಷ ಪ್ಯಾಕೇಜ್ 2851-00-103-0-62-106	5581.00
2	ಸಿದ್ಧ ಉಡುಪು ನೀತಿ ಅನುಷ್ಠಾನ 2852-08-202-7-01-106	15160.00
3	ನೇಕಾರರ ವಿಶೇಷ ಪ್ಯಾಕೇಜ್-(ಕೆ.ಹೆಚ್.ಡಿ.ಸಿ) 2851-00-103-0-69-106	1133.00
4	ನೇಕಾರರ ಸಾಲ ಮನ್ನಾ 2851-00-103-0-71-100	7957.00
	ಒಟ್ಟು	29831.00

ವಿಶೇಷ ಘಟಕ ಯೋಜನೆ

ಕ್ರ.ಸಂ	ಯೋಜನೆ ಹಾಗೂ ಲೆಕ್ಕಶೀರ್ಷಿಕೆ	ಆಯವ್ಯಯ ಹಂಚಿಕೆ
1	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ 2851-00-001-0-06-422	29.00
2	ನೇಕಾರರ ವಿಶೇಷ ಪ್ಯಾಕೇಜ್ 2851-00-103-0-62-422	936.00
3	ಸಿದ್ಧ ಉಡುಪು ನೀತಿ ಅನುಷ್ಠಾನ 2852-08-202-7-01-422	3438.00
4	ನೇಕಾರರ ವಿಶೇಷ ಪ್ಯಾಕೇಜ್-(ಕೆ.ಹೆಚ್.ಡಿ.ಸಿ) 2851-00-103-0-69-422	260.00
	ಒಟ್ಟು	4663.00

ಗಿರಿಜನ ಉಪ ಯೋಜನೆ

1	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013ರಡಿ ಬಳಕೆಯಾಗದೆ ಇರುವ ಮೊತ್ತ 2851-00-001-0-06-423	12.00
2	ನೇಕಾರರ ವಿಶೇಷ ಪ್ಯಾಕೇಜ್ 2851-00-103-0-62-423	383.00
3	ಸಿದ್ಧ ಉಡುಪು ನೀತಿ ಅನುಷ್ಠಾನ 2852-08-202-7-01-423	1402.00
4	ನೇಕಾರರ ವಿಶೇಷ ಪ್ಯಾಕೇಜ್- (ಕೆ.ಹೆಚ್.ಡಿ.ಸಿ) 2851-00-103-0-69-423	107.00
	ಒಟ್ಟು	1904.00
	ಎಲ್ಲಾ ಒಟ್ಟು	36398.00

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

ಅನುಬಂಧ-4	
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ರೂಪಿಸುವ ಯೋಜನೆಗಳ ವಿವರ	
1	**ನೇಕಾರರ ವಿಶೇಷ ಪ್ಯಾಕೇಜ್**
ಅ	2 ವಿದ್ಯುತ್‌ಮಗ್ಗ – ಶೇ.90% ರಷ್ಟು ಗರಿಷ್ಟ ರೂ.2.70 ಲಕ್ಷ ಸಹಾಯಧನ
ಆ	ಸೈಜಿಂಗ್ ಘಟಕ ಸ್ಥಾಪನೆ – ಶೇ.90% ರಷ್ಟು ಗರಿಷ್ಟ ರೂ.500.00 ಲಕ್ಷ ಸಹಾಯಧನ
ಇ	ಎಲೆಕ್ಟ್ರಾನಿಕ್ ಜಕಾರ್ಡ್– ಶೇ.90% ರಷ್ಟು ಗರಿಷ್ಟ ರೂ.4.05 ಲಕ್ಷ ಸಹಾಯಧನ
ಈ	ಮಿನಿ ಪವರ್‌ಲೂಮ್ ಪಾರ್ಕ್ – ಕನಿಷ್ಠ 5 ಎಕರೆ ಜಾಗದಲ್ಲಿ ಎಸ್.ಪಿ.ವಿ. ಮೂಲಕ ಮೂಲಭೂತ ಸೌಕರ್ಯ ಒದಗಿಸುವುದು ಹಾಗೂ ಶೇ.90% ರಷ್ಟು ಗರಿಷ್ಟ ರೂ.300.00 ಲಕ್ಷ ಒದಗಿಸುವುದು.
ಉ	ಜವಳಿ ಉದ್ದಿಮೆಯಲ್ಲಿ ಎಸ್‌ಎಂಇ ಘಟಕ ಪ್ರಾರಂಭಿಸುವ ಉದ್ದಿಮೆದಾರರು / ಸಂಘ / ಸಂಸ್ಥೆ / ಎಸ್.ಪಿ.ವಿಗೆ – ಯೋಜನೆಯ ಗರಿಷ್ಟ ವೆಚ್ಚ ರೂ.500.00 ಲಕ್ಷ. ಇದರಲ್ಲಿ ಶೇ.75% ರಷ್ಟು ಬಂಡವಾಳ ಸಹಾಯಧನ ರೂ.375.00 ಲಕ್ಷ ಹಾಗೂ ಶೇ.15% ರಷ್ಟು ಬಡ್ಡಿ ಸಹಾಯಧನ ರೂ.75 ಲಕ್ಷ ಒದಗಿಸಲಾಗುವುದು.
ಊ	ವಿದ್ಯುತ್ ಮಗ್ಗಗಳಿಂದ ಶಬ್ದ ಮಾಲಿನ್ಯವನ್ನು ನಿಯಂತ್ರಿಸಲು ವಿದ್ಯುತ್‌ಮಗ್ಗಗಳ ಘಟಕಕ್ಕೆ ಅಕೋಸ್ಟಿಕ್ ಉಪಕರಣಗಳ ಅಳವಡಿಕೆಗಾಗಿ ಸಹಾಯಧನ – ಶೇ.75 ರಷ್ಟು ಗರಿಷ್ಟ ರೂ.2.00 ಲಕ್ಷ
ಋ	ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ನಿಧಿ ಯೋಜನೆಯನ್ನು ಜಾರಿಗೆ ತಂದು ಇಂಡಸ್ಟ್ರೀಯಲ್ ಸೀವಿಂಗ್ ಮೆಷಿನ್ ಖರೀದಿಗೆ ಸಹಾಯಧನ– ಗರಿಷ್ಟ ಬಂಡವಾಳ ರೂ.30,000/– ಶೇ.50 ರಷ್ಟು ಸಹಾಯಧನ
2	**ವಸತಿ ಕಾರ್ಯಾಗಾರ**– ಇಲಾಖೆಯು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸಹಯೋಗದೊಂದಿಗೆ ಕೈಮಗ್ಗ ಮತ್ತು ವಿದ್ಯುತ್ ಮಗ್ಗ ವಸತಿ ರಹಿತ ನೇಕಾರರಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಇಲಾಖಾ ವತಿಯಿಂದ ರೂ.1.00 ಲಕ್ಷ ಹಾಗೂ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಗ್ರಾಮೀಣ ಪ್ರದೇಶದವರಿಗೆ ರೂ.1.75ಲಕ್ಷ ಹಾಗೂ ನಗರ ಪ್ರದೇಶದವರಿಗೆ ರೂ.2.00 ಲಕ್ಷ ಸಹಾಯಧನ ನೀಡಲಾಗುವುದು.
3	**ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ**
ಅ	ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ತರಬೇತಿ ಕಾರ್ಯಕ್ರಮಗಳು.
ಆ	**ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–24 ರಡಿ** ಜವಳಿ ಉದ್ಯಮಿಗಳು ಬಂಡವಾಳ ಹೂಡಿಕೆ ಮಾಡಿ **ಅರ್ಹ ಸ್ಥಿರಾಸ್ತಿಗಳ ಮೇಲಿನ** ಬಂಡವಾಳ ಸಹಾಯಧನಕ್ಕೆ ಹೊಸ/ ವಿಸ್ತರಿಸಲಾಗುತ್ತಿರುವ/ ಆಧುನೀಕರಿಸುತ್ತಿರುವ/ ವೈವಿಧ್ಯಗೊಳಿಸುತ್ತಿರುವ ಉದ್ಯಮಗಳಿಗೆ ಸಾಲಾಧಾರಿತ ಬಂಡವಾಳ ಸಹಾಯಧನ, **ಬಡ್ಡಿ ಸಹಾಯಧನ, ವಿದ್ಯುತ್‌ಚ್ಛಕ್ತಿ** ಮರುಪಾವತಿ ಸಹಾಯಧನ, ಇ.ಎಸ್.ಐ/ಇ.ಪಿ.ಎಫ್ ಮರುಪಾವತಿ, **ಮುದ್ರಾಂಕ ಶುಲ್ಕ ವಿನಾಯಿತಿ & ನೋಂದಣಿ** ಶುಲ್ಕ ರಿಯಾಯಿತಿ ಮತ್ತು ವೇತನ ಸಹಾಯಧನ ನೀಡಲಾಗುವುದು. **ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ** ಬಂಡವಾಳ ಹೂಡಿಕೆ ಮೇಲೆ ಶೇ.5 ರಷ್ಟು **ಹೆಚ್ಚುವರಿ ಸಹಾಯಧನ ನೀಡಲಾಗುವುದು.**

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು ಕೈಮಗ್ಗ ಮತ್ತು ಜವಳಿ

22/3

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3600
ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)
ಉತ್ತರಿಸುವ ದಿನಾಂಕ : 24-03-2021
ಉತ್ತರಿಸುವ ಮಾನ್ಯ ಸಚಿವರು : ಕೃಷಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಇರುವ ಒಟ್ಟು ಕೃಷಿ ಭೂಮಿ ಎಷ್ಟು;	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿರುವ ಕೃಷಿ ಭೂಮಿ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
ಆ)	ರಾಜ್ಯದಲ್ಲಿ ಹನಿ ನೀರಾವರಿ ಹಾಗೂ ತುಂತುರು ನೀರಾವರಿ ಯೋಜನೆ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ ಎಷ್ಟು ಹೆಕ್ಟೇರ್ ಕೃಷಿ ಭೂಮಿಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ವ್ಯವಸ್ಥೆ ಮಾಡಲಾಗಿದೆ;	ರಾಜ್ಯ ದಲ್ಲಿ ಹನಿ ನೀರಾವರಿ ಹಾಗೂ ತುಂತುರು ನೀರಾವರಿ ಯೋಜನೆ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ 1.30 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ಹನಿ ನೀರಾವರಿ ಹಾಗೂ 15.69 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ತುಂತುರು ನೀರಾವರಿ ವ್ಯವಸ್ಥೆ ಮಾಡಲಾಗಿದೆ.
ಇ)	ಬಾಗೇಪಲ್ಲಿ ಕ್ಷೇತ್ರದಲ್ಲಿ ಇರುವ ಕೃಷಿ ಜಮೀನಿನ ಪೈಕಿ ಎಷ್ಟು ಜಮೀನನ್ನು ವ್ಯವಸಾಯ ಮಾಡದೇ ಖಾಲಿ ಬಿಡಲಾಗಿದೆ;	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿರುವ ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ, ಸಾಗುವಳಿ ಮಾಡದಿರುವ ಇತರೆ ಭೂಮಿ, ಬೀಳು ಭೂಮಿಯ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.
ಈ)	ಈ ಕ್ಷೇತ್ರದಲ್ಲಿ ಇನ್ನೂ ಎಷ್ಟು ಎಕರೆ ಜಮೀನಿಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಸೌಲಭ್ಯ ಇರುವುದಿಲ್ಲ;	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ 5808 ಎಕರೆ ಜಮೀನಿಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಸೌಲಭ್ಯ ಇರುವುದಿಲ್ಲ. ವಿವರಗಳನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ.
ಉ)	ಕೆಲ ರೈತರ ಹೆಸರಿನಲ್ಲಿ ಏಜೆನ್ಸಿಯವರು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಎರಡೂ ಕಡೆ ಸಹಾಯಧನ ಪಡೆಯುತ್ತಿರುವುದು ನಿಜವೇ? (ವಿವರ ನೀಡುವುದು)	ರೈತರ ಹೆಸರಿನಲ್ಲಿ ಏಜೆನ್ಸಿಯವರು ಕೃಷಿ ಮತ್ತು ತೋಟಗಾರಿಕೆ ಇಲಾಖೆ ಎರಡೂ ಕಡೆ ಸಹಾಯಧನ ಪಡೆಯುತ್ತಿರುವುದಿಲ್ಲ. ಇಲಾಖೆ ವತಿಯಿಂದ ಲಘು-ನೀರಾವರಿ ಯೋಜನೆಯಡಿ ಹನಿ/ತುಂತುರು ನೀರಾವರಿ ಘಟಕಗಳನ್ನು ವಿತರಿಸಲು ರೈತರ ವಿವರಗಳನ್ನು FRUITS ತಂತ್ರಾಂಶದಲ್ಲಿ ದಾಖಲಿಸಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳಿಂದ ಸದರಿ ಘಟಕಗಳನ್ನು ಪಡೆದಿಲ್ಲವೆಂದು ನಿರಾಕ್ಷೇಪಣಾ ಪತ್ರ (NOC)ವನ್ನು ಪಡೆದು ಘಟಕಗಳನ್ನು ವಿತರಿಸಲಾಗುತ್ತಿದೆ. ಆದ್ದರಿಂದ ಎರಡೂ ಇಲಾಖೆಗಳಲ್ಲಿ ಸಹಾಯಧನ ಪಡೆಯಲು ಅವಕಾಶವಿರುವುದಿಲ್ಲ.

ಸಂಖ್ಯೆ: ಕೃಇ/57/ಕೃಕೈಉ/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ-1

LAQ-3600

ಭೂ-ಬಳಕೆ (ಹೆಕ್ಟೇರ್ ಗಳಲ್ಲಿ)									
ಕ್ರ.ಸಂ.	ವಿಧಾನಸಭಾ ಕ್ಷೇತ್ರದ ಹೆಸರು	ತಾಲ್ಲೂಕು	ಭೌಗೋಳಿಕ ವಿಸ್ತೀರ್ಣ	ಅರಣ್ಯ	ಸಾಗುವಳಿಗೆ ಲಭ್ಯವಿಲ್ಲದಿರುವ ಭೂಮಿ	ಸಾಗುವಳಿ ಮಾಡದಿರುವ ಇತರೆ ಭೂಮಿ	ಬೀಳು ಭೂಮಿ	ಬಿತ್ತನೆ ಪ್ರದೇಶ	ನೀರಾವರಿಯಾದ ನಿವ್ವಳ ವಿಸ್ತೀರ್ಣ
1	ಬಾಗೇಪಲ್ಲಿ	ಬಾಗೇಪಲ್ಲಿ	90009	18458	14333	11597	6075	41421	4389
		ಗುಡಿಬಂಡೆ	21645	2534	3641	674	3959	11831	2123
ಒಟ್ಟು			**111654**	**20992**	**17974**	**12271**	**10034**	**53252**	**6512**

Source: Chikkaballapura district at a glance 2018–19 Published by: Directorate of Economics & statistics, Planning programe monitoring & statistics Department

ಅನುಬಂಧ–2

LAQ-3600

(ಎಕರೆ.ಗಳಲ್ಲಿ)

ಕ್ರಸಂ	ವಿಧಾನ ಸಭಾ ಕ್ಷೇತ್ರದ ಹೆಸರು	ತಾಲ್ಲೂಕು	ನೀರಾವರಿಯಾದ ನಿವ್ವಳ ವಿಸ್ತೀರ್ಣ	ಪ್ರಾರಂಭದಿಂದ ಈ ದಿನದವರೆಗೆ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಘಟಕಗಳನ್ನು ವಿತರಿಸಿರುವ ವಿಸ್ತೀರ್ಣ	ಹನಿ/ತುಂತುರು ನೀರಾವರಿ ಘಟಕಗಳನ್ನು ವಿತರಿಸಲು ಬಾಕಿ ಇರುವ ವಿಸ್ತೀರ್ಣ
1	ಬಾಗೇಪಲ್ಲಿ	ಬಾಗೇಪಲ್ಲಿ	10973	5545	5428
		ಗುಡಿಬಂಡೆ	5308	4928	380
ಒಟ್ಟು			**16280**	**10473**	**5808**

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3609
ಸದಸ್ಯರ ಹೆಸರು	:	ಶ್ರೀ ಅನಿಲ್ ಚಿಕ್ಕಮಾದು (ಹೆಚ್.ಡಿ.ಕೋಟೆ)
ಉತ್ತರಿಸುವವರು	:	ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
ಉತ್ತರಿಸಬೇಕಾದ ದಿನಾಂಕ	:	24/03/2021

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ಮಹಿಳೆಯರಿಗೆ / ಗರ್ಭಿಣಿಯರಿಗೆ ಹಾಗೂ ಮಕ್ಕಳಿಗೆ ಅಂಗನವಾಡಿಗಳ ಮೂಲಕ ನೀಡುವ ಪೂರಕ ಪೌಷ್ಟಿಕ ಆಹಾರದ ಯೋಜನೆಗಳ ಬಗ್ಗೆ ಗ್ರಾಮೀಣ ಭಾಗದಲ್ಲಿ ಸರಿಯಾದ ಮಾಹಿತಿ ಇಲ್ಲದೇ ಹಲವಾರು ಸೌಲಭ್ಯಗಳಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ.	ಹಾಗಿದ್ದಲ್ಲಿ, ಸಮರ್ಪಕ ಅರಿವು ಮೂಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಾದ 6 ತಿಂಗಳಿಂದ 6 ವರ್ಷದ ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ಇಲಾಖಾ ವತಿಯಿಂದ ಒದಗಿಸಲಾಗುವ ಯೋಜನೆಗಳ ಕುರಿತು ಅಂಗನವಾಡಿ ಕೇಂದ್ರಗಳಲ್ಲಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿನ ಗೋಡೆಗಳ ಮೇಲೆ ಗೋಡೆ ಬರಹಗಳ ಮೂಲಕ ಅಂಗನವಾಡಿ ಕೇಂದ್ರಗಳಲ್ಲಿ ನೀಡುವ ಆಹಾರ ಪದಾರ್ಥಗಳ ವಿವರಗಳನ್ನು ಬರೆಸಲಾಗಿದೆ. ಅಂಗನವಾಡಿ ಕೇಂದ್ರಗಳಲ್ಲಿ ದೊರಕುವ ಯೋಜನೆಗಳ ಕುರಿತಾಗಿ ತಾಯಂದಿರ ಸಭೆ, ಬಾಲವಿಕಾಸ ಸಮಿತಿ ಸಭೆ, ಪೌಷ್ಟಿಕ ಶಿಬಿರ, ಪೋಷಣ್ ಅಭಿಯಾನ ಹಾಗೂ ಇನ್ನಿತರ ಶಿಬಿರಗಳ ಮೂಲಕ ಸಮರ್ಪಕ ಅರಿವು ಮೂಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.
ಇ.	ಪ್ರಸಕ್ತ ಸಾಲಿನಲ್ಲಿ ಪೂರಕ ಪೌಷ್ಟಿಕ ಆಹಾರದ ಯೋಜನೆಗಳಿಗೆ ನಿಗದಿಪಡಿಸಿದ ಅನುದಾನವೆಷ್ಟು; ಬಿಡುಗಡೆಗೊಳಿಸಿದ ಅನುದಾನವೆಷ್ಟು; (ವಿವರ ನೀಡುವುದು.)	ಪೂರಕ ಪೌಷ್ಟಿಕ ಆಹಾರ ಕಾರ್ಯಕ್ರಮದಡಿ 2020-21ನೇ ಸಾಲಿಗೆ ರೂ.1971.74 ಕೋಟಿಗಳ ಅನುದಾನ ಒದಗಿಸಿದ್ದು, ರೂ.1949.41 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ. ಈ ಪೈಕಿ ಫೆಬ್ರವರಿ-2021ರ ಅಂತ್ಯಕ್ಕೆ ರೂ.1918.94 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ.
ಈ.	ರಾಜ್ಯದಲ್ಲಿರುವ ಮಹಿಳಾ ಪೂರಕ ಪೌಷ್ಟಿಕ ಆಹಾರ ತಯಾರಿಕಾ ಘಟಕ (ಎಂ.ಎಸ್.ಪಿ.ಸಿ.) ಗಳ ಸಂಖ್ಯೆ ಎಷ್ಟು; ಯಾವುವು; (ವಿಳಾಸದೊಂದಿಗೆ ಸಂಪೂರ್ಣ ವಿವರ ನೀಡುವುದು.)	ರಾಜ್ಯದಲ್ಲಿ 137 ಮಹಿಳಾ ಪೂರಕ ಪೌಷ್ಟಿಕ ಆಹಾರ ತಯಾರಿಕಾ ಘಟಕ (ಎಂ.ಎಸ್.ಪಿ.ಸಿ.) ಗಳಿದ್ದು, ವಿಳಾಸವನ್ನು ಅನುಬಂಧದಲ್ಲಿ ಒದಗಿಸಿದೆ.
ಉ.	ಮಹಿಳಾ ಪೂರಕ ಪೌಷ್ಟಿಕ ಆಹಾರ ತಯಾರಿಕಾ ಘಟಕಗಳು ಸರಿಯಾದ ಸಮಯಕ್ಕೆ ಅಂಗನವಾಡಿಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡದೇ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುವುದಿಲ್ಲ

ಊ.	ಹಾಗಿದ್ದಲ್ಲಿ, ಶುದ್ಧ ಹಾಗೂ ಸರಿಯಾದ ಸಮಯಕ್ಕೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು.)	ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಆಹಾರದ ಮೆನುವನ್ನು ನಿರ್ಧರಿಸುತ್ತದೆ. ಮೆನುವಿನ ಆಧಾರದ ಮೇಲೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆಹಾರ ಪದಾರ್ಥಗಳಿಗೆ ಬೇಡಿಕೆಯನ್ನು ಸಲ್ಲಿಸುತ್ತಾರೆ. ಬೇಡಿಕೆಯಂತೆ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರ (ಎಂ.ಎಸ್.ಪಿ.ಸಿ.) ಗಳು ಆಹಾರ ಪದಾರ್ಥಗಳನ್ನು ಪ್ಯಾಕ್ ಮಾಡಿ ಒಂದು ತಿಂಗಳೊಳಗೆ ಸರಬರಾಜು ಮಾಡುತ್ತವೆ. ನಿಗದಿತ ಸಮಯದಲ್ಲಿ ಪೂರಕ ಪೌಷ್ಟಿಕ ಆಹಾರವು ಸರಬರಾಜಾಗುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳಲಾಗುತ್ತಿದೆ. ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುವ ಮುನ್ನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಭಾಗ ಮಟ್ಟದ ಪ್ರಯೋಗಾಲಯಗಳಲ್ಲಿ ಗುಣಮಟ್ಟದ ಬಗ್ಗೆ ಪರಿಶೀಲಿಸಿ ಖಚಿತಪಡಿಸಿದ ನಂತರವೇ ಸರಬರಾಜು ಮಾಡಲಾಗುತ್ತದೆ. ಸರಿಯಾದ ಪ್ರಮಾಣದಲ್ಲಿ ಮತ್ತು ನಿಗದಿತ ಸಮಯದಲ್ಲಿ ಆಹಾರ ಪದಾರ್ಥಗಳನ್ನು ಸರಬರಾಜು ಮಾಡುತ್ತಿರುವ ಬಗ್ಗೆ ಉಪ ನಿರ್ದೇಶಕರು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು / ಮೇಲ್ವಿಚಾರಕಿಯರು ಮತ್ತು ಬಾಲವಿಕಾಸ ಸಮಿತಿಯ ಸದಸ್ಯರುಗಳು ಖಚಿತಪಡಿಸಿಕೊಳ್ಳುತ್ತಿದ್ದಾರೆ.

ಸಂಖ್ಯೆ: ಮಮಇ 130 ಐಸಿಡಿ 2021

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ,
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅನಿಲ್ ಚಿಕ್ಕಮಾದು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-3609 ಗೆ ಅನುಬಂಧ

ಕ್ರ ಸಂ	ಜಿಲ್ಲೆಯ ಹೆಸರು	ಎಂ.ಎಸ್.ಪಿ.ಟಿ.ಸಿ. ಗಳ ಹೆಸರು ಮತ್ತು ವಿಳಾಸ
1	ಬಾಗಲಕೋಟೆ	ಬಾದಾಮಿ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ., ಕಮಟಗಿ ರಸ್ತೆ, ಹರದೊಳ್ಳಿ, ಬಸ್ ಡಿಪೋ ಹತ್ತಿರ, ಗುಳೇದಗುಡ್ಡ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
2		ಬಾಗಲಕೋಟೆ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ., ಡಿ.ನಂ. ಸಿ-3. ವಿದ್ಯಾಗಿರಿ, ಬಾಗಲಕೋಟೆ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
3		ಬೀಳಗಿ ಮತ್ತು ಮುಧೋಳ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ., ಡಿ.ನಂ. 3ಎನ್. ಮಂಟೂರು ಗ್ರಾಮ ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
4		ಹುನಗುಂದ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ., ಡಿ.ನಂ. 1518/ಎ. ಸೂಳೇಬಾವಿ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
5		ಜಮಖಂಡಿ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ., ಡಿ.ನಂ. 2418. ಚಿಕ್ಕರಗಲ್ಲಿ, ಶಿವಾಜಿ ಸರ್ಕಲ್, ಬಿಜಾಪುರ ರಸ್ತೆ, ಜಮಖಂಡಿ, ಬಾಗಲಕೋಟೆ ಜಿಲ್ಲೆ
6	ಬೆಂಗಳೂರು (ಗ್ರಾ) ಜಿಲ್ಲೆ	ದೇವನಹಳ್ಳಿ ಮತ್ತು ಹೊಸಕೋಟೆ ತಾಲೂಕು ಎಂಎಸ್‌ಪಿಟಿಸಿ ಗೋಕರೆ ಗ್ರಾಮ ದೇವನಹಳ್ಳಿ ತಾಲೂಕು
7		ದೊಡ್ಡಬಳ್ಳಾಪುರ ಮತ್ತು ನೆಲಮಂಗಲ ತಾಲೂಕು ಎಂಎಸ್‌ಪಿಟಿಸಿ ಅಗಸರಹಳ್ಳಿ ಗ್ರಾಮ ನೆಲಮಂಗಲ ತಾಲೂಕು
8	ಬೆಂಗಳೂರು ನಗರ ಜಿಲ್ಲೆ	ಬೆಂಗಳೂರು ಉತ್ತರ, ಕೇಂದ್ರ, ರಾಜ್ಯ ಮತ್ತು ಸುಮಂಗಲಿ ಸೇವಾಶ್ರಮ ತಾಲೂಕು ಎಂಎಸ್‌ಪಿಟಿಸಿ ಹಳೆಯ ರೈಲ್ವೇ ರಸ್ತೆ ಸರ್ಜಾಪುರ ಬಾಗಲೂರು ರೋಡ್ ಆನೇಕಲ್ ತಾಲೂಕು
9		ಚಿಕ್ಕಬಾಣಾವಾರ ಗ್ರಾಮ ಬೆಂಗಳೂರು ಉತ್ತರ
10	ಬೆಳಗಾವಿ	ಅಥಣಿ ತಾಲೂಕಾ ಎಂ.ಎಸ್.ಪಿ.ಟಿ.ಸಿ.ಕೋಲ್ಡ್ ಸ್ಟೋರೇಜ್, ಮಿನಿ ವಿಧಾನ ಸೌಧ ಹತ್ತಿರ, ವಿಜಯಪೂರ ರೋಡ್, ಅಥಣಿ.
11		ಬೈಲಹೊಂಗಲ ತಾಲೂಕಾ ಎಂ.ಎಸ್.ಪಿ.ಟಿ.ಸಿ ಡೋರ್ ನಂ. 438, ಬೈಲವಾಡ ಕ್ರಾಸ್, ಬೈಲಹೊಂಗಲ
12		ಬೆಳಗಾವಿ ಗ್ರಾಮೀಣ ಮತ್ತು ನಗರ ತಾಲೂಕಾ ಎಂ.ಎಸ್.ಪಿ.ಟಿ.ಸಿ ಎನ್.ಎಚ್-4 ರೋಡ್, ಬಿಸ್ಕಿಟ್ ಫ್ಯಕ್ಟ್ರಿ ಹತ್ತಿರ, ಹಲಗಾ ಬೆಳಗಾವಿ
13		ಚಿಕ್ಕೋಡಿ ತಾಲೂಕಾ ಎಂ.ಎಸ್.ಪಿ.ಟಿ.ಸಿ ಡೋರ್ ನಂ. 888, ಬಸ್ ಸ್ಟ್ಯಾಂಡ್ ಹತ್ತಿರ, ಅಂಕಲಗಿ, ಗ್ರಾಮ, ಚಿಕ್ಕೋಡಿ.
14		ಗೋಕಾಕ ತಾಲೂಕಾ ಎಂ.ಎಸ್.ಪಿ.ಟಿ.ಸಿ ಸಿದ್ದಲಿಂಗೇಶ್ವರ ಕಲ್ಯಾಣ ಮಂಟಪ, ನಬಾಪೂರ ಖನಗಾಂವ ಪೋಸ್ಟ ತಾಲೂಕಾ ಗೋಕಾಕ.
15		ಹುಕ್ಕೇರಿ ತಾಲೂಕು ಎಂ.ಎಸ್.ಪಿ.ಟಿ.ಸಿ ಡೋರ್ ನಂ : 82:1ಎ ಚಿಕ್ಕೋಡಿ ರೋಡ್, ಗವನಾಳ, ಸಂಕೇಶ್ವರ
16		ಖಾನಾಪೂರ ತಾಲೂಕು ಎಂ.ಎಸ್.ಪಿ.ಟಿ.ಸಿ ಪಾರಿಶ್ವಾಡ ಗ್ರಾಮ, ಖಾನಾಪೂರ.
17		ರಾಯಬಾಗ ತಾಲೂಕ ಎಂ.ಎಸ್.ಪಿ.ಟಿ.ಸಿ ಪಾಕಳಿ ತೋಟ, ಚಿಂಚಲಿ ಪೋಸ್ಟ ತಾಲೂಕ ರಾಯಬಾಗ.
18		ರಾಮದುರ್ಗ ತಾಲೂಕು ಎಂ.ಎಸ್.ಪಿ.ಟಿ.ಸಿ ಡೋರ್ ನಂ1892/ಎ1-12, ನವಿಪೇಟ, ವೆಂಕಟೇಸ ಟಾಕೀಜ ಹಿಂದೆ ರಾಮದುರ್ಗ.

1		ಬಾದಾಮಿ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ., ಕಮಟಗಿ ರಸ್ತೆ, ಹರದೊಳ್ಳಿ, ಬಸ್ ಡಿಪೋ ಹತ್ತಿರ, ಗುಳೇದಗುಡ್ಡ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ
19		ಸವದತ್ತಿ ತಾಲೂಕು ಎಂ.ಎಸ್.ಪಿ.ಟಿ.ಸಿ ಡೋರ್ ನಂ:2324 ವಾರ್ಡ ನಂ:1, ಯರಗಟ್ಟಿ ತಾಲೂಕು ಸವದತ್ತಿ.
20	ಬಳ್ಳಾರಿ	ಸಂಡೂರು, ತಾಲ್ಲೂಕು ಬಂಡ್ರಿ ವಿಲೇಜ್ ಸಂಡೂರು,ತಾಲ್ಲೂಕು ಬಳ್ಳಾರಿ ಜಿಲ್ಲೆ
21		ಕೂಡ್ಲಿಗಿ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ, #171, ಸರ್ವೆ ನಂ.1133,ಖಾನ ಹೊಸಹಳ್ಳಿ, ಕೂಡ್ಲಿಗಿ ತಾಲ್ಲೂಕು ಬಳ್ಳಾರಿ ಜಿಲ್ಲೆ
22		ಹೊಸಪೇಟೆ ತಾಲ್ಲೂಕು, ಎಂ.ಎಸ್.ಪಿ.ಟಿ.ಸಿ, ಮರಿಯಮ್ಮನ ಹಳ್ಳಿ ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ
23		ಹೂವಿನಹಡಗಲಿ ತಾಲ್ಲೂಕು, ಎಂ.ಎಸ್.ಪಿ.ಟಿ.ಸಿ, 8ನೇ ವಾರ್ಡ್, ಹೊಸ ತಾಲ್ಲೂಕು ಕಛೇರಿ ಹೆದುರು ಹೊಲಗುಂದಿ ರೋಡ್, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ
24		ಬಳ್ಳಾರಿ ಗ್ರಾಮಾಂತರ ಮತ್ತು ನಗರ ತಾಲ್ಲೂಕು ಎಂ.ಎಸ್.ಪಿ.ಟಿ.ಸಿ, #3, ಡಿ.ನಾಗೇನಹಳ್ಳಿ, ಬಳ್ಳಾರಿ ತಾಲ್ಲೂಕು ಬಳ್ಳಾರಿ ಜಿಲ್ಲೆ
25		ಸಿರಗುಪ್ಪ ತಾಲ್ಲೂಕು , ಎಂ.ಎಸ್.ಪಿ.ಟಿ.ಸಿ ವಿಶ್ವಶೇಡ್, ನಿತ್ತುರ್, ರೋಡ್, ತೇಕ್ಕಲ ಕೋಟೆ, ಸಿರಿಗುಪ್ಪ ತಾಲ್ಲೂಕು, ಬಳ್ಳಾರಿ ಜಿಲ್ಲೆ
26		ಹಗರಿಬೊಮ್ಮನಹಳ್ಳಿ, ತಾಲ್ಲೂಕು ಎಂ.ಎಸ್.ಪಿ.ಟಿ.ಸಿ, ಪ್ಲಾಟ್ ನಂ.11, ವಾರ್ಡ್ ನಂ.6/74(10), ನೇತಾಜಿ ರೋಡ್, ವಿಷ್ಣು ಟಾಕೀಸ್ ಹಿಂಭಾಗ, ಹಗರಿಬೊಮ್ಮನಹಳ್ಳಿ , ಬಳ್ಳಾರಿ ಜಿಲ್ಲೆ
27	ಬೀದರ	ಬೀದರ ತಾಲುಕಾ MSPC ಕೋಳಾರ ಇಂಡಸ್ಟ್ರೀಯಲ ಎರಿಯಾ ಜಿ॥ಬೀದರ
28		ಭಾಲ್ಕಿ ತಾಲ್ಲೂಕ MSPC ಭಾತಾಂಬ್ರ ರೋಡ ತಾ॥ಭಾಲ್ಕಿ ಜಿ॥ಬೀದರ
29		ಬಸವಕಲ್ಯಾಣ ತಾಲುಕಾ MSPC ಪ್ಲಾಟ್ ನಂ.6/2002-03 ಪ್ರತಾಪೂರ ತಾ॥ ಬಸವಕಲ್ಯಾಣ ಜಿ॥ ಬೀದರ
30		ಹುಮನಾಬಾದ ತಾಲುಕಾ MSPC ಜನತಾನಗರ ಹ್ಮಡಗಿ 585329
31		ಸಂತಾಪುರ (ಔರಾದ) ತಾಲ್ಲೂಕ ಚನ್ನಬಸವೇಶ್ವರ ಚೌಕ ನಾಚಿದೆಡ ರೋಡ ಔರಾದ ತಾ॥ ಔರಾದ ಜಿ॥ಬೀದರ
